ಶ್ರೀಃ

"ಸತೀಹಿತೈಷಿಣೀ" ಸನ್ಮಾನಗ್ರಂಥಾವಳಿ ಸಂ. ೧.

ತಪತೀಕಲ್ಯಾಣಂ.



"ಆವಿರ್ಭಾವ ಕಲಶಜಲಧಾವಧ್ವರೇ ವಾಪಿ ಯಸ್ಯಾ |
ಸ್ಥಾನಂ ಯಸ್ಯಾಸ್ಸರಸಿಜವನಂ ವಿಷ್ಣುವಕ್ಷಸ್ಥಲಂ ವಾ |
ಭೂಮಾ ಯಸ್ಯಾ ಭುವನಮಖಿಲಂ ದೇವಿ ದಿವ್ಯಂ ಪದಂ ವಾ |
ಸ್ತೋಕಪ್ರಜ್ಞೈರನವಧಿಗುಣಾ ಸ್ತೂಯಸೇ ಸಾ ಕಥಂ ತ್ವಮ್ ||"

"ಸತೀಹಿತೈಷಿಣೀ" ಮಾತೃಮಂದಿರಂ

ನಂಜನಗೂಡು.

... ಪ್ರೋತ್ಸಾಹಕೊಡು
... ನೆ"ಯ ಅಧಿಕಾರಿಗಳು
... ಕಟಣೆ'ಯನ್ನು ನಮ್ಮ
... ಳಿಸಿರುವೆವು.

... ೕ ಇಸವಿಯಲ್ಲಿ ತಮಿಳು,
... ಬರೆಯಲ್ಪಡುವ ಅತ್ಯು
... ರುವ ಸ್ವರ್ಣಪದಕಗಳ
... ಒಳಪಟ್ಟು ನಡೆಯು

... ದು.

... ಕೆಳಗಣ ವಿಷಯಗಳನ್ನು
ಕ

... ric.)

... ನೇ ಇಸವಿಯ ಫೆಬ್ರವರಿ
೧೫ ... ಕಾರ್ಯದರ್ಶಿಗಳಿಗೆ ತಲುಪಬೇಕು.

(೪) ಪ್ರತಿ ಭಾಷೆಯಲ್ಲಿಯೂ ಅತ್ಯುತ್ತಮವಾಗಿ ಬರೆಯಲ್ಪಡುವ ನಾಟಕಕ್ಕೆ ಒಂದೊಂದು ಸ್ವರ್ಣಪದಕವು ಕೊಡಲ್ಪಡುವುದು.

(೫) ಮೇಲಾಟಕ್ಕೆ ಕಳುಹಿಸಲಾಗುವ ಪ್ರತಿ ನಾಟಕವೂ ಆ ಉದ್ದೇಶದಿಂದಲೇ ಬರೆಯಲ್ಪಟ್ಟುದಾಗಿದ್ದು ಅದು ಮೇಲಾಟಕ್ಕಾಗಿಯೇ ಬರೆಯಲ್ಪಟ್ಟುದೆಂದೂ ನೂತನ ಗ್ರಂಥವೆಂದೂ ಅದರ ರಚನೆಯಲ್ಲಿ ಯಾರೊಬ್ಬರ ಸಹಾಯವನ್ನೂ ಪಡೆದಿಲ್ಲವೆಂದೂ ಲೇಖಕರು ನಾಟಕದೊಂದಿಗೆ ಪ್ರತಿಜ್ಞಾಲೇಖನವನ್ನೂ (Solemn declaration) ಕಳುಹಿಸಿರಬೇಕು. ನಾಟಕದ ಕಥೆಯನ್ನು ಅವುದೊಂದು ಗ್ರಂಥದೊಳಗಿಂದ ತೆಗೆದುಕೊಂಡಿರುವ ಮಾತ್ರದಿಂದ ಅದರ ರಚನೆಯ ನೂತನತ್ವಕ್ಕೆ ಬಾಧಕವುಂಟಾದಂತೆ ಭಾವಿಸಲ್ಪಡಲಿಕ್ಕಿಲ್ಲ. ಆದರೆ ಕಥೆಯು ಸ್ವಕಪೋಲಕಲ್ಪಿತವಲ್ಲದ ಯಾವತ್ತು

(ಮುಂದಿನ ರಕ್ಷಾಪತ್ರದ ಕಡೆಯಲ್ಲಿ ನೋಡಬೇಕು.)

TAPATÎKALYÂNAM

PUBLISHED

BY

Srimati Tirumalamba

AT THE

Satheehitaishinee Mathrumandiram,

NANJANGUD.

First Edition 500 Copies.

PRINTED AT THE

DHARMA PRAKASH PRESS,

MANGALORE.

1918

Price 0-8-0.

ಶ್ರೀಃ

"ಸತೀಹಿತೈಷಿಣೀ" ಸನ್ಮಾನಗ್ರಂಥಾವಳಿ ಸಂ. ೧.

ತಪತೀಕಲ್ಯಾಣಂ.

(ನಾಟಕ)

ನಂಜನಗೂಡು

ಸತೀಹಿತೈಷಿಣೀ ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ ೫೦೦ ಪ್ರತಿಗಳು

ಮಂಗಳೂರು

ಧರ್ಮಪ್ರಕಾಶ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

೧೯೧೮

ು ೧-೮-೦

ಪ್ರಸ್ತಾವನೆ.

ಸುಹೃದರೆ!

"ಸತೀಹಿತೈಷಿಣೀ"ಯು ಹುಟ್ಟಿ ಮೂರು ನಾಲ್ಕು ವರ್ಷಗಳಾದುವು. ಹಿತೈಷಿಣಿಯ ಜತೆಯಲ್ಲಿ ನಂದಿನೀ, ಜನ್ಮವನ್ನೆತ್ತಿ ಎರಡು ವರ್ಷಗಳಾಗುತ್ತ ಬಂದಿತು. ಈ ವರೆಗೆ ಶಕ್ತಿವಂಚನೆಯಿಲ್ಲದೆ, ಯಥಾಮತಿಯಾಗಿ ಭಾಷಾಸೇವೆಯ ಮೂಲಕ ಸೋದರೀಸೇವೆಯನ್ನು ಮಾಡಿರುವ ವಿಚಾರವು ತಮ್ಮೆಲ್ಲರಿಗೂ ತಿಳಿದುದೇ ಆಗಿದೆಯಷ್ಟೆ; ಸತೀಹಿತೈಷಿಣಿಯಲ್ಲಿ ಈ ವರೆಗೆ ಬರಿಯ ಕಾದಂಬರಿಗಳೇ ಆಗಿರುವುದಲ್ಲದೆ ಮುಂದೆಯೂ ಕಾದಂಬರೀ ರೂಪದ ಗ್ರಂಥಗಳೇ ಆಗುವುದರಿಂದ ನಮ್ಮ ಸೋದರೀ ಸೋದರರಲ್ಲಿ ಬಹು ಮಂದಿ, ಸತೀಹಿತೈಷಿಣಿಯಲ್ಲಿ ನಾಟಕ, ಪ್ರಬಂಧ, ಯಕ್ಷಗಾನ ಪುಸ್ತಕಗಳನ್ನೂ ಪ್ರಕಟಿಸಬೇಕೆಂದು ಸೂಚಿಸುತ್ತ ಬಂದಿರುವುದರಿಂದಲೂ, ಸತೀಹಿತೈಷಿಣಿಯಲ್ಲಿ ಸ್ತ್ರೀಯರಿಗೆ ನೀತಿಬೋಧಕವಾದ ಸಾಮಾಜಿಕ, ಸಾಮಯಿಕ ಆಚಾರವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳಲ್ಲದೆ ಇತರ ಶೃಂಗಾರಾದಿ ರಸಾತ್ಮಕ ಗ್ರಂಥಗಳಿಗೆ ಅವಕಾಶವಿಲ್ಲದುದರಿಂದಲೂ, ಮತ್ತು ಬಹು ಮಂದಿ ಸೋದರೀ ಸೋದರರ ಅಭಿಪ್ರಾಯಗಳನ್ನು ನಿರಾಕರಿಸುವುದು ಸರಿಯಲ್ಲವೆಂದೂ ಈ ಆಶ್ವಯುಜದಿಂದ "ಸನ್ಮಾನಗ್ರಂಥಾವಳಿ" ಎಂಬ ಶಾಖೆಯನ್ನೇರ್ಪಡಿಸಲು ನಿಶ್ಚಯಿಸಿ, ಪ್ರಥಮ ಪುಸ್ತಕವಾಗಿ ಈ ತಪತೀಕಲ್ಯಾಣವನ್ನು ಪ್ರಕಾಶಕ್ಕೆ ತಂದಿರುವೆವು.

ಈ ನಾಟಕಕ್ಕೆ ಕರ್ತರು, ದಿವಂಗತ, ಸರಗೂರು **ವೆಂಕಟ ವರದಾಚಾರ್ಯರು.** ಈ ಗ್ರಂಥಕರ್ತರು ಈ ನಾಟಕವಲ್ಲದೆ ಇನ್ನೂ ಕೆಲವು ಯಕ್ಷಗಾನ ಗ್ರಂಥಗಳನ್ನೂ ಹಲವು ಭಗವನ್ನಾಮಗಳನ್ನೂ ವಿರಚಿಸಿರುವರು. ಇವರ ಕವಿತೆಯು ಪ್ರೌಢವಾಗಿಯೂ ರಸವತ್ತಾಗಿಯೂ ಇರುವುದು.

ಗ್ರಂಥಕರ್ತರು, — ಈ ನಾಟಕದ ಪ್ರಾರಂಭದಲ್ಲಿಯೇ, ಎಂದರೆ ಸಂವರಣ ಮಹಾರಾಜನ ಆಸ್ಥಾನದಲ್ಲಿಯೇ, ಗಂಡನೊಡನೆ ಜಗಳವಾಡಿ ಬಂದ ಭಂಡ ಹೆಂಡತಿಯ ವ್ಯಾಜ್ಯವನ್ನೂ, ಹೆಂಡತಿಯು ತೊಂಡೆವೆಣ್ಣೆಂದೂ ಚಂಡಿಯೆಂದೂ ಹೇಳಿ ಗಂಡನು ಧೊರೆಯ ಮುಂದೆ ಹೇಳುವ ದೂರನ್ನೂ, ಹೆಂಡತಿಯೂ 'ಗಂಡನೊಡನೆ ಸಂಸಾರ

ಮಾಡಲಾರೆನು, ಪರಿಹಾರ ದ್ರವ್ಯವನ್ನು ಕೊಡಿಸಬೇಕು' ಎಂಬ ಕೇಳಿಕೆಯನ್ನೂ ಸೇರಿಸಿದ್ದರು; ಆದರೆ, ಅವು ನಮ್ಮ ದೃಷ್ಟಿಗೆ ಆಭಾಸವಾಗಿ ತೋರಿದುದರಿಂದ ಅದನ್ನು ತೆಗೆದುಹಾಕಲಾಯಿತು. ಮತ್ತೂ ಚಿತ್ರಸೇನನೆಂಬ ಪರ್ವತರಾಜನು ಮಾಯಾವಿಯ ಸಹಾಯದಿಂದ ತಪತಿಯು ಮುಂದೆ ಮಾಯಾಸಂವರಣನ ತಲೆಯನ್ನು ಕಡಿದುಹಾಕಿದಂತೆಯೂ, ಸಂವರಣನ ಮುಂದೆ ಮಾಯಾತಪತಿಯ ತಲೆಯನ್ನು ಕಡಿದುಹಾಕಿದಂತೆಯೂ ಬರೆದಿದ್ದರು. ಅದು ಕೂಡ ಸರಿಯಾಗಿ ಕಾಣದೆ ನಮ್ಮ ಹಿರಿಯರು, ಮಾಯಾತಪತಿ, ಮಾಯಾಸಂವರಣ, ಮಾಯಾವಸಿಷ್ಠರ ಪಾತ್ರಗಳನ್ನು ಸೇರಿಸಿ, ಅಲ್ಲಿಲ್ಲಿ ನ್ಯೂನತೆ ಕಂಡುಬಂದಿದ್ದ ಭಾಗಗಳಿಗೆ ಬೇಕಾದ ಪಾತ್ರ, ವಿಷಯ ವಿಚಾರಗಳನ್ನು ಸೇರಿಸಿದರು.

ಒಟ್ಟಿನಲ್ಲಿ, ಕಥೆಯು ಪೌರಾಣಿಕ ಸಂಬಂಧವುಳ್ಳದಾಗಿ ಶೃಂಗಾರ, ಹಾಸ್ಯ, ವೀರರಸಗಳಿಂದಲೂ, ಲಲಿತ ಪದಬಂಧುರದಿಂದ ಮನೋಹರವಾಗಿದ್ದಂತೆ ತೋರಿಬಂದುದರಿಂದ ಅತ್ಯವಶ್ಯಕವಾದ ಕಡೆಗಳಿಗೆ ಕೆಲವು ಹಾಡುಗಳನ್ನು ಮಾತ್ರ ಸೇರಿಸಿ, ಯಥಾಶಕ್ತಿ ಪರಿಶೋಧಿಸಿ, ಭಾಷಾ ಮರ್ಯಾದೆಗೆ ಒಳಪಟ್ಟಿರುವಂತೆ ಮಾಡಿ ಇಂದು ಇದನ್ನು ಭಗವದನುಗ್ರಹದಿಂದ ನಿಮ್ಮೆಲ್ಲರ ಮುಂದೆಯೂ ಒಪ್ಪಿಸಿರುವೆವು. ದೋಷಗಳನ್ನು ತಿದ್ದಿ ಸರಿಪಡಿಸುವುದು ಸುಹೃಲ್ಲಕ್ಷಣವೇ ಆಗಿರುವಲ್ಲಿ ನಾವು ಮತ್ತೆ ಪ್ರಾರ್ಥಿಸಬೇಕಾಗಿಲ್ಲ. ಭಾಷಾಭಿಮಾನಿಗಳು ಪ್ರೋತ್ಸಾಹಿಸಿದಲ್ಲಿ ಮುಂದಿನ ಗ್ರಂಥಗಳೂ ಸಕಾಲದಲ್ಲಿ ಪ್ರಕಾಶಕ್ಕೆ ಬರುವುದರಲ್ಲಿ ಸಂಶಯವಿಲ್ಲ.

ಇತಿ ಹಿತೈಷಿಣೀ.

ಶ್ರೀಃ

ಶ್ರೀಯೈ ನಮಃ

ತಪತೀಕಲ್ಯಾಣಂ

(ರೂಪಕ)

ಶ್ರೀರಾಮಂ ಶರಣಾಗತಾಘಹರಣಂ ಸಿಂಧೂರಸಂರಕ್ಷಣಂ ।
ಕಾರುಣ್ಯಂ ಕಮಲಾಸನಾದಿವಿನುತಂ ಕಾಕುತ್ಸ್ಥವಂಶೋದ್ಭವಂ ॥
ಗೌರೀಶಾದಿಸುರಾಳಿವಂದಿತಪದಂ ಪಂಕೇಜಪತ್ರೇಕ್ಷಣಂ ।
ಶ್ರೀರಂಗಾಧಿಪನೇ ಸದಾ ಪೊರೆಯಲೀ ಶ್ರೀಕೃಷ್ಣಭೂಪಾಲನಂ ॥

ರಾಗ: ಮೋಹನ ಕಲ್ಯಾಣಿ । ಆದಿತಾಳ. (ಶ್ರೀಚಕ್ರವಾಸಿನಿ)

ಪಾಲಿಸೈಮಾವರ ಬಾಲಾರ್ಕಭಾಸುರ ॥ ಪ ॥
ದರಚಕ್ರಭೂಷಿತ-ಸುರರಾಜಪೂಜಿತ ।
ಕರಿರಾಜನಂದಿತ ॥ ಪಾಲಿಸೈ ॥ ೧ ॥
ನತತಾಪಹಾರಕ-ಪ್ರತಿಜಾವಿಮೋಹಕ ।
ಶತಮಂಗಳಾತ್ಮಕ ॥ ಪಾಲಿಸೈ ॥ ೨ ॥
ಕೃಷ್ಣೇಂದ್ರಭೂಪನ-ಇಷ್ಟಾರ್ಥವೆಲ್ಲಮಂ ।
ಕೊಟ್ಟು ನೀಂಸಂತತಂ ॥ ಪಾಲಿಸೈ ॥ ೩ ॥

(ಸೂತ್ರಧಾರನ ಪ್ರವೇಶ)

*ಭಕ್ತಾಭಯಪ್ರದನೂ ದುಷ್ಟನಿಗ್ರಹ ಶಿಷ್ಟಜನಸಂರಕ್ಷಕನೂ ಆದ ಭಗವಂತನಿಗೆ ವಂದನೆ.

---

*ಇಲ್ಲಿ ಹೇಳಬೇಕಾಗಿದ್ದ ವೃತ್ತವು ಮೂಲ ಪ್ರತಿಯಲ್ಲಿ ಹರಿದುಹೋಗಿದ್ದುದರಿಂದ ಕೊಡಲಾಗಲಿಲ್ಲವೆಂದು ವಿಷಾದಿಸಬೇಕಾಗಿದೆ.

(ಸಭೆಯ ಕಡೆ ನೋಡಿ ಕೈಜೋಡಿಸಿ)

"ಮಹಾತ್ಮರೆಲ್ಲರಿಗೂ ವಂದನೆಗಳು"—(ತೆರೆಯ ಕಡೆನೋಡಿ)

"ಸಾಕು ಸಾಕು, ಅಧಿಕ ಪ್ರಸಂಗವು ಸಾಕು." (ಮತ್ತೆ ಸಭೆಯ ಕಡೆ ನೋಡುತ್ತ)

ಸಾಧು-ಸಜ್ಜನರ ಸಂದರ್ಶನವು ಅತ್ಯಂತ ದುರ್ಲಭವು. ಪೂರ್ವ ಸುಕೃತ ದಿಂದ ದೊರೆತಿರುವ ಈ ಸತ್ಪುರುಷರ ಸಂದರ್ಶನಲಾಭದ ಸುದಿನವನ್ನು ಚಿರಸ್ಮರಣೀಯವಾಗಿ ಮಾಡಲು ಉಪಾಯವೇನು? (ಕ್ಷಣಕಾಲ ಚಿಂತಿಸುತ್ತಿದ್ದು)

ಇರಲಿ, ಇವರ ಅಭಿಪ್ರಾಯವನ್ನು ತಿಳಿಯುವೆನು. (ಕಿವಿಕೊಟ್ಟು ಕೇಳಿ)

ಕಂದ ॥ ಆವುದು ಇತಿವೃತ್ತಿಮೊ ಮ। ತ್ತಾವುದು ನವರಸಭರಿತಮೊ ದುರಿತಾಪಹಮೋ ॥
ಆವುದು ಪಾವನಕರಮೋ। ನೀವಿದ ನಾಡೀಗ ನಮ್ಮ ತುಷ್ಟಿಪುದಾರ್ಯಾ ॥

ಹೀಗೆಂದು ಆಜ್ಞಾಪಿಸಿರುವರಲ್ಲವೆ? ಧನ್ಯನಾದೆನು, ಇರಲಿ, ನಟಿಯನ್ನು ಕರೆದು ಆಲೋಚಿಸುವೆನು. (ತೆರೆಯ ಕಡೆ ನೋಡುತ್ತ)

ಕಂದ ॥ ಕಾಳಾಹಿವೇಣಿ ತರುಣೀ। ನೀಲಾಳಕೆ ನಿರ್ಮಲಾಂಗಿ ನಿರುಪಮ ಸುಗುಣೀ ॥
ಬಾಲೇಂದು ಸನ್ನಿಭವದನೇ। ಸಾಲಂಕೃತೆಯಾಗಿ ಬಾ ಮನೋಹರೆ ನೀರೇ ॥

(ನಟಿಯು ಪ್ರವೇಶಿಸುವಳು.)

ನಟಿ:— ಆರ್ಯನೆ, ಆಜ್ಞಾಧೀನಳಾಗಿರುವೆನು.

ಸೂತ್ರ:— ಆರ್ಯೆ, ಸರ್ವಶಾಸ್ತ್ರಪಾರಂಗತರೂ ರಸಿಕಾಗ್ರೇಸರರೂ ಭಗವದ್ಭಕ್ತರೂ ಧೈರ್ಯ, ಸ್ಥೈರ್ಯ, ಸಾಹಸಾದಿ ಸದ್ಗುಣಾಲಂಕೃತರೂ ಆದ ಮಹಾಜನರಿಂದ ತುಂಬಿತುಳುಕುತ್ತಿರುವ ಈ ದಿವ್ಯಸಭೆಯನ್ನು ನೋಡು!

ನಟಿ:— ಆರ್ಯನೆ! ಈ ದಿವ್ಯಸಭೆಯು ಕಲ್ಯಾಣಮಂಟಪದಂತೆ ಪರಿಶೋಭಿಸುತ್ತಿರುವುದು.

ಸೂತ್ರ:–ಆರ್ಯೆ! ಯೋಚಿಸುತ್ತಿದ್ದ ನನಗೆ ಕಲ್ಯಾಣವೆಂಬ ಶಬ್ದವು "**ತಪತೀ ಕಲ್ಯಾಣ**"ವೆಂಬ ನಾಟಕವನ್ನು ಸ್ಮೃತಿಗೆ ತಂದಿತು. ಇರಲಿ, ಸ್ವಲ್ಪ ಗಾನವನ್ನು ಮಾಡು.

ನಟಿ:— ಆರ್ಯನೆ, ಆವುದನ್ನಾಶ್ರಯಿಸಿ ಗಾನಮಾಡಲಿ?

ಸೂತ್ರ:— ಸರ್ವಶ್ರೇಷ್ಠವಾದ ವಸಂತಋತುವನ್ನೇ ಆಶ್ರಯಿಸು.

ನಟಿ:— ಆಗಬಹುದು.

ರಾಗ: ಕಮಾಚು । ರೂಪಕ. (ಇದೀಗನಂದನಂ)

ವಸಂತಸಂಭವಂ--ವಿಶಾಲವೈಭವಂ ॥ ಪ ॥
ಕುಂದ ಕುಸುಮ ಗಂಧವಾಂತ ಮಂದಮಾರುತಂ ।
ಚಂದದಿಂದ ಜನಕೆ ಮುದವ । ವೀರಿತೋರಿಕುಂ ॥

ಸೂತ್ರ:— ಆರ್ಯೆ, ನಿನ್ನೀ ಗಾನದಿಂದ ಮುಗ್ಧನಾದೆನು.

ನಟಿ:— ಆರ್ಯನೆ, ಕರೆಯಿಸಿದ ಕಾರ್ಯವನ್ನೇ ಮರೆತಂತೆ ಕಾಣುವುದು?

ಸೂತ್ರ:— ಆರ್ಯೆ! ಮರೆಯಲಿಲ್ಲ, ಈ ಮಹನೀಯರು ನನಗೆ ಹೀಗೆ ಆಜ್ಞಾಪಿಸಿರುವರು. "ಆವುದು ಇತಿವೃತ್ತವೊ" (ಎಂಬ ಪದ್ಯವನ್ನು ಮತ್ತೆ ಹೇಳುವನು.)

ನಟಿ:— ಮಹನೀಯರ ಆಜ್ಞೆಯು ಶಿರೋಧಾರ್ಯವಲ್ಲವೆ? ವಿಳಂಬವೇಕೆ?

ಸೂತ್ರ:—ವಿಳಂಬವಿಲ್ಲ, ಇವರನ್ನು ಸಂತೋಷಪಡಿಸಲು "ತಪತೀಕಲ್ಯಾಣ" ವನ್ನೇ ಅಭಿನಯಿಸಲು ಸಂಕಲ್ಪಿಸಿರುವೆನು.

ನಟಿ:— ಅದನ್ನು ರಚಿಸಿದ ಕವಿಯಾರು?

ಸೂತ್ರ— ಮಾಲಾಪುರೀವಾಸಿಯಾದ ವೆಂಕಟವರದಾರ್ಯನೆಂಬ ಬುಧವರನಿಂದ ರಚಿತವಾದ ಈ ನಾಟಕವು, ಗರಪುರೀನಿವಾಸಿಯಾದ ವೆಂಕಟಕೃಷ್ಣಾರ್ಯನೆಂಬ ಬುಧವರನಿಂದ ನ್ಯೂನಾತಿರಿಕ್ತ ದೋಷಗಳಿಂದ ಪರಿಷ್ಕೃತವಾಗಿರುವುದು.

ನಟಿ:— ಆರ್ಯ, "ತಪತೀ" ಎಂಬವಳು ಯಾರು? ಯಾವ ದೇಶದ ರಾಜಕನ್ನಿಕೆ?

ಸೂತ್ರ:— ತಪತೀದೇವಿಯು, ಸೂರ್ಯನಾರಾಯಣನ ಪುತ್ರಿ.

ನಟಿ:— ಆ ದೇವಿಯನ್ನು ವರಿಸುವ ಮಹಾತ್ಮನಾರು?

ಸೂತ್ರ:— ಒಬ್ಬ ಮಹಾರಾಜನು. (ತೆರೆಯ ಕಡೆ ಗಲಭೆಯಾಗುವುದು.)

ನಟಿ:— ಆರ್ಯ, ಸೂರ್ಯನ ಮಗಳನ್ನು ಮದುವೆಯಾಗುವ ಆ ರಾಜನಾರು? ಆತನ ಹೆಸರೇನು? ಹೇಗೆ ಆಕೆಯನ್ನು ಪಡೆದನು?

ಸೂತ್ರ— ಆರ್ಯೆ, ಕೇಳು.

ಕಂದ ॥ ತಪನಿಂ ಮೆಚ್ಚಿಸಿ ರವಿಯಂ ।
ನೃಪವರ್ಯಂ ಶಶಿಕುಲೋತ್ತಮಂ ಸಂವರಣಂ ॥
ತಪನಾತ್ಮಜಾತೆಯೆನಿಪಾ
ತಪತೀದೇವಿಯ ವರಿಸಿದಪಂ ತಾನೊಲವಿಂ ॥

ತೆರೆಯಲ್ಲಿ:—"ನಾನು ಜೀವಿಸಿರುವಾಗ ಅದು ನಡೆಯುವುದೊ?"

ನಟಿ:—(ತೆರೆಯ ಕಡೆ ನೋಡಿ ಸೂತ್ರಧಾರನ ಕಡೆಗೆ ತಿರುಗಿ)—ಆರ್ಯನೇ, ನಿನ್ನ ಮಾತಿನಿಂದ ಕುಪಿತನಾಗಿ ಬರುತ್ತಿರುವ ಅವನಾರು?

ಸೂತ್ರ:—ಆರ್ಯೆ, ತಪತಿಯಲ್ಲಿ ಅನುರಕ್ತನಾದ ಪರ್ವತದೇಶಾಧಿಪತಿ ಚಿತ್ರಸೇನನು ಕುಪಿತನಾಗಿ ಬರುತ್ತಿರುವನು. ಇನ್ನು ನಡೆ, ನಾವು ಮುಂದಿನ ಪಾತ್ರದಲ್ಲಿ ಸಿದ್ಧರಾಗುವ. (ಇಬ್ಬರೂ ಹೊರಡುವರು.)

॥ ಇತಿ ಪ್ರಸ್ತಾವನಾ ॥

ಸ್ಥಾನ: ಚಿತ್ರಸೇನನ ಮನೆಯ ಮುಂಭಾಗ.

(ಕ್ರುದ್ಧನಾದ ಚಿತ್ರಸೇನನು ಮಂತ್ರಿಯೊಡನೆ ಪ್ರವೇಶಿಸುವನು.)

ಚಿತ್ರ:—ಏನು, ದನುಜಾಧಿಪನೂ ಮಹಾಮಹಿಮನೂ ಆದ ನಾನಿರಲು, ಆ ಹುಲು ಮನುಜನು ಬರುವನೇ? ಭಾನುಸುತೆಯು ನನ್ನ ಹೃದಯೇಶ್ವರಿಯಾಗದೆ, ಅನ್ಯರಿಗಾಗುವಳೇ?

ಮಂತ್ರಿ:—ಮಹಾರಾಜ! ತಾವೇನೋ ತಪತಿಯಲ್ಲಿ ಅನುರಕ್ತರಾಗಿರುವಿರಿ, ಆದರೆ, ತಪತಿಯು ತಮ್ಮನ್ನು ಕಡೆಗಣ್ಣಿಂದಲೂ ನೋಡಿದವಳಲ್ಲ!

ಚಿತ್ರ:—ದರ್ಪದಿಂದ ನಕ್ಕು—

ಕಂದ ॥ ಬಲವಿಾ ಭುಜದೊಳಗಿರೆಯುಂ ।
ಛಲವಿಾ ಮಾನಸದೊಳಿರುತೆ ಮಾಯಾವಿಯವಂ ।
ಗೆಳೆಯಂ ತಾನಾಗಿರೆಯುಂ ।
ಇಳೆಯೊಳ್ ಯನಗಸದಳಮಹ ಕಜ್ಜಮಿಹುದೇಂ ॥

ತೆರೆಯಲ್ಲಿ ॥ ರಾಗ: (ಜಯಜಯ ಗೋಕುಲ ಬಾಲ)

ಜಯ ಜಯ ದ್ವಾರಕಾವಾಸ— ಜಯ ಮುನಿಮಾನಸ ಹಂಸ ॥ ಪ ॥

ಚಿತ್ರಸೇನ:— ಸಂಭ್ರಮದಿಂದೆದ್ದು 'ಮಂತ್ರಿಯೆ, ದೇವಮುನಿಯಾದ ನಾರದರು ಬರುವರು.' (ಮುಂದೆ ಬಂದು)— ಪೂಜ್ಯರಿಗೆ ವಂದನೆ, ದಯೆಮಾಡಿ ಆಸನವನ್ನಲಂಕರಿಸಬೇಕು.

(ಶುಭ್ರವಸ್ತ್ರಧರನಾದ ನಾರದನು ವೀಣಾಪಾಣಿಯಾಗಿ ಪ್ರವೇಶಿಸಿ)

ನಾರದ:— ಶುಭಮಸ್ತು — (ಕುಳಿತು ಚಿತ್ರಸೇನನನ್ನು ನೋಡುತ್ತ) — ಅಯ್ಯಾ, ಇದೇನು, ನಿನ್ನ ಮುಖಕಾಂತಿ ಇಷ್ಟು ಕುಂದಿರುವುದು? ಏತರಿಂದ ಇಷ್ಟು ಖತಿಗೊಂಡಿರುವೆ!

ಚಿತ್ರ:— ಮುನಿವರರೇ—

ಕಂದ ॥ "ತಪದಿಂ ಮೆಚ್ಚಿಸಿ ರವಿಯಂ । ನೃಪವರ್ಯಂ" (ಎಂಬ ಪದ್ಯವನ್ನು ಹೇಳಿ, ಬಳಿಕ)— ಇಂತಹ ಮಾತನ್ನು ಕೇಳಿಯೂ ಖತಿಗೊಳ್ಳದೆ ಹೇಗಿರಬಹುದು?

ನಾರದ:— ದನುಜಾಧಿಪನೆ, ಸತ್ಯವಾದ ಮಾತಿಗೆ ಖತಿಗೊಳ್ಳುವುದೇಕೆ?

ಚಿತ್ರ:— ಪೂಜ್ಯರೆ! ದನುಜಾಧಿಪನಾದ ನಾನು ವರಿಸಿದ ಕನ್ಯಾಮಣಿಯನ್ನು ಮನುಜಾಧಮನು ವರಿಸುವುದು ಸರಿಯೇನು? ಪ್ರತಾಪಿಯಾದ ಸಿಂಹವು ಬಯಸಿದುದನ್ನು ಗಜವು ಬಯಸುವಂತೆಯೇ ಅಲ್ಲವೇ, ಇದೂ?

ನಾರದ:— (ನಕ್ಕು,)— ದನುಜಾಧಿಪನೆ, ಶಾಂತನಾಗಿ ವಿಚಾರಮಾಡು! ಕನ್ಯಾಪಿತನು ಸಾಕ್ಷಾತ್ ತಮಸ್ತೋಮ ವಿಧ್ವಂಸಕನಾದ ಸೂರ್ಯನು; ಸಾಧುಜನಪ್ರಿಯನೂ, ತೇಜೋಮಯನೂ ಆದ ಆತನು ತನ್ನ ಕನ್ಯೆಯನ್ನು ದನುಜರಿಗೆ ಹೇಗೆ ಕೊಡುವನು?

ಚಿತ್ರ:— (ಕ್ಷಣ ಹೊತ್ತು ಚಿಂತಿಸುತ್ತಿದ್ದು, ಬಳಿಕ ತಲೆಯೆತ್ತಿ)— '**ಪೂಜ್ಯರೆ!** ನಾನಾದರೋ ತಪತಿಯಲ್ಲಿ ನೆಟ್ಟಮನಸ್ಸುಳ್ಳವನಾಗಿರುವೆನು. ನನ್ನ ಈ ಕೋರಿಕೆಯು ತಮ್ಮಿಂದಲೇ ಕೈಕೂಡುವಂತಾಗಬೇಕು! ಮಹನೀಯರಾದ ತಮ್ಮ ದರ್ಶನವು ವ್ಯರ್ಥವಾಗದೆಂಬ ನಂಬಿಕೆ ನನಗಿರುವುದು.'

ನಾರದ:— ಅಯ್ಯಾ, ದನುಜಾಧಿಪನೆ! ಚಂದ್ರಕುಲದ ಅರಸರು ದೇವ ದಾನವರಿಗೂ ಭಯಪಡುವವರಲ್ಲ; ಇವರ ಮೇಲೆ ನನ್ನ ಸಹಜವಾದ ಶಕ್ತಿಯನ್ನು ಸಂವರಣನಲ್ಲಿಯೂ ತಪತಿಯಲ್ಲಿಯೂ ಉಪಯೋಗಿಸುವೆನು. ಸಂದೇಹವನ್ನು ಬಿಡು. (ವೀಣೆಯನ್ನು ನುಡಿಸುತ್ತ ಹೊರಡುವನು.)

ಚಿತ್ರ:—ಮಂತ್ರಿಯೇ, ನಾರದನಿಂದ ಉಪಕಾರವಾಗುವುದೆಂದು ನೆನೆದಿದ್ದೆನು; ಆತನ ಮಾತಿನಿಂದ ವಿರೋಧವೇ ತೋರುವುದು.

ಮಂತ್ರಿ:—ಮಹಾರಾಜನೆ, ನಾರದನು ದೇವರ್ಷಿಯಲ್ಲವೆ?

ಚಿತ್ರ:—ಮಂತ್ರಿಯೆ, ಇರಲಿ, ನಾರದನು ಸಂವರಣನಲ್ಲಿಯೂ ತಪತಿಯಲ್ಲಿಯೂ ಹೋಗಿ ಏನು ಹೇಳುವನೋ, ಗೂಢಚಾರರಿಂದ ತಿಳಿದು ಮುಂದೆ ಯೋಚಿಸುವ. (ಇಬ್ಬರೂ ಹೊರಡುವರು.)

॥ ವಿಷ್ಕಂಭಂ ॥

ಸಂವರಣಮಹಾರಾಜನ ವಿಲಾಸಸ್ಥಾನ.

(ಸಂವರಣಮಹಾರಾಜನು ವಿದೂಷಕನೊಡನೆ ಆಸನಾಸೀನನಾಗಿರುವನು.)

ಸಂವರಣರಾಜ:—ಮಿತ್ರನೆ, ಮನಸ್ಸಿಗೆ ಆಯಾಸವಾಗಿರುವುದು.

ವಿದೂಷಕ—ರಾಜನಾಗಿದ್ದು ನೀನು ಸುಮ್ಮನೆ ಕುಳಿತಿರುವುದನ್ನು ನೋಡಿ ನನಗೂ ಹಾಗೆಯೇ ಸರಿ.

ರಾಜ:—ಈಗ ಮತ್ತೇನು ಮಾಡಬೇಕು?

ವಿದೂ:—ಕೇಳು, ಏನುಮಾಡಬೇಕೇ? ರಾಜ್ಯವಿಚಾರ ಮಾಡು.

ರಾಜ:—ಯಾರೊಡನೆ? ನಿನ್ನೊಡನೆಯೇ?

ವಿದೂ:—ಏಕಾಗಬಾರದು? ನಾನು ನಿನ್ನ ನರ್ಮಸಚಿವನಹುದಷ್ಟೆ;— ವಿಚಾರಮಾಡು, ಒಂದು ಮುಹೂರ್ತಮಾತ್ರವಾದರೂ ಕರ್ಮಸಚಿವನಾಗಿಯೂ ಸೇನಾಪತಿಯಾಗಿಯೂ ನಿನಗೆ ಸಂತೋಷವನ್ನುಂಟುಮಾಡುವ ಆಶೆ ನನಗೆ ಬಹಳವಾಗಿದೆ.

ರಾಜ:— ಹಾಗೂ ಆಗಲಿ, ಬಾಧಕವೇನದರಲ್ಲಿ? ಅಯ್ಯಾ ಮಿತ್ರನೆ, ಹೇಳು, ನಮ್ಮ ರಾಜ್ಯವಿಚಾರವು ಹೇಗಿರುವುದು?

ವಿದೂ:— (ಕೈಜೋಡಿಸಿ) — ಮಹಾರಾಜನೆ, ಅವಧರಿಸಬೇಕು. — ಅಮಾತ್ಯನ ವಿನಂತಿಯಿದು. —

ಶಾ ॥ ವಿ ॥ ವೃತ್ತ· ಉರ್ವೀ ಪಾಲಕ ನೀಂ ಧರಾವಲಯಮನ್ನೋವುತ್ತಿರಲ್ ಸತ್ಯದಿಂ ।
ಸರ್ವಾಧಾರಿಣಿಯೊಪ್ಪಿಹಳ್ ನಿರುತಮುಂ ಸಸ್ಯಾದಿ ಸಂಪತ್ತಿಯಿಂ ॥
ಗೀರ್ವಾಣರ್ ಮನುಜರ್ ಸಮಾನರೆನುವೊಲ್ ಗೀತಂಗಳಂ ಪಾಡುವರ್ ।
ಸರ್ವಪ್ರಾಣಿಗಳುಂ ಧರಾತಲದೊಳೇ ಸ್ವರ್ಭೋಗಮುಂ ಭೋಗಿಪರ್ ॥

ರಾಜ:— ಮಂತ್ರಿಯಾದ ಸುಮತಿಯ ಕೌಶಲ್ಯವೂ ದಕ್ಷತೆಯೂ ಶ್ಲಾಘ್ಯವಾಗಿರುವುದು. ನಮ್ಮ ಸೇನಾವಿಚಾರವೂ ದುರ್ಗಯಂತ್ರಾದಿ ಸ್ಥಾನಗಳೂ ಸುರಕ್ಷಿತವಷ್ಟೆ?

ವಿದೂ:— ಮಹಾರಾಜನೆ, ಸೇನಾಪತಿಯ ಬಿನ್ನಪವಿದು, ಅವಧರಿಸಬೇಕು. —

ರಾಗ: ನೋಟ್ ॥ (ಪರಮಪುರುಷ ಪಾಹಿಸಂತತ.)

ಧರಣಿಪಾಗ್ರಣಿ ಲಾಲಿಸೈವರ ಸುಗುಣ ಭೂಷಣ ॥
ಚರಣ ಶರಣ, ಕರುಣಾಭರಣ-ಸಂವರಣ ಭೂಮಿಪ ॥ ಅನು ॥
ಅರಿಜನಂಗಳು ಪುರವ ನೋಡಲು ಅರಿಯಲಾರರು ಕನಸಿನೋಳ್ ।
ಹರನು ನಿನ್ನೊಳು ವೈರವೆಣಿಸಲರರೆ ಅಳುಕುತಿರ್ಪನೈ ॥ ಧರಣಿ ॥ ೧ ॥
ಎತ್ತಲೆತ್ತಲುಂ ಉತ್ತರಿಸಿದ ರಥಗಜಂಗಳಿಂದಲುಂ ।
ಸುತ್ತಿರುವ ಉತ್ತಮಾಶ್ವಗಳೆತ್ತ ನೋಡಲುಂ ॥ ಧರಣಿ ॥ ೨ ॥
ಎತ್ತಿದ ಬಲ್ಗತ್ತಿ ಕುಂತಕುಠಾರ ತೋಮರ ಬಾಣ ಹಸ್ತರ ।
ಸತ್ತಿರಾವುತ ಜೋಧಬಿಲಾರರ್ ಸುತ್ತಿಮುತ್ತಿ ಕಾಯುತಿರ್ಪರೈ ॥
ಧರಣಿ ॥ ೩ ॥

ಮತ್ತೂ ಅವಧರಿಸಬೇಕು —

ಕಂದ ॥ ನಿನ್ನಯ ರಾಜ್ಯದ ಎಲ್ಲೆಯ ।
ಪನ್ನಗ ಭೂಷಣ ನಳುಕುವನಧಟಿಂ ತುಳಿಯಲ್ ॥
ಗಣ್ಯರೆ ಲೋಕದ ಜನಪರ್ ।
ನಿನ್ನ ಗಣಿತ ಗುಣದೊಳು ಮನಸೋತವರೆಲ್ಲರ್ ॥

ರಾಜ:— ಮಿತ್ರನೆ, ನಮ್ಮ ಸೇನಾಪತಿಯಾದ ಕುಮಾರವೈಭವನ ಶಕ್ತಿಯೂ ಜಾಗರೂಕತೆಯೂ ಸ್ವಾಮಿಭಕ್ತಿಯೂ ಅಸ್ವಾದೃಶವಾದುದು. ಅದರ ಮೇಲೆ, —

ವಿದೂ:— (ಸ್ವಗತಂ) ಮಹಾರಾಜನು ಮಂತ್ರಿ-ಸೇನಾಪತಿಗಳನ್ನು ಶ್ಲಾಘಿಸಿದನೇ ಹೊರತು, ನನ್ನ ಕೌಶಲ್ಯವನ್ನೂ ಶಕ್ತಿಯನ್ನೂ ಪಾಂಡಿತ್ಯವನ್ನೂ ಜಾಗರೂಕತೆಯನ್ನೂ ಶ್ಲಾಘಿಸಲಿಲ್ಲ. ಇರಲಿ, ಇವನನ್ನು ಇನ್ನು ವಿನೋದದಿಂದಲೇ ನನ್ನ ಸ್ವಾಧೀನಮಾಡಿಕೊಳ್ಳುವೆನು. (ಪ್ರಕಾಶವಾಗಿ) ಮಹಾರಾಜನೆ, ನಿನ್ನ ಮಂತ್ರಿ ಸೇನಾಪತಿಗಳು ಮಾತ್ರವೇ ನಿನ್ನ ಮೆಚ್ಚಿಕೆಗೆ ಪಾತ್ರರೆಂಬುದನ್ನು ನಾನೂ ಬಲ್ಲೆ, ಆದರೂ ನನ್ನ ವಿಚಾರವನ್ನು ಸ್ವಲ್ಪ ಕೇಳು.

ರಾಜ:— (ನಸುನಗುತ್ತ) ಹೇಳು, ಕುತೂಹಲನಾಗಿ ಕೇಳುತ್ತಿರುವೆನು.

ವಿದೂ:— ಹಾಗೋ ಸರಿ — (ಕೈ ತಿರುಗಿಸುತ್ತ)

ರಾಗ: (ಜಾಜಿಯ ಹೂವು ಬೆಳ್ಳಗೆ)

ಎಲ್ಲರೂ ನಗುವರು — ಎನ್ನ ನೋಡಿ ॥ ಪ ॥
ಗುಲ್ಲು ಮಾಡದೆ ನಾ ಮೆಲ್ಲನೆ ಬಂದರು ॥ ಅನು ॥
ಎನ್ನಂಥ ಸುಂದರ — ನಿನ್ನೆಲ್ಲಿ ಸಿಕ್ಕುವ ।
ಕನ್ನೆಯರೆಲ್ಲ ಕಣ್ಣು — ಸನ್ನೆಯ ಮಾಡುತ ॥ ೧ ॥
ಮೀಸೆಯ ನೋಡಿ ಪರಿಹಾಸ್ಯವ ಮಾಳ್ಪರು ।
ದೇಶದವರು ಧರಣೀಶರ ಮರೆವರು ॥ ಎಲ್ಲರೂ ॥ ೨ ॥
ಹೊಟ್ಟೆಯ ನಾಂ ಹೊದ್ದ ಬಟ್ಟೆಯ ನೊಸಲಿನ ।
ಮಟ್ಟೆಯ ಮುಸಿಯನು ದಿಟ್ಟಿಸಿ ನೋಡುತ ॥ ಎಲ್ಲರೂ ॥ ೩ ॥

ರಾಜ:—(ಕೈನೀಡಿ,) ಮಿತ್ರನೆ, ದೇಶದ ವಿಚಾರವೆಲ್ಲವೂ ತಿಳಿಯಿತು, ನಿನ್ನ ಪಾಂಡಿತ್ಯ ಪ್ರದರ್ಶನವೂ ಆಯಿತು, ಸಂತೋಷ! ನಿನ್ನ ಪತ್ನೀಪುತ್ರಪರಿವಾರವು ಕುಶಲವಷ್ಟೆ?

ವಿದೂ:—(ಸ್ವಗತಂ.) ಈಗಲೀಗ ರಾಜನು ನನ್ನವನಾದನು. ಇರಲಿ, (ಪ್ರಕಾಶವಾಗಿ) ಮಹಾರಾಜನೆ, ಮಿಕ್ಕವರ ಕುಶಲವು ಹಾಗಿರಲಿ, ನನ್ನ ಹೊಟ್ಟೆಯ ಕ್ಷೇಮವೇ ದೊಡ್ಡದು.

ರಾಜ:— ನಕ್ಕು—ಅದೇನು ಕಾರಣ, ನಿನ್ನ ಹೊಟ್ಟೆ ಮಾತ್ರ ದೊಡ್ಡದಾಗಿ, ಕೈಕಾಲುಗಳು ಸಣ್ಣವಾಗಿವೆ?

ವಿದೂ:—ರಾಜನೆ, ನಿನ್ನ ಅನ್ನಪ್ರಭಾವದಿಂದ ಹೊಟ್ಟೆಯು ಪುಷ್ಟಿಯಾಗಿರುವುದು, ಮನೋವ್ಯಥೆಯಿಂದ ಶರೀರವು ಕೃಶವಾಗಿರುವುದು.

ರಾಜ:— ನಿನಗೆ ಅಂಥಾ ವ್ಯಥೆಯೇನು?

ವಿದೂ:—ಮಹಾರಾಜನೆ, ನೀನು ಆಸ್ಥಾನವೇ ಮೊದಲಾದ ಎಲ್ಲ ಕಡೆಯಲ್ಲಿಯೂ ಸ್ವೇಚ್ಛೆಯಾಗಿ ಮಾತನಾಡುತ್ತಿರುವೆ. ನಾನು ಮಾತ್ರ ಬಾಯಿಯಿದ್ದೂ, ವಾಕ್ಶಕ್ತಿಯಿದ್ದೂ—ಮೂಕನಂತೆ ಸುಮ್ಮನಿರಬೇಕಾದರೆ ವ್ಯಥೆಯಲ್ಲವೇ? ಯೋಚಿಸು!

ರಾಜ:— ಹಾಗೊ? ಸರಿ, ಇನ್ನುಮುಂದೆ ನೀನೂ ಸ್ವೇಚ್ಛೆಯಾಗಿ ಮಾತನಾಡು.

ವಿದೂ:—(ಕೈಚಾಚಿ,) ಎಲೈ ಮಹೋದಾರಿಯೆ, ಹಾಗಾದರೆ, ವಾಗ್ದಾನ ಮಾಡು, ನಿನ್ನ ಎಲ್ಲಾ ಸಮಯದಲ್ಲಿಯೂ ನಾನು ಸ್ವೇಚ್ಛೆಯಾಗಿ ಮಾತನಾಡಬಹುದೆಂದು ವಾಗ್ದಾನ ಮಾಡು. ಹೂಂ.

ರಾಜ:— ನಿರಾತಂಕವಾಗಿ ಮಾತನಾಡಬಹುದು.

ವಿದೂ:—ದಯಾಘನನಾದ ರಾಜೇಂದ್ರನೆ, ಸಂದರ್ಭವಶಾತ್ ನಿನ್ನ ಮನಸ್ಸಿಗೆ ತಪ್ಪಾಗಿ ತೋರಿದರೂ ಕ್ಷಮಿಸಬೇಕು.

ರಾಜ:— ನಿಸ್ಸಂದೇಹವಾಗಿ ಮನ್ನಿಸುವೆನೆಂದು ತಿಳಿ.

ವಿದೂ:— (ಚಪ್ಪಾಳೆ ತಟ್ಟುತ್ತಲೂ, ಕುಣಿಯುತ್ತಲೂ)

ನಾನೇ ಧನ್ಯ, ನಾನೇ ಗಣ್ಯ, ನಾನೇ ಮಾನ್ಯ, ಭಲಾ ಭಲ್ ಭಲಾ ||

ತೆರೆಯಲ್ಲಿ ರಾಗ: (ಗರಪುರನಾಯಕಪಾಹಿ)

ಕಮಲದಳಾಯತಲೋಚನ । ಏಹಿ || ಪ ||

ವಿದೂ:— ತಲೆಯೆತ್ತಿ ನೋಡಿ ಸಂಭ್ರಮದಿಂದ,

ಕಂದ || ಏನಿದು ತೇಜದ ತೆರಳಿಯೊ ।
ಭಾನುವೆ ನಭದಿಂದ ಭೂಮಿಗೈತರುತಿಹನೋ ||
ಏಣಾಂಕನೊ ಪಾವಕನೋ ।
ನಾನರಿಯೆಂ ತಾನೆ ಬರುವುದೇನಚ್ಚರಿಯೋ ||

ರಾಜ:— (ನೋಡಿ ಸಂಭ್ರಮದಿಂದೆದ್ದು) — ಪೂಜ್ಯರಾದ ನಾರದರು ಬರುವರು. (ಎಂದು ಮುಂದೆಬಂದು) ಮಹಾತ್ಮರೇ, ವಂದಿಸುವೆನು, ದಯಮಾಡಿ ಆಸನಾಸೀನ ರಾಗಿ ಅನುಗ್ರಹಿಸಬೇಕು. (ವೀಣಾಪಾಣಿಯಾದ ನಾರದನು ಪ್ರವೇಶಿಸುವನು.)

ನಾರದ:— ಕಲ್ಯಾಣಮಸ್ತು. (ಕುಳಿತುಕೊಳ್ಳುವನು.)

ರಾಜ:— ಮಹಾತ್ಮರ ದರ್ಶನದಿಂದ ನಾನೂ ನನ್ನೀರಾಜ್ಯವೂ ಪ್ರಜೆಗಳೂ ಸಹ ಧನ್ಯರಾದೆವು.

ನಾರದ:— ಮಹಾರಾಜನೆ, ಶೌರ್ಯೌದಾರ್ಯಗುಣಾಲಂಕೃತನಾಗಿರುವ ನಿನ್ನಂ ನೋಡಿ ಸಂತೋಷವಾಯಿತು. ನೀನು, ನಿನ್ನ ರಾಜ್ಯ, ಕೋಶ, ಸೇನಾಮಾತ್ಯ ರೊಡನೆ ಕುಶಲಿಯೆ?

ರಾಜ:— ಪೂಜ್ಯರೆ, ತಮ್ಮ ಅನುಗ್ರಹದಿಂದೆಲ್ಲರೂ ಕ್ಷೇಮವೇ ಸರಿ.

ವಿದೂ:— ಮಹಾತ್ಮರೇ ಕ್ಷಮಿಸಬೇಕು, ನಮ್ಮ ಮಹಾರಾಜರಿಗೆ ಒಂದು ಮಾತ್ರವೇ ಕೊರತೆಯಾಗಿರುವುದು, ಉಳಿದುದೆಲ್ಲವೂ ಪೂರ್ಣವಾಗಿರುವುದು.

ನಾರದ:— ರಾಜನಿಗೆ ಕೊರತೆಯಾಗಿರುವುದೇನಯ್ಯ?

ವಿದೂ:— ಸರ್ವಜ್ಞರಾದ ತಮಗೆ ತಿಳಿಯದೇ ಇರುವುದೇ?

ನಾರದ:— ನನಗೆ ತಿಳಿದಿರಬಹುದಾದರೂ ನೀನು ಎಲ್ಲರಿಗೂ ತಿಳಿಯುವಂತೆ ಹೇಳಬಾರದೇ?

ವಿದೂ:— ಅಂತಹ ಗೋಪ್ಯವೇನೂ ಇಲ್ಲ; ಪುರುಷಾರ್ಥ ನಾಲ್ಕರಲ್ಲಿ ಮೋಕ್ಷವೆಂಬ ಕೊನೆಯದು ತಮ್ಮಂತಹ ಮಹಾತ್ಮರ ಸ್ವತ್ತೆಂದು ರಾಜನು ಅದನ್ನು ಬಯಸುವುದಿಲ್ಲ. ಮೊದಲನೆಯದಾದ ಧರ್ಮವು ಅಶಕ್ತರ ಮತ್ತು ವೈದಿಕ ಗೊಡ್ಡುಗಳ ಸ್ವತ್ತೆಂದು ಭಾವಿಸುತ್ತಿರುವನು. ಎರಡನೆಯದಾದ ಅರ್ಥವು ಮಹಾ ರಾಜನಿಗೂ ಆತನನ್ನು ಆಶ್ರಯಿಸಿರುವವರಿಗೂ ತಾನಾಗಿಯೇ ಬಹುಮುಖದಿಂ ದೊದಗುವುದು. ಉಳಿದುದೊಂದು ಮಾತ್ರವೆ,— ಸ್ವಾಮಿ.

ಕಂದ ॥ ಕುಸುಮವನಳಿ ಸಂಕುಲದೋಲ್ ।
ಬಿಸಜಾರಿಯಕಿರಣಮಂ ಚಕೋರನ ಪರಿಯೋಳ್ ॥
ಪೊಸಜಲಮಂ ಚಾತಕದೋಲ್ ।
ಶಶಿಮುಖಿಯಂ ಕಾಮಿಸುತ್ತಲಿಹನೆಮ್ಮರಸಂ ॥

ನಾರದ:— (ಸ್ವಗತಂ) ಸಮಯವನ್ನು ನಿರೀಕ್ಷಿಸುತ್ತಿದ್ದ ನನಗೆ ಈತನ ಪ್ರಶ್ನೆ ತುಂಬಾ ಅನುಕೂಲವಾಯಿತು. (ಪ್ರಕಾಶವಾಗಿ) ಭೂಸುರನೇ, ನಿನ್ನ ಮಾತು ಯುಕ್ತವೇ ಸರಿ.

ಕಂದ ॥ ವದನದಿ ಕಣ್ಣಿಲ್ಲದಿರಲ್ ।
ರದನದಿ ತಂಬುಲದ ರಕ್ತತೆಯಿಲ್ಲದಿರಲುಂ ।
ಸದನದಿ ಮಕ್ಕಳು ಶಯನದಿ ।
ಸುದತಿಯು ತಾನಿಲ್ಲದಿರಲು ಶೋಭಿಪುದೆಂತೈ ॥

ವಿದೂ:— ಮಹಾತ್ಮರೇ! ತಾವು ತ್ರಿಲೋಕಸಂಚಾರಿಗಳು, ನಮ್ಮ ಮಹಾ ರಾಜನಿಗೆ ಅನುರೂಪಳಾದ ಕನ್ಯೆಯೆಲ್ಲಿರುವಳೆಂದು ತಿಳಿಯಲು ತಮ್ಮನ್ನು ನಮ್ಮ ರಾಜನ ಪರವಾಗಿ ಪ್ರಾರ್ಥಿಸುವೆನು.

ನಾರದ:— ಹಾಗಾದರೆ ಕೇಳೈ ಭೂಪತಿಯೇ.

ರಾಗ: ನೋಟ್ । (ಅಮ್ಮ ಕೇಳೀವಾರ್ತೆಯ.)

ಭೂಪಾಲ ಲಾಲಿಸಾದೊಡೆ । ಈ ಪೊಡವಿಯೊಳ್ ನೋಡೆ ।
ಆ ಪದ್ಮಸಖನಸುತೆಗೆ ಈಡೆ ।

ಭೂಪನಿನ್ನ ಕೈಪಿಡಿವೊಡೆ । ಭೂಪಾಲ ॥ ಪ ॥
ಸೌಶೀಲ್ಯ ಸೌಕುಮಾರ್ಯದೊಳ್ । ವಸುಂಧರೇಶ ನಿನಗೆ ಸಮಳ್ ।
ಕುಕೇಶಯಾಕ್ಷಿ ಯಾಕೆ ಕೇಳ್ । ವಿಶೇಷ ವರ್ಣಿಸಲಾರೆನೈ ॥ ೧ ॥
ತಪತಿಯಲ್ಲದನ್ಯರಂ । ನೃಪನೆ ನಿನ್ನ ಕೈಪಿಡಿವರಂ ।
ಕಪಟವಲ್ಲ ಕಾಣೆನಾಂ । ಉಪಮೆಯಿಂದ ವರಿಸುನೀಂ ॥ ೨ ॥

ಮತ್ತೂ — ಕಂದ ॥ ಕುಸುಮಕೆ ಪರಿಮಳದಂತೆಯು ।
ಶಶಿರವಿ ಪಾವಕರಿಗಂತು ಶೀತೋಷ್ಣಗಳೊಲ್ ।
ವಸುಧಾ ಧೀಶನೇ ನಿನಗಾ ।
ಬಿಸಜಾಪ್ತನ ತನುಜೆಯೊರ್ವಳೊಪ್ಪುವಳಿಳೆಯೊಳ್ ॥

ರಾಜ:— (ಕೌತುಕದಿಂದ)

ಕಂದ ॥ ಮರಿದುಂಬಿಗೆ ಚಂಪಕದೋಲ್ ।
ಕರಿಶಾಬಕೆ ಸಿಂಗಿಯಂತೆ ಕಾಮುಕಗೆ ಶ್ರೀ ॥
ಹರಿಪದದಂತೆನ ಗಾದಿನ ಕರಾತ್ಮಜೆ ।
ಸುಲಭಳೆ ಪೇಳು ಸುರಮುನಿ ದಯೆಯಿಂ ॥

ನಾರದ:— ಮಹಾರಾಜನೆ, ನಿನ್ನ ವಂಶವು ಸಾಮಾನ್ಯವಾದುದಲ್ಲ. ಪುರೂರವರಾಜನನ್ನು ಊರ್ವಶಿಯೇ ವರಿಸಲಿಲ್ಲವೇ? ಸುಧಾಕರ ಕುಲಕಲಶಾರ್ಣವ ಸುಧಾಂಶುವಾದ ನಿನಗೆ ಇದೇನೂ ದೊಡ್ಡ ವಿಷಯವಲ್ಲ.

ರಾಜ:— ಪೂಜ್ಯರೆ, ನಮ್ಮ ಪೂರ್ವಜರ ಪರಾಕ್ರಮವೂ ಪ್ರಭಾವವೂ ಹಾಗಿದ್ದುವು. ಸುರೋತ್ತಮನನ್ನು ಪ್ರತ್ಯಕ್ಷದಲ್ಲಿ ನೋಡುವಷ್ಟು ಶಕ್ತಿ ನನಗೆ ಹೇಗೆ ಉಂಟಾಗುವುದು?

ನಾರದ:— ಆಯುಷ್ಮಂತನೆ, ನಾನೇ ಹೋಗಿ ದ್ವಾದಶಾತ್ಮನಿಗೂ ತಪತಿಗೂ ತಿಳಿಸುವೆನು?

ರಾಜ:— ಮಹಾತ್ಮರ ಕೃಪಾಪಾತ್ರನಾದುದರಿಂದ ಕೃತಾರ್ಥನೇ ಆದೆನು. ಅನುಗ್ರಹವು ಚಿರಕಾಲವಿರಬೇಕೆಂದು ಕೋರುವೆನು.

ನಾರದ:— ಮಹಾರಾಜನೆ, ಈ ಕೆಲಸದಲ್ಲಿ ಪರ್ವತದೇಶಾಧಿಪತಿಯಾದ ಚಿತ್ರಸೇನನೆಂಬ ದನುಜನು ವಿರೋಧಿಯಾಗಿರುವನು; ಮುಂದೊದಗುವ ವಿರೋಧವು ನಿನ್ನ ಕುಲಗುರುವಾದ ವಸಿಷ್ಠರು ಮತ್ತು ದ್ವಾದಶಾತ್ಮರಿಂದಲೇ ನಿವಾರಣೆಯಾಗುವುದು. ನಿನಗೆ ಮಂಗಳವಾಗಲಿ. (ಮೊದಲಿನಂತೆ "ಕಮಲದಳಾಯತ ಲೋಚನ" ಎಂದು ಹಾಡುತ್ತ ಹೊರಡುವನು.)

ರಾಜ:— ಮಿತ್ರನೆ, ಮಹಾತ್ಮನ ಸಂದರ್ಶನವು ಎಷ್ಟು ಆನಂದಕರವಾಗಿರುವುದು?

ವಿದೂ:— ನಿಜ, ಆನಂದವೇನೋ ಆಯಿತು. ಮುಂದೆಯೂ ಆನಂದಕರವೇ ಆದೀತು! ಆದರೆ ಪ್ರಕೃತದಲ್ಲಿ ನಿನ್ನ ಕೂಡ, ನಾನೂ ಅನೇಕ ತೊಂದರೆಯನ್ನು ಅನುಭವಿಸಬೇಕಾಗುವುದೆಂದು ಶಂಕೆ!

ರಾಜ:— ಹೇಗೆ?

ವಿದೂ:— ದನುಜನಾದ ಚಿತ್ರಸೇನನ ಹೆಸರನ್ನು ಹೇಳಿದುದರಿಂದಲೇ ಸ್ಪಷ್ಟವಾಯಿತು. (ತೆರೆಯಲ್ಲಿ ವಾದ್ಯಗಳಾಗುವುವು.)

ರಾಜ:— ಮಿತ್ರನೇ ಶ್ರೀನಿವಾಸನ ದಯೆಯಿಂದೆಲ್ಲವೂ ಕ್ಷೇಮವೇ ಆದೀತು. ಮಧ್ಯಾಹ್ನಕಾಲೀನವಾದ ವಾದ್ಯಗಳಾಗುತ್ತಿರುವುವು. ನಿತ್ಯಕರ್ಮಗಳನ್ನು ನೆರವೇರಿಸಲು ಹೋಗುವ. ನಡೆ, (ಹೊರಡುವರು.)

(ಇಲ್ಲಿಗೆ ಪ್ರಥಮಾಂಕವು.)

ಶ್ರೀರಸ್ತು.

ದ್ವಿತೀಯಾಂಕ ಪ್ರಾರಂಭವು.

ಸ್ಥಾನ:— ಚಿತ್ರಸೇನನ ಚಿಂತಾಗಾರ.

(ವ್ಯಸ್ತನಾದ ಚಿತ್ರಸೇನನು ಮಂತ್ರಿಯೊಡನೆ ಆಸನಾಸೀನನಾಗಿ ಚಿಂತಿಸುತ್ತಿರುವನು.)

ಚಿತ್ರ:— ಎಲೈ ಮಂತ್ರಿಯೇ,

ಕಂದ ॥ ದಿನಕರ ಸುತೆಯಂ ವರಿಸಲ್ ।
ಘನತರದಭಿಲಾಷೆಯಿಂದ ಯತ್ನವ ಗೈದೇಂ ॥
ಅನಿಮಿಷ ಮುನಿವರನಂದೇ ।
ಮನುಜಾಧಿಪನೊಡನೆ ಪೇಳಿ ಕೆಡಿಸಿದ ನಕಟಾ! ॥ (ನಿಟ್ಟುಸಿರು ಬಿಡುವನು.)

ಮಂತ್ರಿ:— ಮಹಾರಾಜ, ಮಾಡಬೇಕಾದುದನ್ನು ಆಲೋಚಿಸದೆ, ಚಿಂತಿಸಿದರೆ ಫಲವೇನು?

ಚಿತ್ರ:— ರಾಗ: ನೀಲಾಂಬರಿ। ತ್ರಿಪುಟ ॥ (ಕಾಂತೆಯಾನುಳಿದೆಂತು.)

ಏನಮಾಡಲೀಗ ನಾನು। ನಾರದನು ಬಂದನು ॥
ಎನ್ನ ಹೀನನೆಂದನು ಅವಮಾನಗೈದನು ।
ಮಾನವಾಧಿಪನ ಬಹು ಮಾನಿಸಿದನು ಹಾ ॥ ಏನ ॥ ಅನು ॥
ಎನ್ನ ಲಗ್ನವನ್ನು ವಿಘ್ನವೆನ್ನಿಸಿದನು ಚಾಡಿ-
ಯನ್ನು ಸುರಿದನು ಖತಿಯನ್ನು ಪಿಡಿದನು ॥
ಆ ಕನ್ಯೆಯನ್ನು ಭೂಪನಿಗೆ ತಾನು ನಿರ್ಧರಿಸಿದನು ಹಾ ॥ ಏನು ॥ ೧ ॥

ಆಸೆಯೊಳು ನಾನಿರ್ದುದಕೆ ನಿರಾಸೆಪಡಿಸಿದನೆನ್ನ-
ಘಾಸಿಗೊಳಿಸಿದ ಬಹು ಕ್ಲೇಶಪಡಿಸಿದ ॥
ವಾಸುದೇವ ಭಕ್ತನಾಗೆ ಇಂತು ಮೋಸಮಾಡಿದ ಹಾ ॥ ೩ ॥

ಮಂತ್ರಿ:— ಮಹಾರಾಜ, ಇಷ್ಟೇಕೆ ನಿರಾಶೆ? ಇಷ್ಟೇಕೆ ಸಂತಾಪ?

ಚಿತ್ರ:— ಮಂತ್ರಿಯೇ, ಏಕೆಂದರೆ ಏನು ಹೇಳಲಿ?

ಕಂದ ॥ ನಾರದನೆದುರೊಳು ನಿಲ್ಲುತೆ ।
ಹೋರುವರನು ಮೇಣ್ ವಿಚಾರ ಮಾಳ್ಪಮನುಜರಂ ॥
ಮೂರ್ಲೋಕದೊಳುಂ ಕಾಣೆನು ।
ಆರಿಂದೆನ್ನಭಿಮತಂ ಫಲಿಪುದೋ ಪೇಳ್ಕೆ ॥

ಮಂತ್ರಿ:— ಒಡೆಯನೇ, ನೀನೆಂತೂ ಚಿಂತಿಸಬೇಕಾದುದಿಲ್ಲ, ಹೇಗೆನ್ನು ಏಯೊ?

ಕಂದ ॥ ದಾನವರೊಡೆಯನೆ ನೀ ಕೇಳ್ ।
ಆನೆಗೆ ಸಿಂಗಿಸಹಚಾರಿಯಪ್ಪುದೆ ಬನದೊಳ್ ॥
ಭಾನು ತನೂಭವೆ ಭುವಿಯೊಳ್ ।
ಮಾನವರಿಗೆ ಮನವೊಲಿದು ವಶಳಹಳೆ ಪೇಳ್ಕೆ ॥

ಚಿತ್ರ:— ಮಂತ್ರಿಯೇ, ನಿನ್ನ ಮಾತು ಸಹಜವಾಗಿದ್ದರೂ, ನಾರದನ ಮಾತನ್ನು ಎಲ್ಲರೂ ಬಹುಮಾನಿಸುವರಲ್ಲವೇ?

ಮಂತ್ರಿ:— ನಾರದನ ಮಾತನ್ನು ಗೌರವಿಸಿದ ಮಾತ್ರಕ್ಕೆ ನೀನು ಚಿಂತಿಸಬೇಕಾಗಿಲ್ಲ. "ಮಾಯಾವಿ" ಎಂಬ ನಿನ್ನ ಸಖನ ಸಹಾಯವು ನಿನಗಿದ್ದಲ್ಲಿ ಆವ ಕಾರ್ಯವು ತಾನೇ ಅಸಾಧ್ಯವು?

ಚಿತ್ರ — (ಸ್ವಗತಂ) ಮಂತ್ರಿಯ ವಚನವು ಶ್ಲಾಘ್ಯವಾಗಿಯೇ ಇರುವುದು. ಅದರಂತೆಯೇ ಈ ಸಮಯದಲ್ಲಿ ನನ್ನ ಮಿತ್ರನನ್ನು ಸ್ತುತಿಸಿ ಪ್ರಸನ್ನನನ್ನಾಗಿ ಮಾಡಿಕೊಳ್ಳುವೆನು. (ಪ್ರಕಾಶವಾಗಿ.)

ಕಂದ ॥ ಧೀರನೆ ಮತ್ಪ್ರಿಯ ಮಿತ್ರನೆ ।
ಸಾರೌದಾರ್ಯಗುಣಯುತನೆ ಮಾಯಾಬಲನೇ ॥
ಕೋರುವೆ ನಿನ್ನಾಗಮನವ ।
ಬಾರೈ ಭರದಿಂದಲಿತ್ತನಲಿದೀಕ್ಷಣಮೇ ।

(ತೆರೆಯ ಕಡೆ ಶಬ್ದವಾಗುವುದು.)

ಮಂತ್ರಿ:—(ಮೇಲೆ ನೋಡಿ ಸಂಭ್ರಮದಿಂದ) ಪ್ರಭುವೆ, ಕಟಾಕ್ಷಿಸು.

ಕಂದ ॥ ನೀಲಾಚಲಮೈ ತಂದುದೊ ।
ಕಾಳಾಂಬುದಮಿಳೆಗೆ ಬಂದುದೋ ಎನೆ ಜವದಿಂ ॥
ಜೋಲುವ ದಾಡೆಯ ರುಚಿಯಿಂ ।
ಶೂಲಾಯುಧನಾಗಿ ಬಂದನಿದಿಗೋದನುಜಂ ॥

(ಶೂಲಾಯುಧನಾಗಿ ಮಾಯಾವಿಯು ಪ್ರವೇಶಿಸುವನು.)

ಚಿತ್ರ:—(ಸಡಗರದಿಂದೆದ್ದು ಮುಂದೆ ಬಂದು)—'ಮಿತ್ರನೆ, ಮನಃಕಾಂತನೆ, ಬಂದೆಯಾ? (ಆಲಿಂಗಿಸುವನು.)

ಮಾಯಾವಿ:—ಜಯಶಾಲಿಯಾದ ದನುಜಾಧಿಪನೇ, ನನ್ನನ್ನು ನೆನೆದ ಹದನೇನು ಹೇಳು.

ಕಂದ ॥ ಬೆಟ್ಟವನಭ್ರಕೆತ್ತಿಡುವೆಂ ।
ಮುಷ್ಟಿಯೊಳರಿನೃಪರ ಘಟ್ಟಿಸಿಬಿಡುವೆ ಕೇಳಾ ॥
ವಿಷ್ಟಪನಾಥರ ನಟ್ಟುವೆ ।
ಇಷ್ಟವನೆನ್ನೊಡನೆ ಪೇಳು ದನುಜೇಶ್ವರನೇ ।

ಚಿತ್ರ:—(ಮಾಯಾವಿಯೊಡನೆ ಆಸನದಲ್ಲಿ ಕುಳಿತು ನಿಟ್ಟುಸುರಿಡುತ್ತ) ಮಿತ್ರನೆ, ಆರಾದರೇನು; ವಿಧಿಯನ್ನು ಮೀರಲಾರಿಗೂ ಆಗದಲ್ಲವೆ?

ಮಾಯಾವಿ:—ಹಾಗೆಂದರೇನೋ ಗೊತ್ತಾಗಲಿಲ್ಲ, ಸ್ಪಷ್ಟವಾಗಿ ಹೇಳು, ನಿನಗಿಷ್ಟು ಸಂತಾಪವೇಕೆ?

ಚಿತ್ರ:—ಮಿತ್ರನೆ, ತಪನ ಪುತ್ರಿಯಾದ ತಪತಿಯಲ್ಲಿ ನಾನು ಅನುರಕ್ತನಾಗಿರುವೆನೆಂಬುದನ್ನು ನೀನೂ ಬಲ್ಲೆಯಷ್ಟೆ?

ಮಾಯಾವಿ:— ಓಹೋ, ಅದನ್ನು ಬಲ್ಲೆನು; ನೀನು ತಪತೀಲಾಭಕ್ಕೆಂದು ಪ್ರಯತ್ನಪಟ್ಟುದನ್ನು ಬಲ್ಲೆನು. ಈಗೇನಾಯಿತು?

ಚಿತ್ರ:— ತಪನಾತ್ಮಜೆ ದುರ್ಲಭಳೆಂದು ತಿಳಿದು, ವಂಚಕನಾದ ನಾರದನನ್ನು ದೂತಕಾರ್ಯದಲ್ಲಿ ಪ್ರಾರ್ಥಿಸಿದೆನು. ಆ ಕಪಟಿಯು ನನ್ನನ್ನು ವಂಚಿಸಿ, ಕಾರ್ಯವನ್ನು ಕೆಡಿಸಿ, ನನ್ನದಾಗಬೇಕಾದ ಫಲವನ್ನು ಸಂವರಣನೆಂಬ ರಾಜನಿಗಾಗುವಂತೆ ಮಾಡಿದನು. ಅಜೇಯನಾದಾ ರಾಜನೊಡನೆ ನಾನು ಹೇಗೆ ಪ್ರತಿಭಟಿಸಿ ನಿಲ್ಲಲಿ, ಬಿಡುವುದಾದರೂ ಹೇಗೆ?

ಮಾಯಾವಿ:— ಇಷ್ಟೇ ಅಲ್ಲವೆ, ನಿನ್ನ ಸಂತಾಪಕ್ಕೆ ಕಾರಣವು?

ಕಂದ ॥ ಉಗುರಿಂದಾಗುವ ಕಾರ್ಯಕೆ ।
ಜಗದಲಿ ಕೊಡಲಿಯನು ಕೊಂಡು ಬರುವರ ನೋಡೀ ॥
ನಗರೇಂ ರವಿಸುತೆಯಂ ನಾಂ ।
ಅಗಜಾಧಿಪನಾಣೆ ತರುವೆ ದುಗುಡವ ಸುಳಿಯೈ ॥

ಚಿತ್ರ:— ಕಂದ ॥ ಕವಿತೆಯು ತಾನಾಗಿ ಬರಲ್ ।
ನವರಸಯುತಮಾಗಿ ಶೋಭಿಸುತ್ತಿಹ ಪರಿಯೊಳ್ ॥
ಯುವತಿಯು ಮಂತಲ್ಲದೆ ಪರಿ ।
ಭವಿಸಲು ಸಂಸಂ ವಿರಸಮುದಾಗದೆ ನೀ ಪೇಳ್ ॥

ಮಾಯಾವಿ:— ಮಿತ್ರನೆ, ಇಷ್ಟವಾದ ವಸ್ತುವನ್ನು ಬಲಾತ್ಕಾರದಿಂದಲಾದರೂ ಅನುಭವಿಸುವುದು ನಮಗೆ ಸಹಜವಾಗಿದೆ. ಅನುಮತಿಯನ್ನಿತ್ತರೆ, ಸುಮೇರುವಿನಲ್ಲಿರುವ ತಪತಿಯನ್ನು ಈಗಲೇ ತಂದೊಪ್ಪಿಸುವೆನು.

ಚಿತ್ರ:—

ಕಂದ ॥ ತರುಣಿಯ ಸಮ್ಮತಿಯಿಲ್ಲದೆ । ತರಲಾಕೆಯ ಪಿತನು ನೋಡಿ ಸುಡನೇ ಜಗಮಂ ॥
ಸುರಮುನಿ ಮುನಿದೊಡೆವೈಶ್ವಾ । ನರನಲ್ಲವೆ ನೋಡು ನೀನು ದೈತ್ಯೋತ್ತಮನೇ ॥

ಮಾಯಾವಿ:— ಹಾಗಾದರೆ ಸಂವರಣನನ್ನು ಜಯಿಸಿ ಸೆರೆಯಾಳಾಗಿ ತಂದರೆ ತಪತಿಯು ನಿನ್ನವಳಾಗುವಳಲ್ಲವೆ?

ಚಿತ್ರ:— ಮಿತ್ರನೆ, ಸಂವರಣನು ಅಜೇಯನು, ಆತನನ್ನು ಪ್ರತಿಭಟಿಸಿ ಜಯಿಸುವುದು ಕಷ್ಟ!

ಮಾಯಾವಿ:— ದರ್ಪದಿಂದ ಭುಜವನ್ನು ತಟ್ಟಿಕೊಳ್ಳುತ್ತ—

ರಾಗ: ನೋಟ್ ॥

ಎನ್ನ ಶಕ್ತಿಯನ್ನು ನೀನು ಕಂಡುದಿಲ್ಲ। ಯುಕ್ತಿಯನ್ನು ನೋಡಿಲ್ಲ।
ಎನ್ನ ಪೆಸರಿನರ್ಥವಾದರೂ ಮುನ್ನ ಕೇಳಿಲ್ಲ ॥ ಪ ॥
ಮಾಯೆಯಿಂದ ರಾಯಗೇ ಎನ್ನಾಯ ತೋರುವೇ-
ಉಪಾಯ ಮಾಡುವೆ। ಪಾಯದಳ ಬಂದರೆನ್ನ ಮಾಯೆ ತೋರುವೆ ॥ ೧ ॥
ಸಿಟ್ಟು ಬಂದರವನ ತಲೆಯ ಮೆಟ್ಟಿ ಹಾರುವೆ। ಕರವ ಕುಟ್ಟಿಕೆಡಹುವೆ ॥
ಅಟ್ಟಿಬರುವ ಭಟರ ಮುರಿದು ಕುಟ್ಟಿಹಾಕುವೆ ॥ ೨ ॥
ಮರ್ತ್ಯರಿಗೆ ಮೃತ್ಯುಪುರವ ಗೊತ್ತುಹಚ್ಚುವೆ।
ಬಾಯಿಗೆ ತುತ್ತು ಮಾಡುವೆ। ಹಸ್ತಿರಥಗಳನ್ನು ನುಗ್ಗೊತ್ತಿಬಿಸಡುವೆ ॥ ೩ ॥

ಚಿತ್ರ:— ಎಲೈ ಮಿತ್ರನೆ, ನಿನ್ನ ಬಲವಂ ತಿಳಿದಿರುವೆನು. ಹೇಗಾದರೂ ಆತನನ್ನು ಏಕಾಂಗನಂ ಮಾಡಿ, ಆ ರಾಜನನ್ನು ಪರ್ವತಪ್ರಾಂತಕ್ಕೆ ಎಳೆದು ಕೊಂಡು ಬರಬೇಕು.

ಮಾಯಾವಿ:— ನನಗೆ ಹೇಳಬೇಕಾದುದೇ ಇಲ್ಲ. (ಎಂದು ಹೋಗುವನು.)

ಚಿತ್ರ:— ಮಂತ್ರಿಯೇ, ಮಿತ್ರನು ಕಾರ್ಯವನ್ನು ಸಾಧಿಸುವೆನೆಂದು ಅಭಯವನ್ನಿತ್ತು ಹೋಗಿರುವನು. ನಾವಿನ್ನು ಕಾರ್ಯಾಂತರವನ್ನು ಗಮನಿಸುವ ನಡೆ. (ಇಬ್ಬರೂ ಹೊರಡುವರು.)

ಸ್ಥಾನ:— ಸಂವರಣ ಮಹಾರಾಜನ ಮಂತ್ರಾಲಯ.

(ಆಸನಾಸೀನನಾದ ರಾಜನು ಮಂತ್ರಿ ಸೇನಾಪತಿಗಳೊಡನೆ ಕುಳಿತಿರುವನು.)

ರಾಜ:— ಮಂತ್ರಿಯೇ, ದೇವರ್ಷಿಯಾದ ನಾರದರು ದ್ವಾದಶಾತ್ಮನಿಗೂ ತಪತಿಗೂ ತಿಳಿಸುವುದಾಗಿ ಹೇಳಿಹೋದರು. ಇನ್ನೂ ವರ್ತಮಾನವೇ ಇಲ್ಲ.

ದ್ವಾರಪಾಲಕ:— ಪ್ರಭುವಿಗೆ ಜಯವಾಗಲಿ, ದ್ವಾರಪ್ರದೇಶದಲ್ಲಿ ಸಖಿಯೋರ್ವಳು ನಿಂತಿರುವಳು.

ರಾಜ:— ಒಳಗೆ ಬರಲಿ. (ದ್ವಾರಪಾಲಕನು ಕೈಮುಗಿದು ಹೋಗುವನು. ಸಖಿಯು ಪ್ರವೇಶಿಸುವಳು.)

ರಾಜ:— ಮಂಗಳಾಂಗಿ! ನೀನಾರು? ಎಲ್ಲಿಂದ ಬಂದೆ? ಉದ್ದೇಶವೇನು?

ಸಖಿ:— ಭೂಮೀಂದ್ರನೇ, ತಪತೀದೇವಿಯ ಸಖಿಯರಲ್ಲಿ ನಾನೊಬ್ಬಳು. ದೇವಮುನಿಯು ಮಾಡಿದ ನಿನ್ನ ಗುಣವರ್ಣನದಿಂದ ಕೌತುಕಗೊಂಡ ತಪತೀದೇವಿಯು, ನಿನ್ನ ವೈಭವವನ್ನು ನೋಡಿಬರಲು ನನ್ನನ್ನು ಕಳುಹಿಸಿರುವಳು.

ರಾಜ:— ಶುಭಾಂಗಿ, ದಿನಮಣಿ, ಲೋಕದಲ್ಲಿವಸಿಸುವ ತಪತೀದೇವಿಗೆ ಭೂಲೋಕದಲ್ಲಿ ಆವುದು ರುಚಿಸುವುದು?

ಸಖಿ:— ಸಮಸ್ತ ಕಲ್ಯಾಣಗುಣಸಂಪನ್ನೆಯಾದ ದೇವಿಯ ಪ್ರವೇಶಮಾತ್ರದಿಂದಲೇ ಸಮಸ್ತವೂ ದಿವ್ಯರೂಪವನ್ನೇ ಹೊಂದುವುವು. ನಿನಗೆ ಮಂಗಳವಾಗಲಿ. (ಎಂದು ಹೊರಟುಹೋಗುವಳು.)

ಮಂತ್ರಿ:— ಮಹಾರಾಜನೆ, ಮಹಾತ್ಮರ ವಾಕ್ಯವು ಸಫಲವಾಗುವುದೆಂಬುದಕ್ಕೆ ಇದೇ ದೃಷ್ಟಾಂತವು.

ದ್ವಾರಪಾಲಕ:— (ಕೈಮುಗಿದು) ಜಯಶೀಲನಾದ ಪ್ರಭುವೆ, ವನಪಾಲಕರು ಬಂದಿರುವರು.

ರಾಜ:— ಮುಖ್ಯ ಕಾವಲುಗಾರನನ್ನು ಬರಹೇಳು.

ದ್ವಾರ:— ಅಪ್ಪಣೆ— (ಹೋಗುವನು. ವನಪಾಲಕನು ಬಂದು ಭಯದಿಂದ ಅಡ್ಡಬಿದ್ದು ಎದ್ದು ಕೈಜೋಡಿಸಿ,)

ರಾಗ: ನೋಟ್ ॥ ಕಲ್ಯಾಣಿ. ಛಾಪು ॥

ಕಾಪಾಡು ಕಾಪಾಡು- ಕಾಪಾಡು ನಮ್ಮನು-
ಭೂಪನೀಂ ದಯೆಯಿಂದ ನೋಡು ।

ಈ ಪರಿಯು ತಾಪಗಳಂ ನೀ
ಪರಿಹರಮಾಡಿಸು ಭರದಿಂ ॥ ಪ ॥
ಹೆಬ್ಬುಲಿಯು ಬಂದು ಅಬ್ಬರಿಸುತಲಿಹುದು
ಹಬ್ಬವು ತನಗೆಂದು ಬೊಬ್ಬಿರಿದು ।
ಕೊಬ್ಬು ಮುರಿವೆನೆಂದುಬ್ಬಿನಿಂಬರುವುದು
ತಬ್ಬಿಬ್ಬಾಗಿಹೆವಿಂದು ॥ ಕಾಪಾಡು ॥ ೧ ॥
ಘೋರ ವರಾಹಗಳು ಚೀರುತ್ತ ತಾವ್
ಬಂದು ಸಾರೋದ್ಯಾನವ ಸಾರುತಲಿ ।
ಹಾರಾಡುತಲೀ — ಪೈರುಗಳಂ ।
ಸೂರೆಗೊಂಡವು ಭರದಲ್ಲಿ ॥ ಕಾಪಾಡು ॥ ೨ ॥
ದುಷ್ಟಕರಡಿ ಭೀತಿ — ಬಿಟ್ಟು ಹಿಂಸಿಪ ರೀತಿ
ಎಷ್ಟೆಂದು ಪೇಳ್ವೆವು ಸೃಷ್ಟಿಪನೇ
ಕೆಟ್ಟ ವೃಗಂಗಳ ಅಟ್ಟುಳಿಯಿಂ
ಕೆಟ್ಟೋಡಿ ಬಂದೆವು ಭರನೆ ॥ ಕಾಪಾಡು ॥ ೩ ॥

ಮಂತ್ರಿ:— ಮಹಾರಾಜನೇ,

ಕಂದ ॥ ಬೇಟೆಯನಾಡದೆ ಮೃಗದೋ । ಡ್ಯಾಟವು ಘನವಾಗಿ ಪೈರುಪಚ್ಚೆಯ ಪೊಲನಂ ॥
ಲೂಟಿಯ ಗೈಯುತಲಿರೆ ತಾಂ । ಸೋಟಕನಾಗುವನೆ ಭೂವಧೂಟಿಯನಲ್ಲಂ ॥

ರಾಜ:— ಎಲೈ ಮಂತ್ರಿ ಸೇನಾಪತಿಗಳೇ! ಪರಿಮಿತ ಸೇನೆಯಿಂದಲೂ ವನಪಾಲಕರಿಂದಲೂ ಬೇಟೆಗಾರರಿಂದಲೂ ಕೂಡಿ ವನದಲ್ಲಿ ಮುತ್ತಿಗೆಯನ್ನು ಹಾಕಿಸಿರಿ; ಜಾಗ್ರತೆಯಾಗಿ ನಾನೂ ಬರುವೆನು.

ಮಂತ್ರಿ:— ಸೇನಾ:— "ಅಪ್ಪಣೆ" (ಎಂದು ಹೋಗುವರು.)

ರಾಜ:— ಯಾರಲ್ಲಿ, ಅಶೋಕನನ್ನು ಜಾಗ್ರತೆಯಾಗಿ ಕರತರಬೇಕು.

ಸೇವಕ!— "ಅಪ್ಪಣೆ" (ಎಂದು ಹೋಗುವನು.)

ವಿದೂ:—(ಅವಸರದಿಂದ ಬಂದು) ಮಹಾರಾಜನೇ, ಏನು ಸಮಾಚಾರ? ಹೋಳಿಗೆ ಊಟವೊ?

ರಾಜ:—ಮಿತ್ರನೆ ಆಸನವನ್ನು ಸ್ವೀಕರಿಸು.

ವಿದೂ:—ಮಹಾರಾಜನೆ, ಹಸಿವನ್ನು ತಡೆಯಲಾರದೆ ಎಲೆಯ ಮುಂದೆ ಕುಳಿತಿದ್ದೆನು; ಆತುರವೆಂದುದರಿಂದ ಹಾಗೆಯೇ ಓಡಿಬಂದೆನು, ಕರೆಯಿಸಿದುದೇಕೆ?

ರಾಜ—ಮಿತ್ರನೆ, ಊಟ ಮಾಡಿದರೂ ಮಾಡದಿದ್ದರೂ ನಿನ್ನ ಹೊಟ್ಟೆ, ಒಂದೇ ಸಮವಾಗಿದೆ; ಭಯವಿಲ್ಲ, ಬೇಟೆಗೆ ಹೊರಟಿರುವೆನು, ಸಹಾಯಕ್ಕಾಗಿ ನಿನ್ನನ್ನೂ ಬರಹೇಳಿದೆನು.

ವಿದೂ:—ಆವ ಬೇಟೆ? ಮೃಗ ಬೇಟೆಗೊ? ಮೃಗಾಕ್ಷೀ ಬೇಟೆಗೊ?

ರಾಜ:—ಮೃಗ ಬೇಟೆಗೇ.

ವಿದೂ:—ಹಾಗಾದರೆ, ಒಬ್ಬನೇ ಹೊರಡುವೆಯಷ್ಟೆ?

ರಾಜ:—ನಿನ್ನ ಸಹಾಯವು ದೊರೆಯಲಾರದೇ?

ವಿದೂ:—ರಾಜೇಂದ್ರನೆ, ಮೃಗಾಕ್ಷೀ ಬೇಟೆಗೆ ಹೊರಟೆಯಾದರೆ ನಾನೂ ಸಹಾಯಕನಾಗಿ ಬರುವೆನು.

ರಾಜ:—(ನಕ್ಕು)—ಮಿತ್ರನೆ, ಸಾವಕಾಶವಿಲ್ಲ, ಸಕಲ ಸನ್ನಾಹದೊಡನೆ ಮಂತ್ರಿಯು ವನದಲ್ಲಿ ಕಾದಿರುವನು. ನಮ್ಮಿಬ್ಬರಿಗೂ ಎರಡು ಅಶ್ವಗಳು ಸಿದ್ಧ ವಾಗಿರುವುವು.

ವಿದೂ:—(ಮೇಲೆ ನೋಡಿ—ಏನನ್ನೊ ಗುಣಿಸುತ್ತಿದ್ದು, ಆ ಬಳಿಕ—) ಮಹಾ ರಾಜನೆ! ಈ ಲಗ್ನದಲ್ಲಿ ಹೊರಟರೆ ಒಂದು ಮೃಗವೂ ಸಿಕ್ಕುವುದಿಲ್ಲ; ನಿನ್ನ ವಾಹ ನವೂ ಕೈತಪ್ಪುವುದು, ಆದರೂ (ನಗುತ್ತಾ) ಆದರೂ . . . ಅದನ್ನು ಉಹೂ, ಈಗಲೇ ಹೇಳಿದರೆ ಸ್ವಾರಸ್ಯವಿಲ್ಲ—

ರಾಜ:—ಮಿತ್ರನೆ, ನೀನು ಆವಾಗಲೂ ಹಾಸ್ಯಗಾರನೇ ಸರಿ. ಆದರೆ ಹೀಗೇಕೆ ನಗುತ್ತಿರುವೆ, ಹೇಳು?

ವಿದೂ:—ಮಿತ್ರನೆ! ಹೊರಡು, ಎಷ್ಟು ಕಷ್ಟ ಬಂದರೂ ಬರಲಿ, ಅಂಥ ಮೃಗಾಕ್ಷಿಯು ಲಭಿಸುವಳು.

ರಾಜ:— ಮಿತ್ರನೆ, ನೀನೂ ಹೊರಡು.

ವಿದೂ:— ಮಿತ್ರನೆ, ನನ್ನ ಹೊಟ್ಟೆಯನ್ನು ಹೊತ್ತು ಹೊತ್ತು ಕಯ್ಕಾಲುಗಳು ಬಡವಾದುವು. ಕುದುರೆಯನ್ನೂ ಏಕೆ ಬಳಲಿಸಲಿ? ನೀನು ಹೋಗು, ಮನೆಯಲ್ಲಿ ಸಿದ್ಧವಾಗಿರುವ ಅನ್ನವನ್ನುಂಡು, ಮನೋವೇಗದಿಂದ ಬಂದು ನಿನ್ನಲ್ಲಿ ಸೇರುವೆನು.

ರಾಜ:— ಮಿತ್ರನೆ, ನೀನು ನನ್ನನ್ನು ಎಲ್ಲಿ ಕಾಣುವೆ?

ವಿದೂ:— ಮಹಾರಾಜನೆ, ನೀನು ಹೋಗುವ ಸ್ಥಳವನ್ನು ನಾನೂ ಬಲ್ಲೆನು.

ರಾಜ:— ಮಿತ್ರನೆ, ಆ ಸ್ಥಳವನ್ನು ಹೇಳಬಾರದೇ?

ವಿದೂ:— ಮಹಾರಾಜನೆ, ಕಿವಿಯನ್ನು ತೋರಿಸು, ಹೇಳುವೆನು.

ರಾಜ:— ಏನು ಹೇಳುವೆ? (ಕಿವಿ ತೋರುವನು.)

ವಿದೂ:— (ಕಿವಿಯಲ್ಲಿ ಹೇಳಿ ಘಟ್ಟಿಯಾಗಿ ನಗುವನು.)

ರಾಜ:— (ಮುಗುಳುನಗೆಯಿಂದ)— 'ಮಿತ್ರನೆ, ಪರಿಹಾಸವು ಸಾಕು, ಹೇಳುವುದಾದರೆ ಹೇಳು.

ವಿದೂ:— (ಸ್ವಗತಂ) ನಮ್ಮ ಮಹಾರಾಜನು, ಮೃಗಾಕ್ಷಿಯೆಂದು ಹೇಳಿದುದರಿಂದ ಆತುರನಾಗಿರುವನು. ಇರಲಿ, (ಪ್ರಕಾಶಂ)— ತಿಳಿಯಲಿಲ್ಲವೇ ರಾಜನೆ, ಸುಮೇರು ಪರ್ವತದ ತಪ್ಪಲು!

ರಾಜ:— ಸುಮೇರು ಪರ್ವತದ ತಪ್ಪಲಾವುದು? ಇದೇನು ಅಶ್ರುತಪೂರ್ವವಾದ ಮಾತನ್ನು ಹೇಳುವೆ?

ವಿದೂ:— ಹೊತ್ತುಮೀರಿದರೆ ಪ್ರಯಾಸವೇ ಸರಿ. ಬೇಗ ಹೊರಡಬೇಕು. (ಹೊರಟುಹೋಗುವನು.)

ರಾಜ:— (ಸ್ವಗತಂ) ಮಿತ್ರನು ಹೊರಟುಹೋದನು. ಏಕಾಂಗನಾಗಿಯೇ ಹೋಗಬೇಕಾಯಿತು. ಆಗಲಿ, ಉದ್ಯಾನದಲ್ಲಿ ಬೇಟೆಗಾರರು ಇರಬಹುದು. ಮರೆಯಾಗಿ ನಿಂತು ಅವರ ಆಲಾಪಗಳನ್ನು ನೋಡುವೆನು. ಹೊರಡುವನು.

ಉದ್ಯಾನವನದ ಮುಂಭಾಗ.

(ಬೇಟೆಗಾರರು ಪ್ರವೇಶಿಸುವರು.)

ದಫೇದಾರಸಿದ್ಧ:—

ರಾಗ: (ದೇವೀ ನಮ್ಮ ದ್ಯಾವರು ಬಂದರು.)

ಬನ್ನಿರಣ್ಣಾ ಬಲೆಗಾರರೆಲ್ಲ ಬೇಟೆಯನಾಡೋಣ, ಬೇಗ ॥ ಪ ॥
ಕಾಟಕಣ್ಣೆ ಕಲ್ಲಿಯು ಬಡಿಗೋಲು ದೊಣ್ಣೆ ಭರ್ಜಿಯು ।
ಜೂಲು ನಾಯಿ ಮರಿಯ ಪಿಡಿದು ಜಾಲವ ಮಾಡದೆಯೆ ॥ ಬನ್ನಿ ॥ ೧ ॥

೨ನೆ ಕಾಡ:—

ಗುಂದಿಯಲ್ಲಿ ಹುಲಿಯು ಬಡಿದು । ಹಂದಿಗಳ ತಿವಿದು ಹುಲ್ಲೆ
ಮಂದೆಗಳ ನೋಡಿ ಹಿಂದೆ ಮುಂದೆ ಬಲೆಯ ನೀಡಿ ॥ ಬನ್ನಿ ॥ ೨ ॥

೩ನೆ ಕೆಂಗಣ್ಣ:—

ಜೋಡು ಗುಂಡು ಬಾರು ಮಾಡಿ । ಕಾಡುಕೋಣ ಕಡವೆ ಹಿಂಡ ।
ಈಡುಕಟ್ಟಿ ಹೊಡೆದು ಮೊಲ ಬಾಡ ನಾವು ಮೆಲ್ಲುವ ॥ ಬನ್ನಿ ॥ ೩ ॥

೪ನೆ ಬೀರ:—

ರಾಗ: (ಜಾಜಿಯ ಹೂವು ಬೆಳ್ಳಗೆ.)

ಬೇಟೆಗೆ ನಾ ಹೋಯ್ತಾನಿ— ಬೆಸ್ತರ ಹುಡುಗಿ ॥ ಪ ॥
ಕಣ್ಕಪ್ಪುಸಾದಿನಬಿಟ್ಟು । ತಣ್ಕುಪಿಣ್ಕು ಮೊಲೆಯ ಬಟ್ಟು ।
ತಣಕುಮಿಣಕು ಮಾಡಿಕೊಂಡು ಇಣಿಕಿಣಿಕಿ ನೋಡಬೇಡ ॥ ೧ ॥
ಶಿಸ್ತಿಗೆ ಬೇಕಾದ ವಡವೆ ವಸ್ತುಗಳನೆತ್ತಿಕೊಂಡು ।
ಮಸ್ತಾಗಿ ಹೆಂಡ ಕುಡಿದು । ಕುಸ್ತಿಮಾಡುವ ಬಾರೆ ॥ ೨ ॥
ಅಡಿಕೆಗೋಟ ಕಡಿದು ಭಂಗಿ ಪುಡಿಯತರಗು ಮೆದ್ದು ।
ಗುಡಿಗುಡಿಯನ್ನೇ ಸೇದಿ ಹುಡುಗಿ ನಿನ್ನೊಡನೆ ಸೇರಿ ॥ ೩ ॥

೫ನೆ ಉಂಡ್ಮ್ರಲಗ:—

ರಾಗ: ನೋಟ್ ॥ (ಎಲ್ಲರೂ ಬನ್ನಿರಿ)

ಮಲ್ಲ ಬೋಯಿಲೊ, ಬಿಲ್ಲ ತತ್ತ್ರೆಲೊ ।
ಅಲ್ಲಿ ತಡೆದ ಹುಲ್ಲೆಗಳನೆಲ್ಲ ಕೊಲ್ಲೆಲೊ ॥ ೧ ।

೬ನೆ ದೊಣ್ಣೆಮಾರ:—

ಸಿದ್ದ ಕರಡಿಯ— ಗುದ್ದಿ ಹೆಬ್ಬುಲಿಯ ।
ಉದ್ದುರುಟುತನದಿಂದ । ಒದ್ದು ಕೆಡಹುಲೊ ॥ ೨ ॥

೭ನೆ ಚಿಳ್ಳೀಕ್ಯಾತ:—

ಸಂದುಗೊಂದಿಲಿ— ನಿಂದು ನೋಡಿಲೋ ।
ಹಂದಿಗಳ ಮಂದೆಗಳ ಕೊಂದು ಬಿಸುಡುಲೊ ॥ ೩ ॥

ಎಲ್ಲರೂ ಒಟ್ಟಾಗಿ:—

ರಾಗ: ನೋಟ್ ॥ (ಬನ್ನಿ ಬನ್ನಿ ಪೋಗುವ)

ಬನ್ನಿರಣ್ಣ ಬನ್ನಿರೊ— ಬಂದು ಬೇಟೆಯಾಡಿರೊ ॥
ಪ್ಯಾಟೆ ಹೆಂಡ ಹೀರಿರೊ । ಜೂಟನಿಂದ ಹಾರಿರೊ ॥ ೧ ॥
ಮುದ್ದೆಯನ್ನು ಮೆದ್ದೆಯ । ಎದ್ದ ಹುಲಿಯ ನೊದ್ದೆಯ ॥ ೨ ॥
ಜೋಡು ಗುಂಡು ಮಡಗುವೆ— ಪೋಡದಾಂಗೆ ಕೆಡಹುವೇ ॥ ೩ ॥
ಭಂಗಿ ಹೊಗೆಯ ಹೀರಿದೆ— ಶಿಂಗವನ್ನು ಸೀಳಿದೆ ॥ ಬನ್ನಿ ॥ ೪ ॥
ಕರಡಿಯನ್ನು ಕೆಡಹುವೆ— ಶರಭವನ್ನು ಮಡುಹುವೆ ॥ ೫ ॥

(ರಾಜನು ಪ್ರವೇಶಿಸಿ, ಬಗ್ಗಿ ನೋಡಿ ಮೆಲ್ಲನೆ ಹೇಳುವನು.)

"ಬೇಟೆಗಾರರ ಕೋಲಾಹಲವು ಅತಿಯಾಗಿರುವುದು. ಮಂತ್ರಿ ಸೇನಾಪತಿಗಳ ಸುಳಿವೇ ಇಲ್ಲ. ಒಂದು ಮೃಗವನ್ನಾದರೂ ಮುತ್ತಿಗೆಗೆ ಹಾಕಿದಂತೆ ತೋರುತ್ತಿಲ್ಲ".

ಬೇಟೆಗಾರರು:— (ತಿರುಗಿನೋಡಿ ಭಯದಿಂದ)— ರಾಜರು ಬಂದರು— ಏಳಿರೊ, ಹೊರಡಿರೊ— (ಎಂದು ದೊಣ್ಣೆ, ಕತ್ತಿ ಮೊದಲಾದುವುಗಳನ್ನೆತ್ತಿಕೊಂಡು ಮರೆಯಾಗುವರು.)

ರಾಜ:— ಸುತ್ತಲೂ ನೋಡಿ, ಮುಂದೆ ಬಂದು—"ಈ ವರೆಗೂ ಒಂದು ಮೃಗವಾದರೂ ಕಾಣಿಸಲಿಲ್ಲ. ಸುತ್ತಿಸುತ್ತಿ ಆಯಾಸವೋ ಅತಿಯಾಯಿತು. ಮಾರ್ಗಾಯಾಸದಿಂದ ನನ್ನ ಪ್ರಾಣಪ್ರಿಯವಾದ ಕುದುರೆಯೂ ಬಿದ್ದುಹೋಯಿತು. ಮಂತ್ರಿ ಮೊದಲಾದವರನ್ನೂ ಕಾಣೆನು. (ಮತ್ತೆ ಸುತ್ತಲೂ ನೋಡುತ್ತಿದ್ದು ಬಳಿಕ) ಭಲೆ! ಈ ಕಡೆ ಒಂದು ಜಿಂಕೆಯು ಓಡುತ್ತಿರುವುದು; ಇದನ್ನಾದರೂ ಹೊಡೆಯುವೆನು. (ಧನುರ್ಬಾಣಗಳನ್ನು ಹಿಡಿದು ಓಡುವನು.)

ಬೇಟೆಗಾರರಲ್ಲಿ ಒಬ್ಬನು ಮುಂದೆ ಬಂದು ಬಗ್ಗಿನೋಡಿ—'ಅಣ್ಣೋ ಮಾರಾಜರು ಬಂದವರೆ', ನೋಡೆಲಾ. ಮತ್ತೊಬ್ಬನು ಬಗ್ಗಿನೋಡಿ—ಅದೋ ಅತ್ತಕಡೆ ಅವರೆ, ನಡಿರಲಾ ಹೋಗೋನ. (ಎಲ್ಲರೂ ಹೊರಡುವರು.)

(ವನಮಧ್ಯದಲ್ಲಿ ಆಯಾಸಪಡುತ್ತಾ ರಾಜನು ಪ್ರವೇಶಿಸುವನು.)

ರಾಜ:— ಮೃಗವಾದರೊ ಸಿಕ್ಕಿದಂತೆ ಕಾಣಿಸಿಕೊಂಡು ದಕ್ಕದೆ ಓಡುತ್ತ ಅಪರಿಚಿತವಾದ ಈ ಅರಣ್ಯವನ್ನು ಹೊಂದಿಸಿ ಮರೆಯಾಯಿತು. ಇದು ನಿಜವಾದ ಮೃಗವೇ ಆಗಿದ್ದರೆ ಇಷ್ಟುಬೇಗ ಅಗೋಚರವಾಗುತ್ತಿದ್ದಿತೇ? (ಯೋಚಿಸುತ್ತ ಮತ್ತೆ ತಲೆಯೆತ್ತಿ),

ಕಂದ ॥ ಶ್ರೀರಘುವರನಂ ವಂಚಿಸಿ । ಮಾರೀಚಂ ಮೋಸಗೈದ ಪರಿಯಿಂದೆನ್ನಂ ॥
ಕ್ರೂರಂ ಮೃಗರೂಪದಿ ಬಹು । ದೂರಂ ಕರೆತಂದನಾವನೋ ಶ್ರೀ ಹರಿಯೇ ॥

ಆಗಲಿ, ಏನಾಗುವುದೋ ಆಗಲಿ, ಶ್ರೀ ಹರಿಯೇ ಇರುವನಲ್ಲವೆ?—

ರಾಗ: (ಜನನೀ ಜನಕ)

ಹರಿಯೇ ಎನಗೀ । ಪರಿಯಾಹುದರಿಯೇ ॥
ಧರಣಿಯನಾಳುವ । ಧೊರೆಯಲ್ಲವೇ ನರ ॥ ಪ ॥
ಪುರವನು ಮೀರಿ । ತುರಗವನೇರಿ ॥
ಹರಿಣವ ಕೋರಿ । ಬರಬಹುದೇ ನರ ॥ ಹರಿಯೇ ॥ ೧ ॥

ಪರಿಜನನೆಲ್ಲಾ । ಬರಲಿಲ್ಲವಲ್ಲಾ ॥
ಕರೆಕರೆಗೆಲ್ಲಾ । ಗುರಿಯಾದೆನಲ್ಲಾ ॥ ಹರಿಯೇ ॥ ೨ ॥

ಆಯಾಸವು ಅತಿಯಾಯಿತು, ನಾನಿನ್ನು ನಿಲ್ಲಲಾರೆನು; (ಮೊಣಕಾಲೂರಿ ದೈನ್ಯದಿಂದ ಕೈಜೋಡಿಸಿ —)

ರಾಗ: ಖರಹರ ಪ್ರಿಯ ॥ ಆದಿ ॥ (ಚಿನ್ನದಾನರಾ — ವಾಡು.)

ಪಾಲಿಸೆನ್ನನು-ದೇವ-ಪಾಲಿಸೆನ್ನನು ॥ ಪ ॥
ಪಾಲಿಸೆನ್ನ ಪ್ರೇಮದಿಂದ ಬಾಲಗೋಪಾಲಕೃಷ್ಣ ॥ ಪಾಲಿ ॥ ಅ ॥
ಸರಸಿಜಾಸನಾದಿ ಸಕಲ ಸುರರ ಮೊರೆಯನ್ನು ಕೇಳಿ। ಪೊರೆಯ ಪರಿದು
ಹರಿಣ ಹರಣ ಗಿರಿಯೊಳಿರುವ ವರದ ವಿಠಲ ॥ ಪಾಲಿ ॥ ೧ ॥

ತೆರೆಯಲ್ಲಿ—ಕಂದ॥ ಯಮುನಿಗೆ ಸಮನಾಗಿಹೆನಾಂ ।
ಅಮರರ ನಿಂತಲ್ಲಿ ನಿಲ್ಲಗೊಡದಿಹೆ ನನಿಶಂ ॥
ಕುಮತಿಯದಾವನೊ ಬಂದಿಹ ।
ನವುಮಾ! ಬಹು ಧೈರ್ಯಶಾಲಿಯಹನೀ ಮನುಜಂ ॥

ರಾಜ:—(ಧಿಗ್ಗನೆದ್ದು ನೋಡುತ್ತ,)—ಆಹಾ, ಗೊತ್ತಾಯಿತು, ಈ ದುರುಳನು ಮೃಗರೂಪದಿಂದ ಕಾಣಿಸಿಕೊಂಡನೇ? ಬರಲಿ ನೋಡುವೆನು. (ಆಯುಧವನ್ನು ಹಿಡಿದು ನಿಲ್ಲುವನು.)

ಮಾಯಾವಿ:—(ಮರೆಯಾಗಿ ನಿಂತು ನೋಡುತ್ತ,) (ಸ್ವಗತಂ) ಇವನನ್ನು ನೋಡಿದರೆ ಸಾಮಾನ್ಯನಂತೆ ತೋರುವುದಿಲ್ಲ. ಕಾಯಪುಷ್ಟಿಯುಳ್ಳ ಇವನನ್ನು ಭಕ್ಷಿಸಿದರೆ ಮೂರು ಉದ್ದೇಶಗಳೂ ಒಟ್ಟಾಗಿ ನೆರವೇರಿದಂತಾಗುವುದು. ಸಾಹಸವನ್ನು ಮಾಡಿ ನೋಡುವೆನು. (ಪ್ರಕಾಶಂ) ಮುಂದೆಬಂದು ರಾಜನನ್ನು ನೋಡುತ್ತ—

ಕಂದ॥ ಅನಿಮಿಷರುಂ ಬರಲಾರರು । ದನುಜಾಧಿಪ ನಮ್ಮ ಚಿತ್ರಸೇನನ ಭಯದಿಂ ॥
ಮನುಜನೆ ನೀನಾರು ಸಿರೀ । ವನಮಂ ಸಾರಿಹೆ ಹುಲುಮನುಜನೆ ನಿನ್ನಧಟೇಂ ॥

ರಾಜ:—(ನಕ್ಕು) ಎಲೆ ಮೂರ್ಖ, ಎಚ್ಚರಿಕೆಯಿಂದ ಮಾತನಾಡು, ಚಂದ್ರಕುಲೋದ್ಭವನಾದ ರಾಜಾಸಂಪರಣನಲ್ಲಿ ಮಾತನಾಡುವಾಗ ಮರ್ಯಾದೆ ತಪ್ಪಿ ಮಾತನಾಡುವೆ, ಭದ್ರ.

ಮಾಯಾವಿ:—(ಕೆನ್ನು) ನೀನಾರೇ ಆಗಿರು, ನನಗೇನು, ನಮ್ಮ ದನುಜೇಂದ್ರನಾದ ಚಿತ್ರಸೇನನ ವನವನ್ನು ಪ್ರವೇಶಿಸಿದುದರಿಂದ ನೀನು ದಂಡಾರ್ಹನಾಗಿರುವಿ.

ರಾಜ:—ನನ್ನನ್ನು ದಂಡಿಸಲು ಸಮರ್ಥನಾಗಿದ್ದರೆ ನೋಡುವೆನು. ಆ ನಿನ್ನ ದನುಜಾಧಿಪನನ್ನೂ ಬರಮಾಡು.

ಮಾಯಾವಿ:—(ರೋಷದಿಂದ) ವಾಚಾಳಿಯೇ, ಅನುಚರನಾದ ನನ್ನನ್ನು ಅತಿಕ್ರಮಿಸಿದರಲ್ಲವೆ, ದನುಜೇಂದ್ರನ ದರ್ಶನವು ನಿನಗೆ ಲಭಿಸುವುದು?

ರಾಜ:— ಕೋಪದಿಂದ ||

ರಾಗ: ನೋಟ್ || (ರಾಮುದೂತನೋ.)

ಆರು ನೀನೆಲೋ— ಶೂರನಹುದೆಲೋ ||
ವೀರ ನಿನ್ನ ಭುಜದ ಬಲವ ತೋರಬಹುದೆಲೊ || ೧ ||

ಮಾಯಾವಿ:—

ಮುಂದಮತಿಯೆ ಕೇಳಿಂದು ನಿನ್ನನು ।
ಒಂದು ನಿಮಿಷದಿಂದ ತಿವಿದು ಕೊಂದುಬಿಡುವೆನು || ೨ ||

ರಾಜ:—(ಧನುಸ್ಸನ್ನು ತೋರಿಸಿ)—

ನೋಡು ಚಾಪವ । ಹೂಡಿ ಬಾಣವ ||
ಖೋಡಿ ನಿನ್ನ ತಲೆಯ ಪುಡಿಯ ಮಾಡಿ ಬಿಸುಡುವೆ || ೩ ||

ಮಾಯಾವಿ:—

ನಾನು ದಿತಿಜನು । ನೀನು ಮನುಜನು ।
ಹೇನಿನಂತೆ ತೀಡಿ ರಕ್ತಪಾನ ಮಾಡುವೆ || ೪ ||

ರಾಜ:—

ದುರುಳ ನಿನ್ನಯ । ಕೊರಳ ಕೊಯ್ಯುವೆ ।
ತೆರಳು ಬೇಗ ಮರುಳನಾದರೆ ಉರುಳು ಧರೆಯೊಳು || ೫ ||

(ಖಡ್ಗದಿಂದ ತಿವಿಯುವನು.)

ಮಾಯಾವಿ:—(ಕೆಳಗೆ ಬಿದ್ದು ಥಟ್ಟನೆದ್ದು) (ಸ್ವಗತಂ) ಈತನು ಯುದ್ಧ ಸಾಧ್ಯನಲ್ಲ, ಮಾಯೆಯಿಂದ ಮರುಳು ಮಾಡಿ ಕಾರ್ಯವನ್ನು ಸಾಧಿಸಬೇಕು. ಇರಲಿ. (ಪ್ರಕಾಶಂ) (ಮರೆಯಾಗುವನು.)

ರಾಜ:—ಈ ದುರುಳನು ಅನುಚರನೆಂದು ಹೇಳಿಕೊಂಡುದರಿಂದ ಇವನನ್ನು ಉಚಿತಶಿಕ್ಷೆಯಿಂದ ಬಿಟ್ಟೆನು. ಇನ್ನು ನಿಶ್ಚಿಂತೆಯಿಂದ, ಆ ಮರದ ನೆರಳಲ್ಲಿ ಕುಳಿತು ಇಷ್ಟ ದೈವವನ್ನು ಧ್ಯಾನಮಾಡುವೆನು. (ಹೋಗುವನು.)

ದ್ವಿತೀಯಾಂಕಕ್ಕೆ ಮಂಗಳಂ.

ಶ್ರೀಃ

ತೃತೀಯಾಂಕ ಪ್ರಾರಂಭ.

ಸ್ಥಾನ: ಸುಮೇರು ಪರ್ವತಪ್ರಾಂತದ ಉದ್ಯಾನವನ.

(ವನವಿಹಾರಕ್ಕಾಗಿ ಸಖಿಯರೊಡನೆ ತಪತಿಯು ಪ್ರವೇಶಿಸುವಳು.)

ತಪತಿ:—

ರಾಗ: (ವನಜಾತ ಮುಖಿಯರೆಲ್ಲ.)

ವನಜಾತ ಪತ್ರನೇತ್ರಿ ಚೈತ್ರ ವನದೊಳಾಡುವಾ ।
ಕನಕಾಭಗಾತ್ರಿ ಇದು ವಿಚಿತ್ರಮೆನಲು ಪಾಡುವ ॥ ೧ ॥
ಸರಸೀರುಹಂಗಳೆಸೆವ ಜಲವಿಹಾರ ಮಾಡುವ ।
ಕಲಕೀರವಾಣಿ ಕೊಳವೆಯಿಂದ ನೀರನೆರೆಚುವ ॥ ೨ ॥
ವನದಲ್ಲಿ ಶೋಭಿಸುವ ಫಲಂಗಳನ್ನು ಮೆಲ್ಲುವ ।
ಸುಖದಿಂದ ಗಂಧಕುಸುಮ ಪುಡಿಗಳನ್ನು ಚೆಲ್ಲುವ ॥ ೩ ॥
ಬಲು ಲೀಲೆಯಿಂದ ಕೊಯ್ದು ಪೂಮಾಲೆ ಮುಡಿಯುವ ।
ಘನ ನೀಲವೇಣಿ ಬನದೊಳುಯ್ಯಾಲೆ ಮಾಡುವ ॥ ೪ ॥

(ಮುಂದೆ ಬಂದು), ಸಖಿ, ಕಲಾವತಿ! ವಿಕಸಿತವಾದ ಈ ಪದ್ಮವು ಹೇಗೆ ಶೋಭಿಸುವುದು?

ಕಲಾವತಿ:— ಮಿತ್ರಸಂದರ್ಶನದ ಸಂತೋಷವನ್ನು ಸೂಚಿಸುವಂತಿದೆ.

ಲೀಲಾವತಿ:— ಸಖಿ, ಹೀಗೇಕೆ ಹೇಳುವೆ? ಅರ್ಥವಾಗುವಂತೆ ಹೇಳಬಾರದೇ?

ಚಿತ್ರಲೇಖೆ:— ಸಖಿ, ಕಲಾವತಿಯ ಮಾತು ಅರ್ಥವಾಗುವುದಿಲ್ಲವೇ? ಸೂರ್ಯನನ್ನು ನೋಡಿ ನಗುವಂತೆ ಇದೆಯಲ್ಲವೆ?

ಲೀಲಾವತಿ:— ನನ್ನ ಅಭಿಪ್ರಾಯವು ಅದಲ್ಲ.

ಕೋಮಲಾಂಗಿ:— ನಿನ್ನ ಅಭಿಪ್ರಾಯವೇನು?

ಲೀಲಾವತಿ:— ನಮ್ಮ ತಪತೀದೇವಿಗೆ ಕಲಾವತಿಯಲ್ಲಿ ತುಂಬಾ ಪ್ರೀತಿ. ನಿಜವಾದ ಅಭಿಪ್ರಾಯವನ್ನು ತಿಳಿಸಿದರೆ ದೇವಿಗೆ ಕೋಪವುಂಟಾಗಬಹುದು.

ತಪತಿ:— (ನಸುನಕ್ಕು) — ಪ್ರಿಯ ಸಖಿ, ನನಗಾರಲ್ಲಿಯೂ ಕೋಪವಾಗಲೀ, ಪಕ್ಷಪಾತವಾಗಲೀ ಇಲ್ಲ. ನಿನ್ನ ಅಭಿಪ್ರಾಯವೇನೋ ಸ್ಪಷ್ಟವಾಗಿ ಹೇಳು.

ಲೀಲಾವತಿ:— ಕಲಾವತಿ! ತನಗೆ ಸೂರ್ಯನು ಹೇಗೋ ಹಾಗೆಯೇ ನಿನಗೂ ಮಿತ್ರನ ದರ್ಶನವುಂಟಾಗುವುದೆಂದು ಅದು ತನ್ನ ಸಂತೋಷವನ್ನು ನಿನಗೆ ವ್ಯಕ್ತಪಡಿಸುವುದು.

ಕಲಾವತಿ:— ಸಖಿ, ದೇವಿಯು ಬಹಿರಂಗದಲ್ಲಿ ಕೋಪಮಾಡದಿದ್ದರೂ, ಈ ರೀತಿ ಹೇಳುವುದರಿಂದ ಅಂತಸ್ತಾಪಕ್ಕೆ ಗುರಿಯಾಗದಿರುವಳೇ?

ಸಖಿಯರೆಲ್ಲರೂ:— ಸರಿ, ಸರಿ, ತಿಳಿಯಿತು. ಈಗಲೀಗ ಅರ್ಥವಾಯಿತು.

ತಪತಿ:— (ಕೇಳದವಳಂತೆ ಮುಂದೆಬಂದು ನೋಡುತ್ತ ನಿಲ್ಲುವಳು.)

ಕಲಾ:— ಸಖಿ, ಆವುದನ್ನು ನೋಡಿ ಚಿಂತಿಸುವೆ?

ಚಿತ್ರಲೇಖೆ:— ಆವುದನ್ನು ನೋಡುತ್ತಿರುವೆ, ಪ್ರಿಯ ಸಖಿ!

ಕೋಮಲಾಂಗಿ:— ಸಖಿ, ಕಾಣುವುದಿಲ್ಲವೆ? ಫಲಭರಿತ ವೃಕ್ಷವನ್ನು!

ಲೀಲಾವತಿ:—(ನಕ್ಕು) ಸಖಿ, ನಮ್ಮ ದೇವಿಯು ಫಲಭರಿತವಾದ ವೃಕ್ಷವನ್ನು ಎಂದೂ ನೋಡಿಲ್ಲವೆ?

ಚಿತ್ರಲೇಖೆ:— ಹಾಗಾದರೆ, ಮತ್ತಾವುದನ್ನು ನೋಡುತ್ತಿರುವಳು?

ಲೀಲಾವತಿ:— ನಮ್ಮ ಸಖಿಯು ಚೂತವೃಕ್ಷದಲ್ಲಿ ಸರಸವಾಡುತ್ತಿರುವ ಶುಕದಂಪತಿಯನ್ನು ನೋಡಿ, ತಾನೂ ಹಾಗೆ ಸರಸವಾಡುವುದೆಂದಿಗೆ— ಎಂದು ಚಿಂತಿಸುತ್ತಿರುವಳು.

ತಪತಿ:— (ಲಜ್ಜೆಯಿಂದ ತಲೆತಗ್ಗಿಸಿ, ಮೆಲ್ಲನೆ) ಸಖಿಯರೇ! ಸರೋವರದಲ್ಲಿ ಜಲಕ್ರೀಡೆಯಾಡುವಾ, ಬನ್ನಿರಿ. (ಎಂದು ಮುಂದೆ ಬಂದು ಕೊಳದಲ್ಲಿಳಿಯುವಳು.)

ಕಲಾವತಿ:— ಸಖಿಯರೆಲ್ಲರನ್ನೂ ಕರದುಕೊಂಡು ಬಂದು—

ರಾಗ: ಜಂಜೋಟಿ। ರೂಪಕ॥ (ಘನವಸಂತ)

ಬಾಲಕಿಯರೆ ಬನ್ನಿನೀ ರಾಳ ನೋಡುವ ।
ಬಲು ಲೋಲಕಲ್ಲೋಲಿನಿಯೊಳು ಲೀಲೆಯಾಡುವ ॥ ಪ ॥

(ನೀರನ್ನು ಕೈಯಿಂದ ತೆಗೆದು ಚಲ್ಲುವಳು.)

ಕೋಮಲಾಂಗಿ:—

ಸರಸಿಜಾಕ್ಷಿ ಸರಸಿಯೊಳಗೆ ಸರಸವೇನಿದು ।
ಶಿರದಿ ಮಳೆಯ ಪರಿಯ ನೀರ ನೆರಚುತಿರ್ಪುದು ॥ ೧ ॥

(ನೀರನ್ನು ಕೈಗಳಿಂದ ತಡೆಯುವಳು.)

ಲೀಲಾವತಿ:—

ಪ್ರಸ್ತುತದಿ ಪ್ರಶಸ್ತವನ್ನು ವಿಸ್ತರಿಸುವುದು ।
ಹಸ್ತಿಗಮನೆ ಹಸ್ತಮಳಿಕ ರಸ್ಥವೇನಿದು ॥ ೨ ॥

(ನೀರನ್ನು ಕೈಯಿಂದ ಕಲಕುವಳು.)

ಚಿತ್ರಲೇಖೆ:—

ಬಾಲೆಯೆನ್ನ ಮೇಲೆ ನೀರ ಕೋಲನಿಡುವುದು ।
ನೀಲವೇಣಿ ಲೀಲೆಯೆಂಬ ಶೀಲವೇನಿದು ॥ ೩ ॥

(ನೀರಿನಲ್ಲಿ ಆಡುವಳು.)

ಕಲಾವತಿ:—

ದಿಟ್ಟಮುಗಿಲು ಬೆಟ್ಟತುದಿಯ ಘಟ್ಟನೇರದೆ ।
ಬಟ್ಟಮೊಲೆಯ ಬೆಟ್ಟಗಳಲಿ ವೃಷ್ಟಿ ಸುರಿಯದೆ ॥ ೪ ॥

(ನೀರಿನಲ್ಲಿ ಆಡುವಳು.)

ತಪತಿ:—

ಮಿಂಚಿನೊಡನೆ ಹೊಂಚುತಿರುವ ಚಂಚಲಾಕ್ಷಿಯೆ ।
ಮುಂಚಿಸುವುದು ಕೊಂಚ ಮಳೆಯ ಅಂಚಗಮನೆಯೆ ।

ಕಲಾವತಿ:— ದೇವಿ, ಪೂಜಾಸಮಯವು ಮೀರುತ್ತಿರುವುದು. (ಎಲ್ಲರೂ ಎದ್ದು ಬರುವರು.)

ತಪತಿ:—

ಕಂದ ॥ ಧೌತಾಂಬರದಿಂದೊಪ್ಪುತೆ । ಪೀತಾಂಬರನರಸಿಯನ್ನು ಪೀಠದೊಳಿರಿಸೀ ॥
ಶ್ವೇತಾಂಬುರುಹದಿ ಅರ್ಚಿಸಿ । ಗೀತಂಗಳ ಪಾಡಿ ಪೂಜೆಗೈಯುವ ನಮಿಸೀ ॥

(ಎಲ್ಲರೂ ಶುಭ್ರವಸ್ತ್ರಧರರಾಗಿ ಬಂದು ಪೂಜಾಸಾಹಿತ್ಯಗಳನ್ನು ಮುಂದಿಡುವರು. ತಪತಿಯು ಸಖಿಯೊಡನೆ ಬಂದು ಲಕ್ಷ್ಮಿಯನ್ನು ಅರ್ಚಿಸಿ ಬದ್ಧಾಂಜಲಿಪುಟರಾಗಿ ನಿಂತೆಲ್ಲರೂ ಸ್ತುತಿಸುವರು.)

ರಾಗ: (ಸ್ವೀಕರಿಸೈ ಮುನಿಯೆ)

ಕಮಲಾಲಯೇ ಶ್ರೀ ಕಮಲಾಭಿಧೆಯೆ ।
ಕಮಲನಾಭಜಾಯೆ ನಮಿಸುವೆ ತಾಯೇ ॥ ಅ ॥
ವನಜಾತ ನೇತ್ರಿ ಕನಕಾಭಗಾತ್ರಿ ।
ವನನಿಧಿ ಪುತ್ರಿ ಘನಸುಪವಿತ್ರಿ ॥ ೧ ॥
ದಾನವಾರಿ ಶರಣೆ ಶ್ರೀನಿವಾಸ ಚರಣೆ ।
ಮಾನಸಶುಭ ಸಂವಿಧಾನ ವಿಚಕ್ಷಣೆ ॥ ೨ ॥
ದ್ವಿಜರಾಜ ವದನೆ ಗಜರಾಜ ಗಮನೆ ।
ವೃಜನರಾಜ ಶಯನೆ ಭಜಕ ಜನಪಾವನೆ ॥ ೩ ॥

(ಎಲ್ಲರೂ ಪುಷ್ಪವನ್ನು ಸಮರ್ಪಿಸಿ ನಮಸ್ಕರಿಸುವರು.)

ತೆರೆಯಲ್ಲಿ.— ರಾಗ: (ಶಿರಿಕಾಂತಾಶ್ರಿತಚಿಂತ)

ಜಯಧಾರ, ಮುರವಿದಾರ, ರಮಾಮನೋಹರೆ ॥ ಪ ॥

ಕಲಾವತಿ:— ದೇವಿ! ನೋಡು.

ಕಂದ ॥ ವೀಣಾಂಕ ಪಾಣಿ ಇವತಾಂ । ಏಣಾಂಕ ಸದೃಶದಿ ಪೊಳೆವ ಶುಭ್ರಾಂಬರದಿಂ ॥
ಶ್ರೀನಾಥನ ಭಜಿಸುತ್ತಂ । ತಾನೈ ತಂದಪನಿದೊ ಮುದದಿಂ ಸುರಮುನಿಪಂ ॥
(ವೀಣಾಪಾಣಿಯಾದ ನಾರದನು ಪ್ರವೇಶಿಸುವನು.)

ತಪತಿ:—(ಮುಂದೆ ಬಂದು) ಪೂಜ್ಯರಿಗೆ ವಂದಿಸುವೆನು. ಪೀಠವನ್ನಲಂಕರಿಸಬೇಕು.

ನಾರದ:—ಮಂಗಳಾಂಗಿಯೇ, ಚಕ್ರಾಧೀಶ್ವರನ ರಾಣಿಯಾಗುವೆ. (ಕುಳಿತುಕೊಳ್ಳುವನು.)

ಸಖಿಯರು:— ಪೂಜ್ಯರೆ, ವಂದಿಸುವೆವು.

ನಾರದ:— ಸೌಭಾಗ್ಯದಿಂದ ಬಾಳ್ವಿರಿ.

ತಪತೀ:— ಪೂಜ್ಯರೆ, ಸದಾನಂದ ಪರಿಪೂರ್ಣರಾದ ತಮ್ಮ ದರ್ಶನದಿಂದ ಧನ್ಯಳಾದೆನು. ಏನುಮಾಡಬೇಕೋ ಅಪ್ಪಣೆಯಾಗಲಿ.

ನಾರದ:— ಮಂಗಳಾಂಗಿ, ನಿನ್ನ ಭಕ್ತಿಯಿಂದಲೇ ತೃಪ್ತನಾಗಿರುವೆನು.

ಕಲಾವತಿ:— ಮಹಾತ್ಮರ ಪ್ರಸನ್ನತೆಯು ಕ್ಷಿಪ್ರ ಫಲಕಾರಿಯಲ್ಲವೆ? ಹಾಗಾದರೆ, ನಮ್ಮ ದೇವಿಯು ಕುಂದಣದ ವರತೆಯೊಡನೆ ಸೇರಿದ ರತ್ನದಂತೆ ಪ್ರಕಾಶಿಸುವುದಿನ್ನಾವಾಗ? ಅಪ್ಪಣೆಯಾಗಲಿ!

ನಾರದ:— ಸುಶೀಲೆ, ತಪತೀದೇವಿಗೆ ನಾನು ಮೊದಲೇ ಹೇಳಿದ್ದಂತೆ ಸಂವರಣ ಭೂಪಾಲನು ಸಮೀಪದಲ್ಲಿಯೇ ಬಂದಿರುವನು.

ಲೀಲಾವತಿ:— ಪೂಜ್ಯರೆ, ಆ ಮಹಾರಾಜನ ಶೀಲಸ್ವಭಾವ ವೈಭವಗಳನ್ನು ತಿಳಿಯಬೇಕೆಂದು ಅಪೇಕ್ಷಿಸುವೆವು; ದಯೆಯಿಟ್ಟು ತಿಳಿಸಿದರೆ ದೇವಿಯೂ ಹರ್ಷಪಡುವಳು.

ನಾರದ:—

ರಾಗ: (ಏಕಕೀ ಛಲಮಾಡುವೆ.)

ಕೇಳಮ್ಮ ಪುಣ್ಯಾವತಿಯೆ । ಕೇಳ್ ಸುದತಿಯೆ ॥ ಪ ॥
ರಾಜಾಧಿರಾಜನು ರಾಜಾರ್ಕತೇಜನು ।

ರಾಜವದನಪಂಕೇಜನಯನ ಮಹಾ
ರಾಜರಾಜ ಸುರರಾಜ ಮಹೌಜನು ॥ ಕೇಳಮ್ಮ ॥ ೧ ॥
ರೂಪದಿ ಕಾಮನು ಕೋಪದಿ ಭೀಮನು ॥
ಚಾಪದಿ ಭಾರ್ಗವ ರೂಪದ ರಾಮಪ್ರತಾಪನು
ಗೋಪತಿ ರೂಪನು ಭೂಪತಿ ॥ ಕೇಳಮ್ಮ ॥ ೨ ॥
ಕಾಮಿತ ವೀವನು ಪ್ರೇಮದಿ ಕಾಮನು ।
ನೇಮವನಿಾರದೆ ಭೂಮಿಯನಾಳುತ ।
ಸಾಮದಿ ಶ್ರೀರಘುರಾಮನ ಪೋಲ್ವನು ॥ ಕೇಳಮ್ಮ ॥ ೩ ॥

ಕಲಾವತಿ:—ಮಹಾತ್ಮರೇ! ಆ ಪುಣ್ಯಚರಿತ್ರನ ದರ್ಶನವು ಲಭಿಸುವುದೆಲ್ಲಿ? ಆವಾಗ?

ನಾರದ:—ತಪನನಂದನೆಗೆ ಜ್ಞಾಪಕವನ್ನು ಕೊಡುವುದಕ್ಕಾಗಿಯೇ ಬಂದೆನು. ಸಂವರಣರಾಜನು ಶ್ರಾಂತನಾಗಿ ಇತ್ತಕಡೆಗೆ ಕ್ಷಿಪ್ರದಲ್ಲಿಯೇ ಬರುವವನಾಗಿದ್ದಾನೆ. ಅವನನ್ನು ಸರಿಯಾಗಿ ಉಪಚರಿಸುವುದು.

ತಪತಿ:—ಪೂಜ್ಯರೇ! ತಂದೆಯ ಅಧೀನದಲ್ಲಿರುವ ನಾನು ಆತನನ್ನು ಉಪಚರಿಸುವುದು ಹೇಗೆ?

ನಾರದ:—ಮಂಗಳಾಂಗಿಯೆ! ನಿನ್ನ ಜನಕನು ಒಪ್ಪಿಯೇ ಇರುವನು. ಆದರೂ ಕೇವಲ ಸಾಂತ್ವವಚನದಿಂದ ಉಪಚರಿಸು. ನಾನಿನ್ನು ತೆರಳುವೆನು. (ಎಲ್ಲರೂ ಕೈಮುಗಿವರು.)

(ನಾರದನು ಮೇಲಿನ ಹಾಡನ್ನೇ ಹಾಡುತ್ತ ಹೊರಡುವನು.)

ತೆರೆಯಲ್ಲಿ:—ಆಹಾ! ಆಯಾಸವು ಮಿತಿಮಿಾರಿತು. ಏನುಮಾಡಲಿ?

ಕಲಾವತಿ:—(ತೆರೆಯ ಕಡೆ ನೋಡಿ ಆಶ್ಚರ್ಯದಿಂದ):—"ಪ್ರಿಯ ಸಖಿ, ತಪನಪುತ್ರಿ! ನಾರದ ವಾಕ್ಯವು ನೆನಪಿರಲಿ. ವೀರರಸವೇ ಮೂರ್ತಿಭವಿಸಿದಂತೆ ಸಂವರಣರಾಜನು ಇತ್ತಕಡೆಯೇ ಬರುತ್ತಿರುವನು. ನೋಡು!

ತಪತಿ:— ಸಖಿಯರೇ! ಈ ರಾಜನ ಸ್ವಭಾವವನ್ನು ನೋಡುವ ಕುತೂಹಲವಿರುವುದು; ನಡೆಯಿರಿ, ಮರೆಯಾಗಿದ್ದು ನೋಡುವ. (ಎಲ್ಲರೂ ಮರೆಯಾಗುವರು.)

(ಸಂವರಣಮಹಾರಾಜನು ಪ್ರವೇಶಿಸುವನು.)

ರಾಜ:— ಮುಂದೆ ಬಂದು ನಾಲ್ಕುಕಡೆಯನ್ನೂ ನೋಡಿ ಸಂತೋಷದಿಂದ ಆಹಾ!

ರಾಗ: (ಈ ಮಾನಿನೀ.)

ಈ ಕಾನನಂ ಕಮನೀಯಂ । ಲೋಕಾತಿಶಯಮೆನಲೀ ॥ ಪ ॥
ತರುಣಾಂಗ ಸಂಗತ ತರುಣೀಯಂದದಿ ।
ತರುವರನಂ ತರುಣಲತೆ ಪರಿರಂಭಿಸುತಿಹುದೀ ॥ ಕಾನನಂ ॥ ೧ ॥
ರಮಣೀ ಮುಖಾಬ್ಜದ ರಮಣರು ಚುಂಬಿಪ ॥
ಕ್ರಮಮಂ ಕುಸುಮದಲೀ-ಭ್ರಮರಂ ಪಡೆಯುತ್ತಿಹುದೀ ॥ ೨ ॥
ಶೀತಂ ಸುರಭಿ ಮೃದು । ವಾತಂ ಕುಸುಮ
ಘುಟಿಯಾತಂ ಸುಘಾತಂ (?) ತಾನಾಗಿಹುದೀ ॥ ೩ ॥

(ಮತ್ತೆ ನೋಡಿ) ಇಲ್ಲಿರುವ ಸಕಲ ವಸ್ತುಗಳೂ ಪರಾರ್ಥವಾದುವುಗಳೆಂದೇ ತೋರುವುದು. (ಚನ್ನಾಗಿ ನೋಡಿ ವಿಸ್ಮಯದಿಂದ)

ಕಂದ ॥ ಭಾವಜನಸ್ತ್ರದ ಶಾಲಾ । ಭಾವದಿ ತರುಗುಲ್ಮಮೆಲ್ಲ ಬಾಧಿಪುದನಿಶಂ ॥
ಈವನ ಕೈತಹ ವಿರಹಿಯು । ದಾವನು ಜೀವಿಸುವನಿಲ್ಲಿ ಸುಖದಿಂ ಮನುಜಂ ॥

ಆಹಾ! ಮಿತ್ರನಾದ ಅಶೋಕನು ಹೇಳಿದ ಪ್ರದೇಶವು ಇದೇ ಆಗಿರಬಹುದು; ಆದರೆ ಸಿದ್ಧಸಂಕಲ್ಪನು ಇನ್ನೂ ಏಕೆ ಬರಲಿಲ್ಲ? (ಚಿಂತಿಸುವನು.)

ವಿದೂಷಕ: — (ಸಂಭ್ರಮದಿಂದ ಹಾಡುತ್ತ ಪ್ರವೇಶಿಸುವನು.)

ರಾಗ: ಸೋಟ್ ॥ (ಅಮ್ಮ ಕೇಳೀ ವಾರ್ತೆಯ)

ಕಂಡೆನಿಲ್ಲಿ ರಾಜನಂ । ಚಂಡಕಿರಣ ತೇಜನಂ ॥ ಪ ॥
ಕೂಡಿ ಮೃಗದ ಬೇಟೆಗೆ । ಓಡಿಬಂದೆ ಕಾಡಿಗೆ ॥ ೧ ॥

ಕುದುರೆಯೆಲ್ಲಿ ಪೋದುದೊ। ಉದರಬಾಧೆಯಾದುದೊ ॥ ೨ ॥
ವನದಿ ನಿನ್ನ ಕಾಣದೆ। ಮನದಿ ಚಿಂತೆ ಮಾಡಿದೆ ॥ ೩ ॥
ಕಷ್ಟವೇನ ಪೇಳಲಿ। ಇಷ್ಟು ಘೋರ ವನದಲಿ ॥ ಕಂಡೆ ॥ ೪ ॥

ರಾಜ:— (ವಿದೂಷಕನ ಕೈ ಹಿಡಿದು) ಮಿತ್ರನೆ, ಮಾಯಾಮೃಗದಿಂದ ವಂಚಿತನಾಗಿ ಈ ಅರಣ್ಯವನ್ನು ಪ್ರವೇಶಿಸಿ, ದುಷ್ಟನಾದ ದನುಜನ ಕೂಡ ಯುದ್ಧಮಾಡಿ ಶ್ರಾಂತನಾದ ನನ್ನನ್ನು ನೀನು ಕಂಡುಹಿಡಿದುದು ಹೇಗೆ?

ವಿದೂ:— (ನಗುತ್ತ) ॥ಸ್ವಗತಂ॥ ಜ್ಯೋತಿಷಶಾಸ್ತ್ರ ಪರಿಚಯದಿಂದ ನಾನು ಹೇಳಿದುದರಲ್ಲಿ ರಾಜನಿಗೆ ಇಷ್ಟು ನಿಜವಾಯಿತು, ಇರಲಿ. ॥ಪ್ರಕಾಶಂ॥ ಮಹಾರಾಜನೇ, ಎಲ್ಲವನ್ನೂ ನಾನು ಮೊದಲೇ ಹೇಳಲಿಲ್ಲವೆ?

ರಾಜ:— ಮಿತ್ರನೆ, ವೇದಕ್ಕೆ ಕಣ್ಣಾದ ಜ್ಯೋತಿಷದಲ್ಲಿ ನಿನಗೆ ಇಷ್ಟು ಪಾಂಡಿತ್ಯವಿರುವುದೆಂದು ತಿಳಿದಿರಲಿಲ್ಲ.

ವಿದೂ:— ಮಿತ್ರನೆ, ಅತಿ ಪರಿಚಯದಿಂದ ಅನಾದರವುಂಟಾಗುವುದೆಂದು ನೀತಿಯುಂಟು. ಹಾಗೆಯೇ ನಾನು ಪದೇಪದೇ ಬರುತ್ತಿರುವುದರಿಂದ ಅನಾದರವಾಗುವುದು ಆಶ್ಚರ್ಯವಲ್ಲ.

ರಾಜ:— ಮಿತ್ರನೆ, ಹಾಗೆ ಭಾವಿಸಬೇಡ, ಇತ್ತ ನೋಡು—

ಕಂದ॥ ಪಾತಾಳದೊಳಿರುತಿಹನಾ। ವಾತಾಶನನಾಥನಿಲ್ಲಿಗೈತಂದಿಹನೋ ॥
ಭೂತಲಮಳಿದಂದಿನ ಸಿರಿ। ನಾಥನ ಪದಮೋ ಎನಿಸುವದೀಕ್ಷಿಸಿ ನೋಡೈ ॥

ಅಲ್ಲದೆ, ಮಧುಪಾನ ಮಾಡಿದ ಭ್ರಮರಗಳ ಝೇಂಕಾರದಿಂದಲೂ ಶುಕಪಿಕಂಗಳ ಧ್ವನಿಗಳಿಂದಲೂ ಮಂದಮಾರುತನಿಂದಲೂ ಕೂಡಿದ ವಸಂತನು, ಈ ವನದಲ್ಲಿ, ಸ್ಮರಸಾರ್ವಭೌಮನನ್ನು ಸಂತೋಷಪಡಿಸುವಂತೆ ಇರುವುದು.

ವಿದೂ:— ಕಿವಿಕೊಟ್ಟು ಕೇಳಿ ಸಂತೋಷದಿಂದ—

ಕಂದ ॥ ಮಧುಕರ ಶುಕಪಿಕ ವಾಸಿತ। ಮಧುರಸ್ವರವೊಂದುಗೂಡಿ ವೀಣಾಗುಣವಿಂ।
ವಿಧವಿಧರಾಗದಿ ಪಾಡಲು। ಬುಧಜನರಿಗೆ ಮೋದವೊಂದವಿರುವುದೆ ಪೇಳ್ವೈ ॥

ರಾಜ:— ಆಶ್ಚರ್ಯವಾಶ್ಚರ್ಯವು! ಮಿತ್ರನೇ, ಈ ತೇಜೋರಾಶಿಯನ್ನು ನೋಡು!

ವಿದೂ:— ಮಹಾರಾಜನೆ, ಇದು ತೇಜೋಮಾತ್ರವಲ್ಲ, ಪರ್ವತವನ್ನೇರಿ ಬರುವ ತರುಣಿಯ ರೂಪದಂತೆ ತೋರುವುದು. (ಚೆನ್ನಾಗಿ ದೃಷ್ಟಿಸಿ ನೋಡಿ) ಓಹೋ, ನಿಜವಾಗಿಯೂ ತರುಣಿಯೇ!

ರಾಜ:— (ನೋಡುತ್ತ ಕೌತುಕದಿಂದ)

ರಾಗ: ಬೇಹಾಗ್ ॥ (ಗಂಧಕುಂಕುಮ ಪರಿಮಳ.)

ತೋರಿ ಮೆರವ ನಾರೀರನ್ನೆಯಾರೋ ಅರಿಯೆನಾಂ।
ವಾರಿವಾಹದಲ್ಲಿ ಮಿಂಚುಹಾರುವಂತೆ ಗಿರಿಯ ಮೇಲೆ ॥ ಪ ॥
ಕರಚತುಷ್ಟಯುಮಿಲ್ಲ ಕೆಲದಿಕರಿಗಳಿಲ್ಲವೋ ।
ಕರದಿಕಮಲಮಿಲ್ಲ ಶ್ರೀ ತರುಣಿಯಲ್ಲವೋ ॥ ೧ ॥
ಕರದಿಶೂಲಮಿಲ್ಲ ಶಶಿಯು ಶಿರದೊಳಿಲ್ಲವೊ ।
ಕರಿಯ ವೈರಿಯಿಲ್ಲ ಇವಳು ಗಿರಿಜೆಯಲ್ಲವೊ ॥ ೨ ॥
ಭುವನರಾಜ ಹಂಸೆಯನ್ನು ಕಾಣೆ ಜೊತೆಯಲಿ ।
ಪಾಣಿಯಲ್ಲಿ ವೀಣೆಯಿಲ್ಲ ವಾಣಿಯಲ್ಲವೊ ॥ ೩ ॥

ರಾಜ:— (ಮತ್ತೆ ನೋಡುತ್ತ)

ರಾಗ: ಧನಾಸರಿ ॥ ಆದಿ ॥ (ಸಖನೆ ಕೇಳಾಶಶಿ)

ಆರಿವಳೀಗಿರಿ ಚಾರಿಣಿ ನೋಡಲು ॥ ಪ ॥
ಮಾರನ ಅರಗಿಣಿ ನಾರೀಶಿರೋಮಣಿ ॥ ಅನು ॥
ಊಹಿಸಲಸುರರು । ಮೋಹಿಸಲ್ಪೈತಹ ।
ಶ್ರೀಹರಿ ಕೃತಕದ । ಮೋಹಿನಿಯಂತಹ ॥ ಆರಿವ ॥ ॥ ೧ ॥

ಸತತವು ಜೀವರ ತತಿ ಮೋಹಿಪ ಹರಿ।
ಸುತನಮೋಹಿಸುತಿಹ ರತಿಯನ್ನು ಮೀರಿಹ ॥ ಆರಿವಳೀ ॥ ೧ ।

ವಿದೂ:—

ಕಂದ ॥ ತರುಣಿಯ ಬಳಿಯೊಪ್ಪಿರುವಾ । ತರಳೆಯರಂ ನೋಡು ದಿವ್ಯ ಭೂಷಣಯುತರಂ ॥
ಸಿರಿಯನು ಬಳಸಿಹ ಶಕ್ತಿನಿ । ಕರಮೋ ಎನಲೀಕ್ಷಿಪರ್ಗೆ ಮುದಮೀವರನುಂ ॥

ರಾಜ:— ಮಿತ್ರನೇ, ಸ್ಮರವೈಯ್ಯಾರಿಯಾದಾ ತರುಣಿ ಯಾರೋ ತಿಳಿದು ಬಾ.

ವಿದೂ:— ಮಹಾರಾಜನೇ, ರೂಪಸಂಪನ್ನೆಯರಾದ ತರುಣಿಯರ ಸಮೀಪಕ್ಕೆ ಹೋಗುವ ನಾನು, ವಯೋರೂಪಸಂಪನ್ನನಾಗಿರುವುದರಿಂದ ಅವರು ಮೋಹಪಾಶದಲ್ಲಿ ಕಟ್ಟಿದರೆ ನಿನ್ನ ಬಳಿಗೆ ಹೇಗೆ ಬರಲಿ?

ರಾಜ:–ಮಿತ್ರನೇ, ಹಾಗಾದ ಕಾಲದಲ್ಲಿ ನಿನ್ನನ್ನು ಬಿಡಿಸಿಕೊಳ್ಳಲು ನಾನೇ ಬರುವೆನು.

ವಿದೂ:— ಹಾಗೋ? ಸರಿ, ಇನ್ನು ನಾನು ಹೊರಟೆ.

ರಾಜ:— ನೀನು ಬರುವ ವರೆಗೆ ನಾನು ಈ ಶಾಲೆಯಲ್ಲಿ ಕುಳಿತು ವಿಶ್ರಮಿಸುತ್ತಿರುವೆನು. (ಹೋಗುವನು.)

ವಿದೂ:— (ಸ್ವಗತಂ) ರಾಜನ ಪ್ರಶ್ನೆಗೆ ಸಮಾಧಾನ ಹೇಳುವುದಕ್ಕಾಗಿ ನಾನು ಹೋಗಬೇಕಾಗಿಲ್ಲ. ಈ ತರುಣೀಮಣಿಯ ಎಲ್ಲಾ ವೃತ್ತಾಂತವು ಸರ್ವಜ್ಞನಾದ ನನಗೆ ತಿಳಿದೇ ಇರುವುದು. ಈ ಸ್ತ್ರೀಯರಿಗೆ ದೇವಬ್ರಾಹ್ಮಣ ವಿಶ್ವಾಸವು ಹೇಗಿರುವುದೋ ತಿಳಿಯಲು ಹೋಗುವೆನು. (ಪ್ರಕಾಶಂ) (ಮುಂದೆ ಬರುವನು.)

(ಮರೆಯಲ್ಲಿದ್ದ ತಪತಿಯು ಸಖಿಯರೊಡನೆ ಬಂದು,) 'ಪೂಜ್ಯರೆ ವಂದನೆ! ಈ ಪೀಠವನ್ನು ಅಲಂಕರಿಸಬೇಕು.

ವಿದೂ:— ಶುಭಮಸ್ತು! (ಕುಳಿತುಕೊಳ್ಳುವನು.)

ಚಿತ್ರರೇಖೆ:–ಮಹನೀಯರೇ, ತಾವಾರು? ತಮ್ಮ ನಾಮಧೇಯವೇನು?

ವಿದೂ:–ಶೋಭನಾಂಗಿ, ಮುಖವನ್ನು ನೋಡಿದರೆ ಬ್ರಾಹ್ಮಣನೆಂಬುದೂ ಹೊಟ್ಟೆಯನ್ನು ನೋಡಿದರೆ ವಿಘ್ನೇಶ್ವರ ಭಟ್ಟನೆಂಬುದೂ ತಿಳಿಯಲಿಲ್ಲವೇ?

ಕಲಾವತಿ:–ಪೂಜ್ಯರೇ! ಬ್ರಾಹ್ಮಣರೆಂದು ತಿಳಿದುದರಿಂದಲೇ ನಮಿಸಿದೆವು. ವಿಘ್ನೇಶನಾದರೆ,—

ವಿದೂಷಕ:— ಶೋಭನಾಂಗಿಯರೇ, ನಿಮ್ಮ ಆಕ್ಷೇಪವು ತಿಳಿಯಿತು. ಸಮಾಧಾವನ್ನು ಕೇಳಿರಿ, ಸೊಂಡಿಲನ್ನು ತರುಣಿಯರ ತೊಡೆಗಳಿಗೂ, ಕುಂಭಸ್ಥಲಗಳನ್ನು ಯುವತಿಯರ ನಿತಂಬಗಳಿಗೂ, ಸರ್ಪವನ್ನು ಸುದತಿಯರ ಜಡೆಗೂ ಪರಿವರ್ತನೆಯಾಗಿ ಕೊಟ್ಟು, ಅವರೆಲ್ಲರ ಮಧ್ಯಪ್ರದೇಶವನ್ನು ತಾನು ತೆಗೆದುಕೊಂಡೆನು.

ಲೀಲಾವತಿ:— ಪೂಜ್ಯರೆ, ತಮ್ಮ ಆವಾಸವೆಲ್ಲಿ?

ವಿದೂ:— ನಮ್ಮ ಆವಾಸವು ಸ್ವರ್ಗಲೋಕಕ್ಕೂ ಶ್ರೇಷ್ಠವೆನಿಸಿದ ಹಸ್ತಿನಾವತಿಯಲ್ಲಿ.

ಚಿತ್ರಲೇಖೆ:— ಆ ಹಸ್ತಿನಾವತಿಯು ಅಷ್ಟು ವೈಭವಯುಕ್ತವಾದುದೆ?

ವಿದೂ:— ಶುಭಾನನೇ, ಕೇಳು— ಹಸ್ತಿನಾವತಿಯನ್ನು ಸ್ವಲ್ಪದರದಲ್ಲಿ ವರ್ಣಿಸುವೆನು:—

ಕಂದ ॥ ತ್ರಿದಿವಂ ಸುಪರ್ವರೆನಿಸಿದೊಡಂ । ತ್ರಿದಶಾಲಯಮೆಂಬ ಕೊರತೆ ತಪ್ಪದು ಸತತಂ ॥
ಬುಧವರರಗಣಿತಮಾಗಿಹ । ವಿಧುಕುಲದರಸಾಳ್ವ ಪುರದಿ ಕುಂದಿರದನಿಶಂ ॥

ಆ ಪಟ್ಟಣವನ್ನಾಳುವ ಸಂವರಣ ಭೂಪಾಲನ ಆಸ್ಥಾನಪಂಡಿತನೆಂದೂ ಅಂತರಂಗ ಮಿತ್ರನೆಂದೂ ನನ್ನನ್ನು ತಿಳಿಯಿರಿ! ನೀವು ಯಾರು?

ಕಲಾವತಿ:— ಪೂಜ್ಯರೇ, ಈ ದೇವಿಯೇ ತಪನಾತ್ಮಜೆಯಾದ ತಪತೀ ದೇವಿಯು. ನಾವೆಲ್ಲರೂ ಈ ದೇವಿಯ ಪರಿಚಾರಿಣೀಯರು.

ವಿದೂ:— (ತಪತೀದೇವಿಯನ್ನು ಕುರಿತು) 'ತಪನನಂದನೆ! ನಾರದ ಮಹರ್ಷಿಯಿಂದ ನಿನ್ನ ಯಾವದ್ವೃತ್ತಪನ್ನೂ ತಿಳಿದು ಬಲ್ಲೆನು; ನಿನಗೆ ಅನುರೂಪನಾದ

ಸಂವರಣಭೂಪಾಲನಿಗೂ ನಿನಗೂ ಸಾನ್ನಿಧ್ಯವನ್ನುಂಟುಮಾಡುವುದಕ್ಕಾಗಿಯೇ ಬಂದೆನು.

ತಪತಿ:— ಪೂಜ್ಯರೇ, ವನವಿಹಾರಕ್ಕಾಗಿ ನಾವು ಬಂದಿರುವೆವು; ನಿಮ್ಮ ಮಹಾರಾಜನೆಲ್ಲಿರುವುದು?

ವಿದೂ:— ಮಂಗಳಾಂಗಿ, ನಾರದರಿಂದ ಕೇಳಿ ತಿಳಿದೂ ಮರೆಮಾಚುವುದೇಕೆ? ನಮ್ಮ ಮಹಾರಾಜನು ಇದೋ ನೋಡು, ಇಲ್ಲಿಗೇ ಬರುತ್ತಿರುವನು.

ತಪತೀ:— (ಸಖಿಯರೊಡನೆ ಎದ್ದು ಥಟ್ಟನೆ ಮರೆಯಾಗುವರು.)

ವಿದೂ:–ಬಾರಯ್ಯಾ–ಮಹಾರಾಜಾ, ಬಾ, ನಿನಗಾಗಿ ಪೀಠವು ಸಿದ್ಧವಾಗಿದೆ.

ರಾಜ:—(ಮುಂದೆ ಬಂದು ಪೀಠದಲ್ಲಿ ಕುಳಿತು,) ಮಿತ್ರನೆ, ಈ ವನಪ್ರವೇಶಮಾತ್ರದಿಂದಲೇ ಆಯಾಸವೆಲ್ಲವೂ ಪರಿಹಾರವಾಗಿ ನೂತನೋತ್ಸಾಹವುಂಟಾಗಿರುವುದು.

ವಿದೂ:— ಉತ್ಸಾಹವು, ಕೇವಲ ವನಪ್ರದೇಶದಿಂದಲ್ಲ; ಇರಲಿ, ಸ್ವಲ್ಪ ಸಾವಧಾನದಿಂದಿರಬೇಕು.

ತಪತಿ:— (ಮರೆಯಾಗಿ.)

ಕಂದ ॥ ತರುಣಿಯೊ ತೇಜದ ಭರಣಿಯೊ । ಧರಣಿಗೆ ನಡೆತಂದ ಸೀತಕಿರಣದಖನಿಯೋ ॥
ಅರಣಿಜ ಮಾಗಿಹತೇಜ । ಸ್ಫುರಣವೊ ವರತರುಣನಂತೆ ತೋರುವ ನಾವಂ ॥

ರಾಜ:— ಮಿತ್ರನೇ, ಈ ಧ್ವನಿಯು ಎಷ್ಟು ಶ್ರಾವ್ಯವಾಗಿರುವುದು?

ವಿದೂ:––ಮಹಾರಾಜನೆ, ಇನ್ನೂ ಸ್ವಲ್ಪ ಸಾವಧಾನಿಸು.

ತಪತಿ:––(ಮರೆಯಾಗಿ.)

ರಾಗ: (ಮಾರ ಸುಂದರಸುಕು, ಅಥವಾ ಆನಂದಕರವಾಗಿ.)

ನೋಡಿರೆ ವನದೊಳಗಾಡುವನಾವಂ
ನೋಡಲು ಮನದಲ್ಲಿ ಮಾಡುವ ಮನೆಯಂ ॥ ಪ ॥

ಕರಚತುಷ್ಟಯಮಿಲ್ಲ ಹರಿಯಿವನಲ್ಲ ।
ಸಿರಿಮೊಗನಾಲ್ಕಿಲ್ಲ ಪರಮೇಷ್ಠಿಯಲ್ಲ ॥ ೧ ॥
ಶಿರದಲ್ಲಿ ಶಶಿಯಿಲ್ಲ ಗಿರಿಜೇಶನಲ್ಲ ।
ಸುರಪನಲ್ಲವು ಸಾಸಿರಕಣ್ಗಳಿಲ್ಲ ॥ ೨ ॥

ಕಲಾವತಿ:—(ಮರೆಯಾಗಿ) ದೇವಿ, ಇದೇನು, ಹೇಳುತ್ತಿದ್ದಂತೆಯೇ ಸ್ತಬ್ಧಳಾಗಿರುವೆ?

ಲೀಲಾವತಿ!—(ಮರೆಯಾಗಿ) ಸಖಿ, ಸೈರಿಸು, ಸೈರಿಸು! ಈವಿಧ ಸಂತಾಪಕ್ಕೆಡೆಗೊಡಬಾರದು. ಈತನೇ ಸಂವರಣ ಮಹಾರಾಜನೆಂದು ಕಾಣುವುದು. ಸ್ವಸ್ಥಳಾಗಿರು.

ವಿದೂ:—ಮಹಾರಾಜನೆ, ಇದೇ ಸುಸಮಯವು. ಈಗಲೇ ತಪತೀದೇವಿಯ ಸಮ್ಮುಖವನ್ನೈದಿ ಸಮಾಧಾನಪಡಿಸು.

ರಾಜ:—(ಎದ್ದುಬಂದು ತಪತಿಯ ಮುಂದೆ ನಿಲ್ಲುವನು.)

ತಪತಿ:—ಮಹಾತ್ಮರಿಗೆ ವಂದನೆ (ತಲೆಬಾಗುವಳು.)

ಕಲಾವತಿ:—ಮಹಾರಾಜನೆ, ಪೀಠವನ್ನು ಅಲಂಕರಿಸಿ, ಆತಿಥ್ಯವನ್ನು ಸ್ವೀಕರಿಸಬೇಕು.

ರಾಜ:—ಮಂಗಳಾಂಗಿಯರ ಆದರಾತಿಥ್ಯವನ್ನು ಸ್ವೀಕರಿಸದವರಾರು?

ಲೀಲಾವತಿ:—(ವಿನಯದಿಂದ)—

ರಾಗ: (ನವಮಲ್ಲಿಕಾದಿ ಪೂಗಳಿಗೆ)

ಮಾರಸುಂದರಾಂಗ ನೀನಾರೋ ಅರಿಯೆನು ।
ಮಾರಪಿತನೊ, ಮಾರಜಿತನೊ ಮಾರಸಖನೊ ಪೇಳ್ ॥ ಪ ॥
ಸುರರು ಧರಣಿಯಲ್ಲಿ ಸಂಚರಿಸಲರಿಯರು ।
ನರರು ಈ ಮನೋಜ್ಞ ರೂಪಂ ಧರಿಸಲರಿಯರು ॥ ೧ ॥

ಶೀತಕಿರಣನಾಗಿ ತೋಯ ಜಾತನೆಸೆವನು ।
ಪೀತರೂಪನೆಂದು ಮದನಂ ಖ್ಯಾತಿ ಪಡೆದನು ॥ ೨ ॥
ಧರೆಯನಾಳ್ವ ಧೊರೆಯು ಎಂದು ಗುರುತನರಿತೆನು ।
ಕರುಣದಿಂದಲರುಹು ನೀನು ಕರವ ಮುಗಿವೆನು ॥ ೩ ॥

ರಾಜ:— (ತಪತಿಯ ಕಡೆಗೆ ತಿರುಗಿ ಮಂದಹಾಸದಿಂದ) —

ರಾಗ: ॥ ಲಾವಣಿ ॥

ರಾಜನು ನಾನೆಲೆ ರಾಜವದನೆ ದಿನ ರಾಜತನುಜೆ ಕೇಳ್ ॥ ಪ ॥
ಈ ಜಗದೊಳ್ ವನರಾಜಿಗೆ ಸಿರಿಯೊಲ್ ರಾಜಿಪೆ ನೀನಾರ್ ಪೇಳ್ ॥ ಅನು ॥
ಸುರನರ ಭುಜಗರ ತರುಣಿಯರಿಹ ಸಿರಿಯನು ನಾ ಬಲ್ಲೆ ॥
ತರುಣೀಮಣಿ ಗುಣಭರಣಿಯೆನ್ನೊಳ್ ಕರುಣದಿ ನುಡಿನಲ್ಲೆ ॥ ೧ ॥
ನೋಡಿದ ಮಾತ್ರದಿ ಹೂಡಿದ ಶರಕೆಡೆ ಮಾಡಿದ ಮನ್ಮಥನು ॥
ನೋಡಿಯೆನ್ನನು ಕಾಪಾಡು ಜೀವದಿ ಜೋಡಿಸು ಕವಚವನು ॥ ೨ ॥

ತಪತಿ:— (ಥಟ್ಟನೆ ಸರಿದು) — ಸಖಿಯರೇ! ಮನ್ಮಥವಿಕಾರದಿಂದ ಮರ್ಯಾದಾತಿಕ್ರಮಣ ವಾಕ್ಯವನ್ನಾಡುತ್ತಿರುವ ಈ ರಾಜನ ಮುಂದೆ ನಾನಿರಲಾರೆನು. ನಡೆಯಿರಿ, (ಸಖಿಯರೊಡನೆ ಹೊರಡುವಳು.)

ರಾಜ:—(ಖಿನ್ನನಾಗಿ ಸುತ್ತಲೂ ನೋಡಿ.)— 'ಹಾ, ತಪನಸುತೆ, ತಪತೀ, ಪ್ರಾಣಪ್ರಿಯೆ, ನಿರ್ದಯಳಾದೆಯಾ?' (ಮೈಮರೆಯುವನು.)

ವಿದೂಷಕ:— (ಗಾಳಿಯನ್ನು ಹಾಕುತ್ತ,) 'ಮಹಾರಾಜನೆ, ಸ್ತ್ರೀಯರು ಕಠಿನ ಹೃದಯರು, ಮೋಹಪಾಶದಲ್ಲಿ ಕೆಡಹುವರೆಂದು ನಾನು ಮೊದಲೇ ಹೇಳಿರಲಿಲ್ಲವೆ? ಅನುಭವಿಸಿದಲ್ಲದೆ ತಿಳಿಯುವುದೆಂತು! ಸ್ವಸ್ಥಚಿತ್ತನಾಗಿ ಧೈರ್ಯವನ್ನು ಅವಲಂಬಿಸು.

ರಾಜ:— (ಅರೆಗಣ್ಣು ಬಿಟ್ಟು ಸೋಡಿ) — ಅಯ್ಯೋ ಮಿತ್ರನೆ, ತಡೆಯಲಾರೆನು. (ಮತ್ತೆ ಮೈಮರೆವನು.)

ವಿದೂ:— ಅಯ್ಯೊ, ಕಷ್ಟಕಷ್ಟ!! ತಪನ ತನೂಭವರೆಲ್ಲರೂ ಕಠಿನ ಹೃದಯರೆಂಬುದು ಈಗ ನಿರ್ಧರವಾಯಿತು. ಎಲೈ ತಪತೀದೇವಿಯೇ, ಚನ್ನಾಗಿ ಅತಿಥಿಸತ್ಕಾರ ಮಾಡಿದೆ!

ಕಲಾವತಿ:— (ಹಿಮ್ಮೆಟ್ಟಿ ನಿಂತು,) ಸಖಿ, ತಪತಿ, ನಿಲ್ಲು ನಿಲ್ಲು —

ತಪತಿ:— (ಮುಂದಕ್ಕೆ ಹೆಜ್ಜೆಯಿಟ್ಟು,) ಸಖಿ, ಬೇಗ ಬಾ, ನಾನು ನಿಲ್ಲಲಾರೆನು.

ಕಲಾವತಿ:— (ತಪತಿಯ ಕೈಪಿಡಿದು,)

ರಾಗ: ಜುಂಜೋಟಿ ॥ (ಏಳಬೇಡವೇ-ಸಖಿ ನೀ.)

ಪೋಗಬೇಡವೆ— ಸಖಿ ನೀಂ ॥ ಪ ॥
ಮನೆಗೆ ಬಂದತಿಥಿಯ ಮನಸಿಗೆ ತಾರದೆ ॥
ಘನತರ ದೋಷಕೆ ಗುರಿಯಾಗುತೆ ನೀ ॥ ಪೋಗ ॥ ೧ ॥
ರಾಜವದನೆ ಮಹಾ ರಾಜನು ಬಂದರೆ ।
ಭೋಜನಾದಿಗಳಿಗೆ ಭಾಜನನೆನಿಸದೆ ॥ ಪೋಗ ॥ ೨ ॥
ತಪನತನೂಭವೆ, ನಿಪುಣೆಯಲ್ಲವೆ ನೀ ।
ನೃಪನನತಿಗಳೆಯಲು, ಕೃಪಣೆಯೆನಿಸುವೆ ॥ ಪೋಗ ॥ ೩ ॥

ಲೀಲಾವತಿ:— (ತಪತಿಯ ಮುಂದೆ ನಿಂತು) ಸಖಿಯೆ, ಬೇರನ್ನು ಬಲ್ಲವರಿಗೆ ಎಲೆಯನ್ನು ತೋರಿಸುವಂತೆ ವಿಭ್ರಮವನ್ನು ತೋರಿಸಿ ಹೋಗಬೇಡ. ಮೈಮರೆತಿರುವ ರಾಜನನ್ನು ಸಮಾಧಾನಪಡಿಸು.

ಕೋಮಲಾಂಗಿ:— ಪ್ರಿಯ ಸಖಿ, ಲತೆಗಳಿಗೆ ವೃಕ್ಷದ ಆಶ್ರಯವಾದರೆಯೇ ಚಿರಕಾಲ ಶೋಭಿಸುವುದು.

ಚಿತ್ರಲೇಖೆ:— ಸಖಿ, ಗುಣವಿಲ್ಲದ ವೀಣೆ, ಪಣವಿಲ್ಲದ ಜೂಜು, ಮಣವಿಲ್ಲದ ಅಲರು, ಧಣಿಯಿಲ್ಲದ ದಳವು, ಈ ನಾಲ್ಕೂ ನಿರರ್ಥಕಗಳು. ಪತಿಯನ್ನು ಹೊಂದದ ತರುಣಿಯು ಮೇಲೆ ಹೇಳಿದವುಗಳಿಗಿಂತಲೂ ನಿರರ್ಥಕಳೆಂದು ನೀತಿಯುಂಟು.

ಕಲಾವತಿ:— ಪ್ರಿಯ ಸಖಿ, ದೂರದಲ್ಲಿ ನಿಂತು, ಬೂಟಕವನ್ನು ತೋರಿಸುವ ಸಮಯವಿದಲ್ಲವು. ರಾಜನ ಸಮೀಪಕ್ಕೆ ಬಾ. (ಕೈಹಿಡಿದು ಕರೆತಂದು ನಿಲ್ಲಿಸುವಳು.)

ವಿದೂ:— (ಮೃದುಸ್ವರದಿಂದ) ಮಹಾರಾಜನೆ, ರಣಧೀರನಾದ ನಿನಗೆ ಈ ಹಂದೆತನವು ಉಚಿತವಲ್ಲ, ಧೈರ್ಯವನ್ನು ಹೊಂದಿ ಕಣ್ತೆರೆದು ನೋಡು.

ರಾಜ:— (ಥಟ್ಟನೆದ್ದು.) ಮನೋಹರೆ, ಅಮೃತಸಮಾನವಾದ ನಿನ್ನ ವಾಕ್ಕು, ಚೈತನ್ಯವನ್ನುಂಟುಮಾಡಿತು. ಎದುರೆ ನಿಂತು ಸಮರಸದಿಂದ ಹೋರುವ ವೇಳೆ, ನಾನೆಂದಿಗೂ ಪಂದೆಯಾಗುವವನಲ್ಲ; ಚಪಲಾಕ್ಷಿಯರ ಕಡೆಕಣ್ಣು ನೋಟವಾಗಿ ಉಳ್ಳ ಅನಂಗನನ್ನು ಜಯಿಸಲು ನಾನೇ ಸಮರ್ಥನಾಗಿದ್ದರೆ ನಿನ್ನ ಸಹಾಯವನ್ನು ಕೋರುತ್ತಿರಲಿಲ್ಲ!

ತಪತಿ:— (ವಿನಯದಿಂದ) ರಾಜೇಂದ್ರನೆ, ಸುರಮುನಿಯ ವಚನದಿಂದ ಅಂದೇ ನನ್ನ ಮನಸ್ಸನ್ನು ನಿನ್ನಲ್ಲಿ ಒಪ್ಪಿಸಿಬಿಟ್ಟಿರುವೆನು; ಆದರೆ, ದೇಹವು ಪಿತನ ಅಧೀನವಾಗಿರುವುದರಿಂದ ಸಮೀಪವರ್ತಿನಿಯಾಗಲಿಲ್ಲ. ಸರ್ವಜ್ಞನಾದ ನಿನಗೆ ಹೇಳಬೇಕಾಗಿಲ್ಲ; ನನ್ನ ಪಿತನನ್ನು ಮೆಚ್ಚಿಸಿ, ಆತನ ಅನುಮತಿ ಹೊಂದಿದರೆ ಸುಖವುಂಟಾಗುವುದು.

ರಾಜ:— (ಸ್ಥಿರಭಾವದಿಂದ) ಮಂಗಳಾಂಗಿ, ಸಚ್ಚರಿತ್ರೆಯರಿಗೆ ಅದು ಯುಕ್ತವೇ ಸರಿ. ನಿನ್ನ ಪಿತನನ್ನು ಮೆಚ್ಚಿಸಿ ನಿನ್ನ ಸಮೀಪವನ್ನು ಸೇರುವೆನು.

ತಪತಿ:— ಹಾಗಾದರೆ, ರಾಜೇಂದ್ರನೆ, ಪ್ರಯಾಣಕ್ಕೆ ಅನುಕೂಲನಾಗು. (ಎಂದು ಸಖಿಯರೊಡನೆ ಹೊರಡುವಳು.)

ರಾಜ:— ಮಿತ್ರನೆ, ಶ್ರಾಂತನಾಗಿರುವ ನಾನು ವಿರಥನಾಗಿ ಬರಲಾರೆನು. ಇಲ್ಲಿಯೇ ಇದ್ದು ಮನೋರಥವನ್ನು ಪಡೆಯಲು ಪ್ರಯತ್ನಿಸುವೆನು.

ವಿದೂ:— ಮಹಾರಾಜನೆ, ದೃಢಚಿತ್ತನಾಗಿ ಕಾರ್ಯಸಾಧನೆಯನ್ನು ಮಾಡು. ನಾನೂ ನಿನ್ನ ಪ್ರಯತ್ನಕ್ಕೆ ಅನುಕೂಲನಾಗುವೆನು. (ಇಬ್ಬರೂ ಹೊರಡುವರು.)

ತೃತೀಯಾಂಕಕ್ಕೆ ಮಂಗಳಂ.

ಶ್ರೀಃ

ಚತುರ್ಥಾಂಕ ಪ್ರಾರಂಭವು

ಚಿತ್ರಸೇನನ ಅರಮನೆ.

(ವಿರಹತಾಪಸಂತಪ್ತನಾದ ಚಿತ್ರಸೇನನು ಒಬ್ಬನೇ ಪೀಠಸ್ಥನಾಗಿರುವನು.)

ಚಿತ್ರ:—

ರಾಗ: ಪೀಲು । ಅಟತಾಳ (ಅಹೋ ಚಿತ್ತ ಸಂತಾಪಮಂ)

ಮನೋಜನಸ್ತ್ರಾಘಾತದಿಂ ಘಾಸಿನಾ
ನಾದೆನಕಟಾ ಇನ್ನೇಂಗೈದಪೇಂ ॥ ಪ ॥
ಸರೋಜಾಕ್ಷಿಯನ್ನುನಾಂ ಪೊಂದುವೆನೆಂ ।
ದಹೋರಾತ್ರಿಯುಂ ಕೋರುತ್ತಿದ್ದೆನಾಹಾ ॥ ಮನೋಜ ॥ ೧ ॥
ಮನಂ ನೊಂದುದು ಮದನ ತಾಪದಿಂ ।
ಘನಂ ಮಿತ್ರನತಿ ಬಲಂ ತಾನೆಂದಿದ್ದೆನಾಹಾ ॥ ಮನೋಜ ॥ ೨ ॥

ಅಯ್ಯೋ, ನಾನೀ ಮದನತಾಪವನ್ನು ಸಹಿಸಲಾರೆನು. ಸರ್ವಶಕ್ತನೆಂದು ಮಾಯಾವಿಯನ್ನು ಸಂವರಣಮಹಾರಾಜನನ್ನು ಜಯಿಸಲು ಕಳುಹಿದೆನು. ಅವನೇನಾದನೋ, ಜೀವಿಸಿದ್ದರೆ ಬಾರದಿರುವನೇ?

ಮಾಯಾವಿ:— ದನುಜೇಂದ್ರನೇ, ವಂದನೆ.

ಚಿತ್ರಸೇನ:— ಮಿತ್ರನೆ, ಸುಖಾಗಮನವೇ? ನಿನ್ನ ಉದ್ಯೋಗದ ಪರಿಣಾಮವೇನು?

ಮಾಯಾವಿ:— ಮಿತ್ರನೆ, ಅಂತಕಸ್ವರೂಪನಾದ ಸಂವರಣನನ್ನು ಇಲ್ಲಿಗೆ ಸಮೀಪವಾದ ಸುಮೇರು ಪ್ರಾಂತದ ವರೆಗೂ ಮಾಯಾರೂಪವಾಗಿ ಎಳೆದು, ಶ್ರಾಂತನಾದ ಸಮಯವನ್ನು ನೋಡಿ ಯುದ್ಧವನ್ನು ಮಾಡಿದೆನು.

ಚಿತ್ರಸೇನ:— ಅಂತಕಸ್ವರೂಪನಿಂದ ತಪ್ಪಿಸಿಕೊಂಡು ಬಂದ ಬಗೆ ಹೇಗೆ?

ಮಾಯಾವಿ:— ಪ್ರಾರಂಭದಲ್ಲಿಯೇ ನಿನ್ನ ದೂತನೆಂದು ಹೇಳಿಕೊಂಡಿದ್ದುದರಿಂದ ನನ್ನನ್ನು ವಧಿಸಲಿಲ್ಲ.

ಚಿತ್ರಸೇನ:— ಮಿತ್ರನೇ, ನಾನೂ ಸಹಾಯಕ್ಕೆ ಬರುವೆನು. ಮತ್ತೆ; ಯುದ್ಧಸನ್ನದ್ಧನಾಗಿ ಹೊರಡುವೆಯಾ?

ಮಾಯಾವಿ:— ಮಿತ್ರನೆ, ನೀನೊಬ್ಬನಲ್ಲ, ನಿನ್ನಂತಹ ನೂರು ಮಂದಿ ಚಿತ್ರಸೇನರು ಸಹಾಯಕರಾಗಿ ಬಂದರೂ ನಾನು ಅವನೊಡನೆ ಯುದ್ಧಮಾಡುವವನಲ್ಲ.

ಚಿತ್ರಸೇನ:— ಹಾಗಾದರೆ ಮುಂದೆ ಮಾಡುವುದೇನು?

ಮಾಯಾವಿ:— ಭೇದೋಪಾಯವು ಹೊರತು, ಮತ್ತೊಂದಿಲ್ಲ.

ಚಿತ್ರಸೇನ:— ಅಸಹಾಯನಾಗಿದ್ದರೆ ಭೇದೋಪಾಯವು ಸಿದ್ಧಿಸುವುದೆಂತು?

ಮಾಯಾವಿ:— ಮೃತ್ಯು ಸ್ವರೂಪನಾದ ಸಂವರಣನಿಗೆ ಪ್ರೀತಿಪಾತ್ರಳಾದ ತಪತಿಯಂತೆ ಹೋಗಿ ಸ್ವಾಧೀನಪಡಿಸಿಕೊಳ್ಳಬೇಕು.

ಚಿತ್ರಸೇನ:— ಮಿತ್ರನೆ, ನನಗೆ ಅದು ಸಾಧ್ಯವಲ್ಲ.

ಮಾಯಾವಿ:— ನಾನು ತಪತಿಯಾಗಿ ಸಂವರಣನನ್ನು ಸ್ವಾಧೀನಪಡಿಸಿಕೊಂಡು ಹಸ್ತಿನಾಪುರಕ್ಕೆ ಸೇರಿಸಿ, ಅವನನ್ನು ವಿರಹವ್ಯಥೆಯಿಂದ ಜೀವಚ್ಛವದಂತೆ ಮಾಡುವೆನು; ಚಿಂತಿಸಬೇಕಾಗಿಲ್ಲ.

ಚಿತ್ರ:— ಹಾಗಾದರೆ ನನ್ನಿಂದಾಗಬೇಕಾದ ಕೆಲಸವೇನು?

ಮಾಯಾವಿ:— ನೀನು ಸಂವರಣನಾಗಿ ತಪತಿಯ ಸಮೀಪವನ್ನು ಸೇರಿ ಅವಳನ್ನು ವಂಚಿಸಿ, ನಿನ್ನ ದುರ್ಗಕ್ಕೆ ಕರೆದುಕೊಂಡು ಬರುವವನಾಗು.

ಚಿತ್ರಸೇನ—ಮಿತ್ರನೆ, ಈ ಪ್ರಯತ್ನವು ನೆರವೇರಿದರೆ ನಿನಗೆ ಸಮಾನರಾದ ನೀತಿಜ್ಞರಿಲ್ಲವೆಂದು ತಿಳಿಯುವೆನು.

ಮಾಯಾವಿ:— ಇನ್ನು ವಿಳಂಬಿಸುವುದು ಸರಿಯಲ್ಲ. ಮತ್ತೆ ಬರುವೆನು. (ಹೊರಡುವನು.)

ಚಿತ್ರಸೇನ: – ಮಿತ್ರನು ಎಲ್ಲಿ ಹೋದನು? ಮತ್ತೆ ಬರುವೆನೆಂದು ಹೋಗಿ ಇಷ್ಟು ಹೊತ್ತಾದರೂ ಬಾರದಿರುವನೇಕೆ? (ಕಿವಿಕೊಟ್ಟು ಕೇಳಿ) — ಇದೇನಿದು? ಕಾಲಂದಿಗೆಯ ಸಪ್ಪಳವು? (ತಿರುಗಿ ನೋಡಿ) ಇದಾರಿದಾರು! ತಪತೀದೇವಿಯೊ? (ನೋಡುತ್ತ ನಿಲ್ಲುವನು.) (ಮಾಯಾತಪತಿಯು ಮುಂದೆ ಬರುವಳು.)

ಚಿತ್ರ: — (ಸಂಭ್ರಮದಿಂದ)

ರಾಗ: ತೋಡಿ ॥ (ಭಾವನರಿಯದ)

ಇಕ್ಕೋ ಬರುತಿಹಳೀ ಮೋಹನೆ ।
ಎನ್ನ-ತಕ್ಕೈಸಲೀ ಸೊಕ್ಕು ಜವ್ವನೆ ॥ ಪ ॥
ಉಕ್ಕಿದ ಮೋಹದಿ, ಕಕ್ಕುಬಿಕ್ಕಾದಯ
ನ್ನಕ್ಕರದೊಳುತಾ ನೀಕ್ಷಿಸುತೆ-ಆಹಾ ॥ ೧ ॥
ನಡೆಗೆ ನಾಚಿದವಂಚೆ, ನುಡಿಗೆ ಸೋತವು ಕೀರ ।
ಜಡೆಗೆ ನಾಚಿದ ಕುಂಡಲೀಶನು-ಆಹಾ ॥ ೨ ॥

ಮಾ. ತಪತಿ:—(ಸ್ವಗತಂ) ನನ್ನನ್ನು ನಿಜವಾದ ತಪತಿಯೆಂದೇ ನಂಬಿರುವನು. ಇರಲಿ, (ಪ್ರಕಾಶಂ) ದನುಜೇಂದ್ರನೆ, ವಿಚಾರಮಾಡು, ಇದು ತಕ್ಕುದಲ್ಲ.

ಚಿತ್ರಸೇನ:—ಮೋಹನಾಂಗಿ! ಕಠಿನವು ಸಾಕು, ಕೃಪೆಮಾಡಿ ತಾಪವನ್ನು ಹೋಗಲಾಡಿಸು.

ಮಾಯಾವಿ: — ಮಿತ್ರನೆ, ವಿವೇಕವುಳ್ಳವನಾಗು, ಸಂವರಣನನ್ನು ವಂಚಿಸಿ ಹಸ್ತಿನಾಪುರಕ್ಕೆ ಕಳಿಸಲು ಪ್ರಯತ್ನ ಮಾಡಿದ ಮಾಯಾವಿಯೇ ನಾನು! ತಪತಿಯಲ್ಲ.

ಚಿತ್ರಸೇನ: — (ನಿಟ್ಟುಸಿರಿಟ್ಟು) — ಮಿತ್ರನೆ, ಮನೋವ್ಯಥೆಯಿಂದ ಭ್ರಾಂತನಾದೆನು. ಈಗಲೇ ತಪತಿಗೆ ಅನುರೂಪನಾದ ಸಂವರಣನಾಗಿ ಬರುವೆನು. (ಎಂದು ಹೋಗಿ ಮಾಯಾಸಂವರಣನಾಗಿ ಬರುವನು.)

ಮಾಯಾವಿ: — (ಚಿತ್ರಸೇನನ ಕೈಹಿಡಿದು,) ಮಿತ್ರನೆ! ಇದಿರಿಗಿರುವ ಕನ್ನಡಿಯಲ್ಲಿ ನಮ್ಮಿಬ್ಬರ ಬಿಂಬಗಳೂ ಕಾಣುವುವು. ಇವು ಒಂದುವೇಳೆ ನಮಗೇ ಸ್ವರೂಪಜ್ಞಾನವನ್ನು ತಪ್ಪಿಸುವುದು. ಇತರರಿಗೆ ಕೇಳಬೇಕೇ?

ಚಿತ್ರಸೇನ: — ಮಿತ್ರನೆ, ಮುಂದೆ ನಾನು ಮಾಡಬೇಕಾದುದೇನೋ ತಿಳಿಸು.

ಮಾಯಾವಿ: — ಮಿತ್ರನೆ, ಸುಮೇರುಪರ್ವತದ ಶೃಂಗಾರವುಂಟಪದಲ್ಲಿ ತಪತಿಯಿರುವಳು. ಅಲ್ಲಿಗೆ ಹೋಗಿ, ಅವಳನ್ನು ಸ್ವಾಧೀನಪಡಿಸಿಕೊಳ್ಳುವನಾಗು. ನಾನೂ ಸಂವರಣನ ಸಮೀಪದಲ್ಲಿ ಸುಸಮಯ ನಿರೀಕ್ಷೆಯಲ್ಲಿರುವೆನು. (ಇಬ್ಬರೂ ಹೊರಡುವರು.)

ಸುಮೇರುಪರ್ವತದ ಶೃಂಗಾರವನ.

(ಮಾಯಾಸಂವರಣನು ವಿರಹವನ್ನಭಿನಯಿಸುತ್ತ ಬರುವನು.)

ಮಾ. ಸಂ: — (ಯಾತನಾಸ್ವರದಿಂದ)

ರಾಗ: (ಎಂದಿಗಾಹುದೊ ತಂದೆಯೇ.)

ಪ್ರಾಣಕಾಂತೆ, ಕಾಣದಂತೆ, ಕೇಣಮೆಲ್ಲಿ ಬಂತೆ ॥
ಜಾಣೆ ನಿನ್ನ, ಕಾಣದೆನ್ನ, ಪ್ರಾಣನಿಲ್ಲದಂತೆ ॥ ಪ್ರಾಣ ॥ ಪ ॥
ಮಾರದುರುಳ, ಭೂರಿಸರಳ ಬೀರಿ, ಕೊರಳಕೊಯ್ವನೇ ।
ಸೇರಿ ನರಳಲಾರೆ ಬೆರಳ ತೋರಿಯುರುಳ ಜಾರಿಸೆ ॥ ೧ ॥
ಇಂದು ಕಿರಣ ಮಿಂದು ಬಿಸಲಿನಂದವಾಗಿ ತೋರ್ಪುದೆ ।
ಮಂದಮಾರುತನಿಂದಗೂಡಿ ನೊಂದು ಬಾಳಲಾರೆನೆ ॥ ೨ ॥

ಮಂದಹಸನದಿಂದ ಬಾರೆ ಇಂದು ಬಿಂಬಾನನೆ ।
ಪೊಂದಿಯೆನ್ನಾನಂದಪಡಿಸಿ, ಒಂದುಗೂಡಿ ಭಾವಿಸೆ ॥ ೩ ॥

ಹಾ, ಸುಂದರಿ, ತಪನಕುಮಾರಿ, ನನ್ನಲ್ಲಿ ಕೋಪವೇಕೆ? ಎಲ್ಲಿರುವೆ? (ಮುಂದೆ ಬಂದು ವನದ ವೃಕ್ಷಗಳ ಮುಂದೆ ನಿಂತು ದೈನ್ಯದಿಂದ)

ರಾಗ: ತೋಡಿ॥ ಆದಿತಾಳ॥ (ಎಂತು ಕಳುಹುವೆ.)

ಆರೂ ಕಾಣಿರಾ-ಎನ್ನರಸಿಯಾ ॥
ಮಾರನರಮಣಿಯ । ಮೀರಿ ಮೆರೆವಳ ॥ ಪ ॥
ತೆಂಗಿನ ಮರವೆ, ಲವಂಗಲತೆಯೆ,
ನಾರಂಗ ಗಿಡವೆ, ಕುರಂಗಿ ನಯನೆಯಾ ॥ ೧ ॥
ಬಾಳೆಯ ಬುಡವೆ, ತಾಳೆಯ ಹಣ್ಣನು,
ಪೋಲುವ ಕುಚದಾ ಬಾಲೆಯನ್ನನೀ ॥ ೨ ॥
ಅರಳಿಯ ಮರವೆ, ಓಸುರಗಿಯ ತರುವೆ,
ತರುಣಿಯ ಕಂಡಿರೇ, ಕರುಣದಿ ಪೇಳಿರೆ ॥ ೩ ॥

(ತೆರೆಯಲ್ಲಿ.) ಸಖಿಯೇ, ಉಪಚಾರ ಸಾಮಗ್ರಿಯೊಡನೆ ಬೇಗ ಬಾ.

ಮಾ. ಸಂ:— ಆಹಾ, ತಪತಿಯು ಸಖಿಯರೊಡನೆ ಇಲ್ಲಿಯೇ ಬರುವಂತೆ ಇದೆ. ಇರಲಿ, ಸ್ವಲ್ಪ ಮರೆಯಾಗಿ ನೋಡುತ್ತಿರುವೆನು. (ಮರೆಯಾಗಿ ನಿಲ್ಲುವನು.)

(ವಿರಹತಾಪದಿಂದ ಬಾಡಿದ ತಪತಿಯು ಪ್ರವೇಶಿಸುವಳು.)

ತಪತಿ:— ರಾಗ: (ಮೋಹದ, ನಲ್ಲಬಾರೋ.)

ನಿಲ್ಲಲಾರೆ ನೀರಜಾಕ್ಷಿ ಸಾರೆ, ತಾಪದಿಂ ॥ ಪ ॥
ಹೃದಯಕಾಂತನ ಮೇಲೆ ಸದಯಳಾಗದೆ ಬಿಟ್ಟೆ ।
ಮದನಬಾಣದವೇಗವದು ಕೊಲ್ಲುತಿಹುದೀಗ ॥ ನಿಲ್ಲ ॥ ೧ ॥
ಕುಲದ ಗೌರವ ನೋಡಿ, ಬಳಿಸಾರಿದ ಕಾಂತನ ।
ಉಳಿದ ಕಾರಣದಿಂದ ಖಲಮಾರಕೊಲುತಿರ್ಪ ॥ ೨ ॥

ಹಾ, ಕಷ್ಟಕಷ್ಟ! (ಮೈ ಮರೆಯುವಳು.) (ಸಖಿಯರು ಬಳಿಗೆ ಬಂದು.)

ಲೀಲಾವತಿ:— (ತಾವರೆ ಎಳೆಗಳಿಂದ ಬೀಸುತ್ತ,) ಸಖಿ, ಪ್ರಿಯ ಸಖಿ, ಕಣ್ದೆರೆ!

ಚಿತ್ರಲೇಖೆ:— (ಪನ್ನೀರು ಗಂಧಗಳನ್ನು ಎರಚುತ್ತ) ಸಖಿ, ತಪನ ಪುತ್ರಿ, ಎಚ್ಚೆತ್ತುಕೊ.

ಕೋಮಲಾಂಗಿ:— (ಪುಷ್ಪಶಯನವನ್ನು ಸಿದ್ಧಪಡಿಸಿ) ಪ್ರಿಯ ಸಖಿ, ಏಳು, ಎಚ್ಚರ ಹೊಂದು.

ಕಲಾವತಿ:— (ತಪತಿಯನ್ನು ಎತ್ತಿ ಒರಗಿಸಿಕೊಂಡು ಲೀಲಾವತಿಯನ್ನು ಕುರಿತು,) ಸಖೀ, ಲೀಲಾವತಿ! ನಮ್ಮ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಇವಳ ಮನೋವಲ್ಲಭನೇ ಬರಬೇಕು.

ಲೀಲಾವತಿ:— ಸಖಿ, ತಪತಿಯಲ್ಲಿ ಪ್ರೀತಿಯುಳ್ಳವನಾಗಿದ್ದರೆ ಅವನೇ ಬರುವನು.

ಮಾ. ಸಂ:— (ಸ್ವಗತಂ) ಸಮಯವು ಸರಿಯಾಗಿರುವುದು. ರಾವಣನು ಸೀತೆಯನ್ನು ಅಪಹರಿಸಿದಂತೆ ಇವಳನ್ನು ಅಪಹರಿಸುವೆನು. (ಪ್ರಕಾಶವಾಗಿ) ಇದೋ ಬಂದೆನು. (ಮುಂದೆ ಬಂದು ನೋಡಿ ಶೋಕದಿಂದ—

ರಾಗ: ದನಾಸರಿ ॥ ಆದಿತಾಳ (ಮರಿಯಾದಳಯ್ಯೋ ಸಖ.)

ಮೋಸವಾಯಿತಲ್ಲ, ಆಸೆಹೋಯಿತಲ್ಲ ।
ಕ್ಲೇಶಹೆಚ್ಚಿತಲ್ಲ, ಘಾಸಿಯಾದೆನಲ್ಲ ॥ ೧ ॥
ನಿನ್ನೊಳಾಸೆಯಿಟ್ಟೆ, ಎನ್ನದೇಶಬಿಟ್ಟೆ ।
ಗನ್ನಕಷ್ಟಪಟ್ಟೆ, ಇನ್ನು ಪೇಳಲಿಷ್ಟೆ ॥ ೨ ॥
ಎನ್ನ ಬಿಟ್ಟಳೀಕೆ, ಎನ್ನ ದೇಹವೇಕೆ ।
ಇನ್ನು ರಾಜ್ಯವೇಕೆ, ಮುನ್ನ ಮೋಹವೇಕೆ ॥ ೩ ॥

(ಸಮೀಪಕ್ಕೆ ಬಂದು) ಪ್ರಿಯೆ, ಒಂದು ಮಾತನಾಡು!

ತಪತಿ:— (ಕಣ್ದೆರೆದು ನೋಡಿ ಗಾಭರಿಯಿಂದೆದ್ದು ದೂರ ಸರಿದು ನಿಲ್ಲುವಳು.)

ಮಾ. ಸಂ:—(ಸ್ವಗತಂ) ತಪನಸುತೆಯಾದುದರಿಂದ ನನ್ನ ಕಪಟವನ್ನು ತಿಳಿದಿರುವಳೇ? ಇರಲಿ. (ಪ್ರಕಾಶಂ)

(ಮೇಲಿನ ಮಟ್ಟು.)

ನಿಲ್ಲು ಕಾಮದೇನು, ಎಲ್ಲಿ ಪೋಪೆನೀನು ।
ಅಲ್ಲಿ ಬರುವೆ ನಾನು, ನಿಲ್ಲಲರಿದು ಜಾನು ॥ ೧ ॥

ತಪತಿ:—(ವಿಷಾದದಿಂದ) ಸಖಿ, ಕಲಾವತಿ, ಮೊದಲು ಮಾಡಿದ ಪ್ರತಿಜ್ಞೆಯ ಜ್ಞಾಪಕವಿಲ್ಲವೆ—ಕೇಳು! ವಚನಭ್ರಷ್ಟರ ಮುಂದೆ ನಾನು ನಿಲ್ಲೆನು. (ಹೋಗುವಳು.)

ಕಲಾವತಿ:—ರಾಜೋತ್ತಮನೆ, ಪ್ರತಿಜ್ಞೆಯನ್ನು ಮರೆತಿರುವೆ—ಎಂದು ದೇವಿಯು ಕೋಪಿಸಿಕೊಂಡು ಹೋದಳು; ನೀವು ವನಕ್ಕೆ ತೆರಳುವುದು ಉತ್ತಮವು. (ತಾನೂ ಹೋಗುವಳು.)

ಮಾ. ಸಂ:—ನನ್ನನ್ನು ಬರಮಾಡಬೇಕೆಂದು ನೀವು ಹೇಳಿದುದರಿಂದ ಬಂದೆನು.

ಲೀಲಾವತಿ:—ರಾಜಶ್ರೇಷ್ಠನೆ, ಪರಿಜನರ ಮಾತು ಪುರಸ್ಕಾರ ಯೋಗ್ಯವಲ್ಲವೆಂಬುದು ತಮಗೆ ತಿಳಿಯದುದೇನೂ ಅಲ್ಲ. ಈಗ ಮೀರಿ ಬಂದರೆ ತಿರಸ್ಕೃತರಾಗುವಿರಿ. (ಉಳಿದ ಸಖಿಯರೊಡನೆ ಹೊರಟು ಹೋಗುವಳು.)

ಮಾ. ಸಂ:—ನನ್ನ ಪ್ರಯತ್ನವು ನಿಷ್ಫಲವಾಯಿತು. ಇನ್ನು ನನ್ನ ಮಿತ್ರನ ಪ್ರಯತ್ನವೇನಾಗಿರುವುದೋ ನೋಡುವೆನು. (ಗಮನವನ್ನಭಿನಯಿಸಿ) ಮುಂದೆ ಕಾಣುವುದೇ ಸಂವರಣನಿರುವ ಉಪವನವಾಗಿರುವುದು. ಹೋಗಿ ಅಲ್ಲಿ ವಿಚಾರವೇನಾಗಿದೆಯೆಂದು ತಿಳಿದು ಬರುವೆನು. (ಹೋಗುವನು.)

(ಉಪವನದಲ್ಲಿ ಮಾಯಾತಪತಿಯ ಪ್ರವೇಶ.)

ಮಾ. ತಪತಿ:—(ಸ್ವಗತಂ) ನಾನಾವರೊ ಮಿತ್ರನಿಗೆ ವಾಗ್ದಾನ ಮಾಡಿ ಬಂದೆನು. ಮಿತ್ರನಾದರೋ ತಪತಿಯಲ್ಲಿಗೆ ಹೋದನು; ಮಾಯಾ ವಿದ್ಯೆಯಲ್ಲಿ ಆತನಿಗೆ ನನ್ನಷ್ಟು ಶಕ್ತಿಯಿಲ್ಲ. ಒಂದು ವೇಳೆ, ಕಾರ್ಯವನ್ನು ನಿರ್ವಹಿಸದೆ

ಹಿಂದಿರುಗಬಹುದು. ಸಂವರಣನನ್ನು ಸ್ವಾಧೀನಪಡಿಸಿಕೊಂಡು ಆತನ ಆತಂಕವನ್ನು ನಿವಾರಣೆ ಮಾಡುವೆನು. ಸಂವರಣನು ಇದೇ ವನದಲ್ಲಿ ವಿರಹತಾಪದಲ್ಲಿ ಬಿದ್ದಿರುವನಲ್ಲವೆ? ಒಳ್ಳೆಯದು, ಕಾಣಿಸಿಕೊಳ್ಳುವೆನು. (ಬಗ್ಗಿ ನೋಡಿ) ಇವನ ಕೂಡ ಒಬ್ಬ ಬ್ರಾಹ್ಮಣನು ಇರುವನು. ಇರಲಿ, ಇವರನ್ನು ಠಕ್ಕಿಸುವೆನು. ॥ ಪ್ರಕಾಶವಾಗಿ ॥ (ಆಯಾಸವನ್ನಭಿನಯಿಸುತ್ತ,)

ರಾಗ: ಕಾಂಬೋದಿ ॥ ಆದಿತಾಳ (ಏತಕೀಜೀವ.)

ಏಕೆನ್ನ ಪುಟ್ಟಿಸಿ, ಲೋಕೇಶನೀಪರಿ ।
ಶೋಕಕೆ ಗುರಿಮಾಡಿ ತಾನೇಕೆ ನೋಡುವ ॥ ಪ ॥
ನಾರದನುಸುರಿದ ಭಾರತಿಯನು ಕೇಳಿ ।
ಈ ರಾಜನೊಳಗಿಟ್ಟೆ ಮರುಕವ ನಾಕೆಟ್ಟೆ ॥ ೧ ॥
ಕಯ್ಯ ಪಿಡಿಯಲಿಲ್ಲ ಕಾಯಗೂಡಿಸಲಿಲ್ಲ ।
ಅಯ್ಯಯ್ಯೋ ವಿಧಿಯೇ ನೀಕೊಂಡೊಯ್ವೆಯಾ ॥ ೨ ॥

(ಮಾವಿನ ಮರದಡಿಯಲ್ಲಿ ಮೈಮರೆತು ಮಲಗಿರುವ ರಾಜನನ್ನು ಉಪಚರಿಸುತ್ತ ವಿದೂಷಕನು)

ಮಹಾರಾಜನೆ, ಅಜ್ಞಾತವಾದೀ ಅರಣ್ಯದಲ್ಲಿ ಈ ರೀತಿ ಸಂತಪ್ತನಾದರೆ ಸಹಾಯಶೂನ್ಯನಾದ ನಾನು ಮಾಡುವುದೇನು? ಧೈರ್ಯವನ್ನು ಅವಲಂಬಿಸು.

ರಾಜ:— ಮಿತ್ರನೆ, ತಡೆಯಲಾರೆನು, ಪ್ರಾಣಕಾಂತೆಯು ಎಲ್ಲಿರುವಳೋ ಒಮ್ಮೆ ನೋಡಿಯಾದರೂ ಬರುವೆನು. (ಮುಂದಕ್ಕಡಿಯಿಡುವನು.)

ಮಾ. ತ:— (ಸ್ವಗತಂ) ಸಂವರಣನು ಇಲ್ಲಿಯೇ ಬರುವನು. ಸ್ವಲ್ಪ ಮರೆಯಾಗಿದ್ದು ಸರಿಯಾದ ಸಮಯದಲ್ಲಿ ಕಾಣಿಸಿಕೊಳ್ಳುವೆನು. (ಮರೆಯಾಗುವಳು.)

(ವಿದೂಷಕನೊಡನೆ ರಾಜನು ಮುಂದೆಬರುವನು.)

ರಾಜ:— ರಾಗ: (ಕಾಂತೆಯ ನುಡಿದಂತು ಪೋಪೆ.)

ಎಲ್ಲಿರ್ಪಳೋ ಆ ಕಾಂತೆ ಬಲ್ಲಿದ ಈ ಚಿಂತೆ ।
ತಲ್ಲಣಗೊಳುವಂತೆಯಾಯಿತೆಮುಂತೆ ॥

ಪುಲ್ಲಾಸ್ತ್ರನೆನ್ನನು ಕೊಲ್ಲುತಲಿರ್ಪನು ।
ನಲ್ಲೆಯ ಪಡೆವೆನಿನ್ನೆಂದು ಸುಖಿಪೆನು ॥ ೧ ॥

(ನಿಟ್ಟುಸಿರುಬಿಟ್ಟು ಕೈಹಿಸಿಕಿಕೊಳ್ಳುತ್ತ,) ನಾರದನ ಮಾತನ್ನು ಕೇಳಿ ತಪತಿಯಲ್ಲಿ ಮನಸ್ಸನ್ನಿಟ್ಟುದರಿಂದ ರಾಜ್ಯವನ್ನು ಬಿಟ್ಟೆನು, ಕಾಡನ್ನು ಸೇರಿದೆನು; ಆದರೂ ರಮಣಿಯು ಮಾತ್ರ ಸ್ವಾಧೀನವಾಗಲಿಲ್ಲ; ಕಣ್ಣಿಗೆ ಕಾಣಿಸಿಕೊಂಡು ಮರೆಯಾದಳು. ಅನಂಗನಾದರೋ ಬಿಡದೆ ನಿರ್ದಯೆಯಿಂದ ದಹಿಸುವನು. ಅಯ್ಯೋ, ತಡೆಯಲಾರೆನು. (ಮೈಮರೆಯುವನು.)

ವಿದೂ:—ಅಯ್ಯೋ, ನಾನೇನು ಮಾಡಬಲ್ಲೆ? ಅಮ್ಮಾ, ತಪತೀದೇವಿ! ಮಿತ್ರನು ಚೈತನ್ಯಶೂನ್ಯನಾಗಿ ಬಿದ್ದಿರುವನು. ನಾನು ಮಾಡುವ ಉಪಚಾರಗಳು ಫಲಕಾರಿಯಾಗುವಂತಿಲ್ಲ. ಒಂದು ಬಾರಿ ಕಾಣಿಸಿಕೊಂಡು ಸಾಂತ್ವವಚನದಿಂದ ಸಮಾಧಾನಪಡಿಸು.

(ಮರೆಯಾಗಿದ್ದ ಮಾಯಾತಪತಿ ಮುಂದೆಬರುವಳು.)

ಮಾ. ತಪತಿ:—ವಿಪ್ರೋತ್ತಮನೆ, ನಿನ್ನ ಮೊರೆಯನ್ನು ಕೇಳಿ ಆತುರದಿಂದ ಒಬ್ಬಳೇ ಬಂದೆನು. ಈಗ ನಾನೇನು ಮಾಡಬೇಕು?

ವಿದೂ:—ಎಲೌ ಸ್ತ್ರೀಯೆ, ನನ್ನಲ್ಲಿ ಈ ಮಾಯಾಜಾಲವು ನಡೆಯುವಂತಿಲ್ಲ. ರಾಜನ ಸಂತಾಪವನ್ನು ತಿಳಿದು ಹೀಗೆ ಹೇಳುವುದೋ?

ಮಾ. ತ:—(ಸ್ವಗತಂ) ಈ ಬ್ರಾಹ್ಮಣನು ಸಾಮಾನ್ಯನಲ್ಲ. ಇವನ ಮಾತಿನಿಂದ ನನ್ನ ಕಪಟವನ್ನು ತಿಳಿದನೆಂದು ಗೊತ್ತಾಗುವುದು. ಇಷ್ಟಕ್ಕೇ ಭಯಪಡಬಾರದು. ಇರಲಿ, ನೋಡುವೆನು. (ಪ್ರಕಾಶಂ) ವಿಪ್ರೋತ್ತಮನೆ, ರಾಜನ ತಾಪವನ್ನು ತಿಳಿದುದರಿಂದಲೇ ಪರಿಹರಿಸಬೇಕೆಂದು ಬಂದಿರುವೆನು. ಮಾಯೆಯಲ್ಲ.

ವಿದೂ:—ಹಾಗಾದರೆ ಸ್ಮರಬಾಧೆಯಿಂದ ನೊಂದು ಮೈಮರೆತಿರುವ ಧುರಧೀರನಾದ ಈ ಸಂವರಣಭೂಪತಿಯನ್ನು ಸಮಾಧಾನಪಡಿಸು.

ಮಾ. ತ:—(ಸಮೀಪಕ್ಕೆ ಬಂದು ಶರಗಿನಿಂದ ಬೀಸುತ್ತ,)—ಪ್ರಾಣೇಶನೆ, ನಾನು ಬಂದಿರುವೆನು. ಕಣ್ತೆರೆದು ನೋಡು, ತಾಪನಿವಾರಣೆ ಮಾಡಿಕೊಳ್ಳುವನಾಗು.

ರಾಜ:— (ಕಣ್ತೆರೆದು ನೋಡಿ ಗಾಭರಿಯಿಂದೆದ್ದು ದುರದುರನೆ ನೋಡುವನು.)

ಮಾ. ತ:— (ಹಿಂಜರಿದು ತಲೆತಗ್ಗಿಸಿ) (ಸ್ವಗತಂ) ಈ ರಾಜನು ನನ್ನ ಕಪಟವನ್ನು ತಿಳಿದನೇ? ಹಾಗೆ ತಿಳಿದಿದ್ದರೆ ನಾನು ಹಿಂತಿರುಗಲಾರೆನು. (ಪ್ರಕಾಶಂ) ರಾಜೇಂದ್ರನೆ, ಹೀಗೇಕೆ? ಅಪರಾಧವೇನು?

ರಾಜ:— ಏಕಾಂಗಿಯಾಗಿ ಬಂದು ಸಂಶಯವನ್ನುಂಟುಮಾಡಿದುದು.

ಹಾಗಾದರೆ, ನೀನು ಮಾಯಾವಿಯೇ ಸರಿ. ಹಿಂದೆ ಹೇಳಿದ ನಿಬಂಧನೆಯನ್ನು ಮರೆಯುವಷ್ಟು ಅವಿವೇಕಿಯು ನಾನಲ್ಲ.

ಮಾ. ತ:— (ತಲೆಬಾಗಿ ನಾಚಿದಂತೆ ನಟಿಸಿ,) — ರಾಜೇಂದ್ರನೆ, ಕಾಮುಕರಿಗೆ ಲಜ್ಜೆಯಿಲ್ಲವೆಂದು ಪ್ರಾಜ್ಞನಾದ ನೀನೂ ಬಲ್ಲೆ. ವಿರಹೋತ್ಕಂಠಿತಳಾಗಿ ತಾನಾಗಿ ಒಲಿದುಬಂದಿರುವ ಮಾನಿನಿಯನ್ನು—

ರಾಜ:— ಸಾಕು, ಅಧಿಕಪ್ರಸಂಗವನ್ನು ನಾನು ಕೇಳಲಾರೆನು. ನಾನು ವಿರಹವ್ಯಥೆಯನ್ನು ಅನುಭವಿಸುತ್ತಿದ್ದರೂ, ಸತ್ಯವನ್ನಾಗಲಿ, ನೀತಿಯನ್ನಾಗಲಿ ಮೀರಿ ನಡೆಯುವವನಲ್ಲ. ತೆರಳು!

ಮಾ. ತ:—(ಸ್ವಗತಂ) ಈ ರಾಜನು ತಪತಿಯಲ್ಲಿ ಅನುರಕ್ತನಾಗಿರುವನೆಂದು ಕೇಳಿ ತಿಳಿದಿದ್ದೆನಲ್ಲದೆ, ವಿರಹದಿಂದ ಸಂತಪಿಸುತ್ತಿರುವುದನ್ನೂ ಕಣ್ಣಾರೆ ನೋಡಿದೆನು. ಅಷ್ಟಾದರೂ ಈ ರೀತಿ ತಿರಸ್ಕರಿಸಲು ಕಾರಣವೇನು? ತಪತಿಯಲ್ಲಿಯೇ ಅವಿಶ್ವಾಸ ಹುಟ್ಟಿತೆ? ಹಾಗಾಗಿದ್ದರೆ, ಮಿತ್ರನ ಇಷ್ಟಸಿದ್ಧಿಯೇ ಆಯಿತು. ಕಪಟಸ್ತ್ರೀಯೆಂದು ತಿಳಿದಿದ್ದರೆ ನನ್ನನ್ನು ಬಿಡುತ್ತಲೇ ಇರಲಿಲ್ಲ. ಹೇಗೂ ನಾನಿನ್ನು ಇಲ್ಲಿರಬಾರದು. ತಪತಿಯು ಸಮೀಪದಲ್ಲಿರುವ ಮಿತ್ರನನ್ನು ನೋಡಿಕೊಂಡು ಪಟ್ಟಣಕ್ಕೆ ಹೋಗುವುದೇ ಸರಿ! (ಪ್ರಕಾಶಂ) ರಾಜನೆ, ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆಯಬೇಕೆಂಬುದು ನನ್ನ ಇಷ್ಟವಲ್ಲ. (ಹೊರಡುವಳು.)

ರಾಜ:—ಮಿತ್ರನೆ, ಮುಂದೆ ಮಾಡಬೇಕಾದುದೇನು?

ವಿದೂ:—ನಾರದನ ಮಾತನ್ನು ಮೀರಿದಂತೆ ಕಾಣುವುದು.

ರಾಜ:—ಕರ್ತವ್ಯತಾ ಮೂಢನಾದ ನನಗೆ ಮತ್ತೊಮ್ಮೆ ಜ್ಞಾಪಿಸು.

ವಿದೂ:—ವಿರೋಧನ ವೃತ್ತಿಗೂ, ಇಷ್ಟಪ್ರಾಪ್ತಿಗೂ ಗುರುವರರಾದ ವಸಿಷ್ಠರೇ ಮೂಲಭೂತರೆಂದು ಹೇಳಿರುವರಷ್ಟೆ?

ರಾಜ:—ಬ್ರಹ್ಮಋಷಿಗಳಲ್ಲಿ ಶ್ರೇಷ್ಠರಾದ ವಸಿಷ್ಠರು ಕಾಲಜ್ಞರಾದುದರಿಂದ ಅವರು ಸರ್ವಶಕ್ತರೆಂಬುದರಲ್ಲಿ ಸಂಶಯವಿಲ್ಲ. ಏಕಾಗ್ರಚಿತ್ತದಲ್ಲಿ ಧ್ಯಾನಿಸುವೆನು. (ಧ್ಯಾನಾಸಕ್ತನಾಗಿ ಕುಳಿತುಕೊಳ್ಳುವನು.)

ವಿದೂ:—ಸರಿಯಾಯಿತು; ರಾಜನು ಕಾಮಬಾಧೆಯಿಂದ ಭ್ರಮಿಷ್ಟನಂತೆ ಆಚರಿಸುವನು. ಕಾಮುಕನ ಹಿಂದೆಮುಂದೆ ಸುಳಿದಾಡುವ ನಾನು ದಿಗ್ಭ್ರಮೆಯಿಂದ ಸುಮ್ಮನಿರುವೆನು. ಮುಂದೆ ಏನಾಗುವುದೋ?

(ತೆರೆಯಲ್ಲಿ ಪ್ರಕಾಶವಾಗುವುದು.)

ರಾಜ:—(ತಲೆಯೆತ್ತಿ ನೋಡಿ, ಥಿಗ್ಗನೆದ್ದು)—ಇಲ್ಲಿಗೇ ಬರುವ ಈ ತೇಜಸ್ವಿಯಾರು? ವಸಿಷ್ಠರೇ ಅಹುದಷ್ಟೆ! (ಕೈಜೋಡಿಸಿ ನಮ್ರತೆಯಿಂದ)—ಮಹಾಮಹಿಮರಿಗೆ, ವಂದನೆ!

ವಸಿಷ್ಠ:—(ಪ್ರವೇಶಿಸಿ ರಾಜನ ತಲೆಯಮೇಲೆ ಕೈಯಿಟ್ಟು,) ರಾಜೇಂದ್ರನೇ ಪ್ರಸನ್ನನಾಗಿರುವೆನು.

ರಾಜ:—(ಸಂಭ್ರಮದಿಂದೆದ್ದು,) ಗುರುವರ್ಯರಿಗೆ ವಂದನೆ. ಈ ಪೀಠವನ್ನಲಂಕರಿಸಬೇಕು.

ವಸಿಷ್ಠ:—ರಾಜನೆ, ನಿನ್ನ ಭಕ್ತಿಗೆ ತೃಪ್ತನಾದೆನು. ನನ್ನಿಂದಾಗಬೇಕಾದುದನ್ನು ಹೇಳು.

ರಾಜ:—ಪೂಜ್ಯರೇ, ಸರ್ವಜ್ಞರಾದ ತಮಗೆ ಹೇಳಬೇಕಾದುದೇನು? ನಾರದರು ತಮ್ಮ ಅನುಗ್ರಹದಿಂದ ತಪತಿಯ ಪಾಣಿಗ್ರಹಣವಾಗುವುದೆಂದು ಹೇಳಿದ್ದರು.

ವಸಿಷ್ಠ:—ಯುಕ್ತವೇ ಸರಿ. ಆಯುಷ್ಮಂತನೆ, ನಿನಗೋಸ್ಕರ ಸೂರ್ಯಲೋಕಕ್ಕೆ ತೆರಳಿ, ಸೂರ್ಯನ ಅನುಮತಿಯನ್ನು ಹೊಂದಿ ಸಕಾಲಕ್ಕೆ ಬರುವೆನು.

ನೀನು ಧೌಮ್ಯರ ಆಶ್ರಮಕ್ಕೆ ಹೋಗಿ ಅವರಿಂದ ಉಪದೇಶಿಸಲ್ಪಡುವ ರೀತಿ ಕಾರ್ಯ್ಯಾರಂಭವನ್ನು ಮಾಡು.

ರಾಜ:——ಪೂಜ್ಯರೆ, ಮಂತ್ರಿಸೇನಾಪತಿಗಳೆಲ್ಲಿಯೊ, ಧೌಮ್ಯರ ಆಶ್ರಮವಿರುವುದೆಲ್ಲಿಯೋ——ನನಗಾವುದೂ ತಿಳಿಯುತ್ತಿಲ್ಲ.

ವಸಿಷ್ಠ:—ರಾಜೇಂದ್ರನೆ, ವಿಪ್ರೋತ್ತಮನಾದ ಅಶೋಕನು ಧೌಮ್ಯರ ಆಶ್ರಮವನ್ನು ತೋರಿಸುವನು. ನಿನ್ನ ಮಂತ್ರಿ ಸೇನಾಪತಿಗಳೂ ಅಲ್ಲಿಗೆ ಬಂದು ಸೇರುವರು.

ವಿದೂ:—ಪೂಜ್ಯರೇ, ಆಜ್ಞೆಯಂತೆಯೇ ನಡೆಯುವೆನು.

ವಸಿಷ್ಠ:—ಆಯುಷ್ಮಂತನೆ, ಮಂಗಳವಾಗಲಿ. ನಾನು ತೆರಳುವೆನು. (ಹೊರಡುವನು.)

ರಾಜ:—ಮಿತ್ರನೆ, ಕುಲಗುರುವಾದ ವಸಿಷ್ಠರು ನಿನ್ನನ್ನು ತೋರಿದುದರಿಂದ ಧೌಮ್ಯರ ಆಶ್ರಮವನ್ನು ಕುರಿತು ಮುಂದಾಗಿ ಹೊರಡುವನಾಗು. ನಾನೂ ಹಿಂದೆಯೇ ಬರುವೆನು.

ವಿದೂ—:ಮಹಾರಾಜನೆ, ಈಗಲೆಲ್ಲ ನನ್ನನ್ನೇ ಮುಂದು ಮಾಡುತ್ತಿರುವೇ, ಸುರಸುಂದರಿಯು ಬಂದಾಗ ಮಾತ್ರ ನೀನೇ ಮುಂದಾಗುವೆಯಲ್ಲವೆ? ಇರಲಿ. (ಇಬ್ಬರೂ ಗಮನವನ್ನಭಿನಯಿಸುವರು.)

ರಾಜ:—ಮಿತ್ರನ, ಹಿಂದೆಯೇ ಗೊತ್ತಾಗಲಿಲ್ಲವೆ?

ವಿದೂ:—ಗೊತ್ತಾದುದೇನು?

ರಾಜ:—ಸುರಸುಂದರೀಯರ ಸಮೀಪಕ್ಕೂ ನಿನ್ನನ್ನೇ ಮುಂದಾಗಿ ಕಳುಹಿದುದು?

ವಿದೂ:—(ತಲೆದೂಗುತ್ತ,) ಗೊತ್ತಾಯಿತು, ನೀನು ಸನ್ಮಿತ್ರನೇ ಸರಿ. ಸಂತೋಷ.

ರಾಜ:—ಹಾಗಾದರೆ, ನನ್ನ ಸಂತೋಷವೇ ನಿನ್ನದು?

ವಿದೂ:— ಆದುದರಿಂದಲೇ ನಿನ್ನ ಕಷ್ಟದಲ್ಲಿ ನಾನು ಹೆಂಡಿರುಮಕ್ಕಳನ್ನು ಬಿಟ್ಟು ಕಷ್ಟಪಟ್ಟೆನು.

ರಾಜ:—ಮಿತ್ರನೆ, ಮಾತನಾಡುತ್ತಾ ಬಹುದೂರ ಬಂದಿರುವೆವು. ಆಯಾಸವು ಅತಿಯಾಗಿರುವುದು, ನಡೆಯಲಾರೆ; ಆಶ್ರಮವು ಇನ್ನೂ ಎಷ್ಟು ದೂರವಿರುವುದು?

ವಿದೂ:—(ಮುಂದೆ ಕೈತೋರಿಸುತ್ತ) ಮಿತ್ರನೆ, ಮಹಾರಾಜನೆ, ನೋಡು ನೋಡು! ಇದೇ ಪುಣ್ಯಾಶ್ರಮವು.

ಕಂದ ॥ ಪುಲಿ ಮೊಲೆಯಿಾವುದು ನೋಡೈ ।
ಎಳೆಗರುವಿಗೆ ಬೆಕ್ಕು ಇಲಿಗೆ ಮೊಲೆ ಕುಡುವುದು ಮುನಿ ॥
ಕುಲತಿಲಕನು ತಾನಿರುವೀ । ಸ್ಥಳಮಿದರೊಳಗಿಲ್ಲ ಜಾತಿವೈರಪ್ರಸರಂ ॥

ರಾಜ:—ಮಿತ್ರನೆ, ಇದು ಪುಣ್ಯಾಶ್ರಮವೆನ್ನಲು ಸಂಶಯವಿಲ್ಲ. ನಡೆ; ಹೋಗುವ.

ವಿದೂ:—(ತೆರೆಯಕಡೆ ನೋಡಿ) ಮಹಾರಾಜನೆ. ನೋಡು, ಮಂತ್ರಿ-ಸೇನಾಪತಿಗಳು ಬರುತ್ತಿರುವರು. ಇದೇ ಧೌಮ್ಯರ ಆಶ್ರಮವು. ನೀನು ಇಲ್ಲಿಯೇ ವಿಶ್ರಮಿಸುತ್ತಿರು; ನಾನು ಆಶ್ರಮವನ್ನು ಪ್ರವೇಶಿಸಿ ಸಂಗತಿಯನ್ನು ತಿಳಿದು ಬರುವೆನು. (ಹೋಗುವನು.)

ರಾಜ:—ಮಂತ್ರಿ-ಸೇನಾಪತಿಗಳು ಬರುವವರೆಗೆ ವಿಶ್ರಮಿಸುತ್ತಿರುವೆನು. (ಕುಳಿತುಕೊಳ್ಳುವನು.)

(ಮಂತ್ರಿ-ಸೇನಾಪತಿಗಳು ಪ್ರವೇಶಿಸುವರು.)

ಮಂತ್ರಿ, ಸೇನಾಪತಿ:—ಮಹಾರಾಜನೆ, ವಂದಿಸುವೆವು.

ರಾಜ:—ಸುಖಾಗಮನವಷ್ಟೆ? ನಮ್ಮ ಸೈನ್ಯವೆಲ್ಲಿರುವುದು?

ಸೇನಾ:—ಆಶ್ರಮದ ಹಿಂಭಾಗದಲ್ಲಿ ನಿಲ್ಲಿಸಿ ಬಂದಿರುವೆವು.

ರಾಜ:—ಸೇನಾಪತಿಯೆ, ನಿನ್ನ ಕೆಲಸವು ಶ್ಲಾಘ್ಯವಾದುದು.

ಮಂತ್ರಿ—ಮಹಾರಾಜನೆ, ಇಷ್ಟು ಶ್ರಾಂತನಾಗಿರಲು ಕಾರಣವೇನು?

ರಾಜ:—ಮಂತ್ರಿಯೇ, ದೈವಯೋಗದಿಂದಾದ ತಪತಿಯ ಸಂದರ್ಶನವು.

ಮಂತ್ರಿ:—ಮಹಾರಾಜನೆ, ಆ ಸುರತರುಣಿಯೆಲ್ಲಿ?

ರಾಜ—ತಪನ ಲೋಕದಲ್ಲಿರುವಳು. ಆ ರಮಣಿಯ ಪ್ರಾಪ್ತಿಗಾಗಿಯೇ ಮಹಾತ್ಮರ ಬಳಿಗೆ ಬಂದಿರುವೆನು. ಇದೇ ಮಹಾತ್ಮರ ಪುಣ್ಯಾಶ್ರಮವು ನೋಡು.

ಕಂದ ॥ ಸಚಿವನೆ ನೋಡೀ ವನದೊಳ್ । ಶುಚಿ ರುಚಿಕರಮಾದ ಜೀವನಾಕರಮಿದನುಂ ॥
ರುಚಿರದುಮ ಲತಿಕೆಗಳಿಂ । ರಚಿನಿಹ ಪರ್ಣಮಯಮಾದ ದಿವ್ಯ ಗೃಹಗಳಿಂ ॥

ಮಂತ್ರಿ:—

ವೃತ್ತ ॥ ನಾನಾಧಾತು ವಿಚಿತ್ರರೂಪಸಂತಾನಂ ವನಂ ನೋಡುವೈ ।
ತಾನಾಜ್ಯಾಹುತಿ ಧೂಮಗಂಧಪವನಂ ತಾನೆಲ್ಲಿಯುಂ ಕಾಲದೊಳ್ ॥
ಸ್ನಾನಾರ್ಥೀಕೃತವಲ್ಕಲಂ ಮುನಿಕುಲಂ ನಿಶ್ಚಂಚಲಂ ನಿರ್ಮಲಂ ।
ನಾನಾಮ್ನಾಯವಚಸ್ಕರಾಕ್ಷ ರಮಯಧ್ವಾನಂ ವನೋನಂದನಂ ॥

ರಾಜ:—ಮಂತ್ರಿಯೆ, ಈ ಪುಣ್ಯಾಶ್ರಮ ಸಂದರ್ಶನದಿಂದಲೇ ಬಲ ಭುಜವೂ, ಬಲ ತೊಡೆಯೂ, ತುಟಿಯೂ ಅದರುವುವು. ಈ ಶುಭಶಕುನವು ಇಷ್ಟಳಾದ ಸ್ತ್ರೀಲಾಭವನ್ನು ಸೂಚಿಸುವುದು.

ಮಂತ್ರಿ:—ಮಹಾರಾಜನೆ, ವೇದಘೋಷವು ಕೇಳಬರುವುದರಿಂದ ಮಹರ್ಷಿಗಳು ಸಮೀಪವರ್ತಿಗಳಾಗಿ ಆಶ್ರಮದಲ್ಲಿರುವರೆಂದು ತಿಳಿವುದು. ದರ್ಶನ ವನ್ನು ಪಡೆಯುವ!

ರಾಜ:— ಆಗಬಹುದು. (ಇಬ್ಬರೂ ಹೊರಡುವರು.)

(ಆಶ್ರಮದೊಳಗೆ ಧೌಮ್ಯರು ವೇದಪಾರಾಯಣ ಮಾಡುತ್ತ ಶಿಷ್ಯರೊಡನೆ ಕುಳಿತಿರುವರು.)

ರಾಜ:–(ಮಂತ್ರಿ--ಸೇನಾಪತಿಗಳೊಡನೆ ಬಂದು) ಪೂಜ್ಯರಿಗೆ, ನಮಸ್ಕರಿಸುವೆವು.

ಧೌಮ್ಯ:— ಸಪರಿವಾರನಾದ ರಾಜನಿಗೆ ಕಲ್ಯಾಣವಾಗಲಿ!

ರಾಜ:—ಪೂಜ್ಯರೆ! ವಸಿಷ್ಠರ ನಿಯಮನದಂತೆ ಇಷ್ಟಾರ್ಥಸಿದ್ಧಿಗಾಗಿ ತಮ್ಮ ಅನುಗ್ರಹವನ್ನು ಪ್ರಾರ್ಥಿಸುವೆನು.

ಧೌಮ್ಯ:—ಮಹಾರಾಜನೆ, ಎಲ್ಲವನ್ನೂ ತಿಳಿದಿರುವೆನು. ನೀನು ಹನ್ನೆರಡು ದಿನಗಳು ನಿಯಮದಿಂದ ಮಾಡಬೇಕಾದ ವ್ರತವನ್ನು ತಿಳಿಸುವೆನು; ಮತ್ತು, ಒಂದು ಮಂತ್ರವನ್ನು ಉಪದೇಶಿಸುವೆನು. ತದೇಕಾಯತ್ತಚಿತ್ತನಾಗಿ ಅವರೆಗೂ ಜಪಿಸುತ್ತಿರಬೇಕು. ಆ ಹನ್ನೆರಡು ದಿನಗಳೂ ಬ್ರಾಹ್ಮಣರಿಗೆ ಸಂತರ್ಪಣೆಯಾಗಬೇಕು.

ರಾಜ:—ಅಪ್ಪಣೆಯಂತೆ ನಡೆಯಿಸುವೆನು. (ಮಂತ್ರಿಯ ಕಡೆಗೆ ತಿರುಗಿ) ಮಂತ್ರಿವರ್ಯನೆ, ಎಲ್ಲವೂ ತಿಳಿಯಿತಷ್ಟೆ?

ಮಂತ್ರಿ:—ಅಭಿಪ್ರಾಯದಂತೆಯೇ ಕಾರ್ಯವನ್ನು ನಡೆಯಿಸುವೆನು.

ಧೌಮ್ಯ:—ಆಯುಷ್ಮಂತನೆ, ಸತ್ಪಾತ್ರನಾದ ನಿನಗೆ ಮಂತ್ರೋಪದೇಶ ಮಾಡುವೆನು. ಬಲದ ಕಿವಿಯನ್ನು ತೋರಿಸು.

ರಾಜ:—(ವಿಧೇಯನಾಗಿ ಕಿವಿಯನ್ನು ತೋರಿಸುವನು.)

ಧೌಮ್ಯ—(ಉಪದೇಶಿಸಿ,) ಈ ಮಂತ್ರವು ಪಾವನಕರವೂ ಅಭೀಷ್ಟಪ್ರದವೂ ಆದುದು!

ರಾಜ:—ಆಜ್ಞೆಯಾದರೆ, ನಿಯಮದಿಂದ ತಮ್ಮ ಉಪವನದಲ್ಲಿ ಜಪಸುವೆನು.

ಧೌಮ್ಯ—ಸಿದ್ಧಿರಸ್ತು!

ರಾಜ:—ಅನುಗೃಹೀತನಾದೆನು. (ಹೋಗುವನು.)

ಧೌಮ್ಯ—ಮಂತ್ರಿಯೇ, ಪಾಕಶಾಲೆಯಲ್ಲಿ ನೋಡಿಕೊಂಡು ಬ್ರಾಹ್ಮಣಭೋಜನವು ತೃಪ್ತಿಕರವಾಗಿ ನಡೆಯುವಂತೆ ಜಾಗರೂಕನಾಗಿರು.

ಮಂತ್ರಿ—ಪೂಜ್ಯರೆ ಅಪ್ಪಣೆಯಂತೆ ನಡೆಯುವೆನು. (ಕೈಮುಗಿದು ಹೋಗುವನು.)

ಧೌಮ್ಯ:--ಎಲೈ ಸೇನಾಪತಿಯೆ, ಮಂತ್ರಿಗೆ ಸಹಾಯಕನಾಗಿದ್ದು ಕಾರ್ಯವನ್ನು ನೆರವೇರಿಸಬೇಕು. ಪ್ರಮತ್ತನಾಗಿರಬಾರದು, ನಾನು ಹೋಮಶಾಲೆಗೆ ಹೋಗುವೆನು. (ಹೋಗುವನು.)

ಸೇನಾಪತಿ:--ನಾನೂ ಬ್ರಾಹ್ಮಣರ ಸ್ವಾಗತವನ್ನು ಮಾಡಲು ಹೋಗಿ ಮಂತ್ರಿಗೆ ಸಹಾಯಕನಾಗಿ ನಿಲ್ಲುವೆನು. (ಹೊರಡುವನು.)

(ಬ್ರಾಹ್ಮಣರ ಗುಂಪು ಪ್ರವೇಶಿಸುವುದು.)

ಬ್ರಾಹ್ಮಣರು ಒಬ್ಬೊಬ್ಬರಾಗಿ ಹಾಡುವರು.

ರಾಗ; ಚಾಪು ॥ (ಬನ್ನಿರಿ ಬನ್ನಿರಿ ಎಂಬಂತೆ.)

ಬನ್ನಿರಿ ಬನ್ನಿರಿ ಪೋಗೋಣ ।
ಭೋಜನ ಶಾಲೆಯ ಸೇರೋಣ ।
ಮನ್ನಣೆ ದಕ್ಷಿಣೆಯಂ ಪಡೆಯೋಣ ।
ಇನ್ನಾ ಬಡತನಮಂ ಮರೆಯೋಣ ॥ ೧ ॥
ಪೊಂಗಲ್ ಪುಳಿ ಓಹರೆ ಅತಿ ರಸಮುಂ ।
ನಾಂಗಳ್ ಸಾಪ್ಪಡಲಾಮಿಪ್ಪೋದುಂ ॥
ರಂಗಂ ಕೃಪೆಶೆಯ್ದಾ ನಿಪ್ಪಿಥಮಾಯ್ ।
ಮಂಗಳಗೀತಂಗಳೆ ಶೊಲ್ವಾಂ ಮೇಲಾಯ್ ॥ ೨ ॥
ದಕ್ಷಿಣ ತಾಂಬೂಲ ಮುಲನಿಸ್ಸಾರು ।
ಮೇ ಮಾಕ್ಷಣಮೇ ಶಿಷ್ಯುಲುವೆರಸಿಪೋಸಾಮು ।
ದೀಕ್ಷಿತುಲಂದರು ಮುಂದುರುಗಾನೇಮಿಾ ।
ಈಕ್ಷಿಪನಂಟನೆ ಚೇರಿರಿ ಸಾಮಿ ॥ ೩ ॥

(ಎಲ್ಲರೂ ಒಟ್ಟುಗೂಡಿ)

ಸಂವರಣಮಹಾರಾಜನು, ಬ್ರಾಹ್ಮಣರನ್ನು ಭೋಜನದಿಂದಲೂ ದಕ್ಷಿಣೆಯಿಂದಲೂ ತೃಪ್ತಿಪಡಿಸುವನು. ಮಹಾರಾಜನ ಇಷ್ಟಾರ್ಥವು ಕ್ಷಿಪ್ರದಲ್ಲಿಯೇ ಸಿದ್ಧಿಯಾಗಲೆಂದು ದೇವರನ್ನು ಪ್ರಾರ್ಥಿಸುವ, ನಡೆಯಿರಿ.

ಮಂತ್ರಿ:--(ಮುಂದೆಬಂದು ಕೈಜೋಡಿಸಿ) ಪೂಜ್ಯರೇ! ಭೋಜನಶಾಲೆಯಲ್ಲಿ ಎಲ್ಲವೂ ಸಿದ್ಧವಾಗಿರುವುದು, ದಯೆಮಾಡಬೇಕು.

ಬ್ರಾಹ್ಮಣರು:--ಅಯ್ಯಾ ಮಂತ್ರಿಶೇಖರನೆ, ಬ್ರಾಹ್ಮಣಪ್ರಿಯರಿಗೆ ಭದ್ರಂ! ಶುಭಂ!! ಮಂಗಳಂ!!! ನಾವೂ ಸಿದ್ಧರಾಗಿಯೇ ಇರುವೆವು.

(ಬ್ರಾಹ್ಮಣರೊಡನೆ ಮಂತ್ರಿಯು ಹೊರಡುವನು.)

ಇಲ್ಲಿಗೆ ಚತುರ್ಥಾಂಕಕ್ಕೆ ಮಂಗಳಂ.

ಶ್ರೀಃ

ಶ್ರಿಯೈ ನಮಃ

ಪಂಚಮಾಂಕ ಪ್ರಾರಂಭವು.

ಸುಮೇರುಪರ್ವತಪ್ರಾಂತ.

(ಮ್ಲಾನಮುಖದಿಂದ ಕೂಡಿದ ಮಾಯಾತಪತಿಯ ಪ್ರವೇಶ.)

ಮಾ. ತಪತಿ:—(ನಿಟ್ಟುಸಿರಿಟ್ಟು.)

ರಾಗ: ಕಮಾಚ್ ॥ (ಕಂತುಕಾಪಮೆಂತು ಸೈಪೆ.)

ಏನಗೈಯ್ವೆ ನಾನಿದಕೆ-ಯು-ನ್ನುದ್ದೇಶ ಕಾರ್ಯಕೆ ॥ ಪ ॥
ಹಾನಿಬಂದ ಮೇಲೇತಕೆ, ತನುಧನ, ಮೆನ್ನೀ ತಾಪಕೆ ॥ ಅ ॥
ಉಮ್ಮಳಿಸುತೆ ಸಾರ್ದೆನಾಂ ಭೂಮಿಪಾಲನಾತನಂ ।
ಹೆಮ್ಮೆಯಿಂ ವಶಗೊಂಬೆನೆಂದು । ಎಮ್ಮ ರಾಜನೊಡನುಸಿರ್ದು ಚಿ...
॥
ನುಡಿದ ನುಡಿಯು ಸಫಲವಾಗದೆ । ಮಿಡುಕುವಂತೆಯಾದುದ...
ಪೊಡವಿಯೊಳಿಂತಪಮಾನದಿ । ಒಡಲನಿಲ್ಲಿಸೆ ದುರ್ವಿಧಿ ॥ ೧ ॥

ನನ್ನ ಸ್ಥಿತಿಯೇ ಹೀಗಾದ ಮೇಲೆ ನಮ್ಮ ದನುಜಾಧಿಪನ ಸ್ಥಿತಿ ಮತ್ತೇ... ಗಿರಬಹುದೋ? ಹೋಗಿನೋಡಲು ಮಾನವು ಬೇರೆ ಕಾಡುತ್ತಿರುವುದು. ಈಗೇನು ಮಾಡಲಿ?

ರಾಗ: ಖರಹರ ಪ್ರಿಯ ॥ (ಚಿನ್ನದಾಸರಾ.)

ಏನಮಾಡಲೀ — ಇದಕಿನ್ನೇನ ಮಾಡಲಿ ॥ ಪ ॥
ಮಾನವಿಂತು ಬಾಧಿಸುವುದು। ಮ್ಲಾನಮುಖದಿ ಪೋಪನೆಂತು ॥ ಏನ
॥ ಅನು ॥
ಎಳಸಿದೀಪರಿಕಜ್ಜಮಿಂತು — ವಿಫಲವಾಗೆ ದುಗುಡದಿಂದೆ ।
ಪೊಳಲಸೇರ್ದಪೆನೆಂತೊ । ಗೆಳೆಯನೆಂತಿರ್ಪನೋಹಾ ॥ ಏನ ॥ ೧ ॥

(ಚಿಂತಿಸುತ್ತಿದ್ದು ಮತ್ತೆ ಸುತ್ತಲೂ ನೋಡಿ)

ಇರಲಿ, ಇನ್ನೊಂದು ಬಾರಿ ಪ್ರಯತ್ನಮಾಡಿ, ಸಂವರಣನೊಬ್ಬನೇ ಸಿಕ್ಕಿದರೆ ನನ್ನ ಎಲ್ಲ ಉಪಾಯವನ್ನೂ ಪ್ರಯೋಗಿಸುವೆನು. (ತೆರೆಯ ಕಡೆ ನೋಡಿ ಸಂತೋಷದಿಂದ,) ಆಹಾ! ನನ್ನ ಸುಕೃತವಿಶೇಷದಿಂದ ಸಂವರಣನು ಒಬ್ಬನೇ ಇತ್ತಕಡೆಗೆ ಬರುತ್ತಿರುವನು. ಮರೆಯಾಗಿದ್ದು ನೋಡುವೆನು. (ಮರೆಯಾಗುವಳು.)

ಮಾ. ಸಂ.:——(ಪ್ರವೇಶಿಸಿ) (ಸ್ವಗತಂ) ಸುಮೇರುಪರ್ವತದಲ್ಲಿ ತಪತಿಯು ಸಖಿಯರೊಡನಿದ್ದುದರಿಂದ ವಶಳಾಗಲಿಲ್ಲ. ಈ ವನಪ್ರದೇಶದಲ್ಲಿ ಒಬ್ಬಳೇ ವಿಹಾರಕ್ಕೆ ಬಂದಿದ್ದುದನ್ನು ನೋಡಿ ಬಂದೆನು. (ಸುತ್ತಲೂ ಹುಡುಕಿ, ಖಿನ್ನನಾಗಿ ಕೈ ಹಿಸುಕೊಳ್ಳುತ್ತಾ,)

ರಾಗ: ಧನಾಸರಿ ॥ (ಮರೆಯಾದಳಯ್ಯೊ ಸಖಿ.)

ಹಾರಿದಳೀ ಪರಿ — ಗಾರುಗೊಳಿಪಳೇ ಸರಿ ॥ ಪ ॥
ನೋಟದಿಂದಲೆ । ಕಡು ತಾಪಗೊಳಿಪಳೆ ।
ಾಪ್ತಜೆ ಕೋಮಲೆ । ಜಡಜಾಕ್ಷಿಯಾ ಬಾಲೆ ॥ ೧ ॥

(ವನದ ಗಿಡಗಳನ್ನು ನೋಡಿ)

ಕಂದ॥ ಫುಲ್ಲಾಶೋಕವೆ ನೀವಾ । ಫುಲ್ಲಾಕ್ಷಿಯ ಕಂಡಿರೇನು ಚಲ್ವಿನ ಖನಿಯಂ ।
ಫುಲ್ಲಾಸ್ತಕೊಲ್ವನೆನ್ನಂ । ಎಲ್ಲಿರ್ಪಳೊ ಪೇಳಿ ಸೂರ್ಯಸುತೆಯಾ ತಪತೀ ॥
(ಹುಡುಕುತ್ತಿರುವನು. ಮರೆಯಲ್ಲಿದ್ದ ಮಾಯಾತಪತಿ ಮುಂದೆ ಬರುವಳು.)

ಮೂ. ತ.:—(ಸ್ವಗತಂ) ಸಂವರಣನು ಒಬ್ಬನೇ ಇರುವನು, ಮತ್ತು ನನ್ನನ್ನೇ ಹುಡುಕುತ್ತಿರುವನು. ಇದೇ ಸಮಯದಲ್ಲಿ ಇವನನ್ನು ಮೋಹಪಾಶದಲ್ಲಿ ಕಟ್ಟಿ ವಶಪಡಿಸಿಕೊಳ್ಳುವೆನು. (ಪ್ರಕಾಶಂ) ಮಹಾರಾಜನೆ, ವಿಧೇಯಳಾದ ನಾನು ಇಲ್ಲಿಯೇ ಇರುವೆನು.

ಮೂ. ಸಂ.:—(ಸ್ವಗತಂ) ನಾನು ಸುಮೇರುಪರ್ವತದಲ್ಲಿ ನಿಲ್ಲದೆ ಕೋಪದಿಂದ ಬಂದೆನಾಗಿ ಈಗ ನನ್ನಲ್ಲಿ ಇಷ್ಟು ವಿನೀತಳಾದಳು. ಈಗ ಶಠನಾಗಿದ್ದರೆ ನಿರಾಶಳಾದರೂ ಆಗಬಹುದು. (ಪ್ರಕಾಶಂ) ಆರ್ಯೆ, ಏಕಾಂಗಿಯಾಗಿ ತಿರುಗುವುದನ್ನು ನೋಡಿದರೆ ನನ್ನನ್ನೇ ಹುಡುಕಿಕೊಂಡು ಬಂದಂತೆ ತೋರುವುದು?

ಮೂ. ತ:—(ಸ್ವಗತಂ) ಈ ರಾಜನು ನನ್ನ ಪಾಶಕ್ಕೆ ಚೆನ್ನಾಗಿ ಬಿದ್ದಿರುವನು. ಇದೇ ಕಾರ್ಯ ಸಿದ್ಧಿಸಮಯವು. (ಪ್ರಕಾಶಂ) ಮಹಾರಾಜನೆ, ನಾನು ತೆರಳಿದಾಗ ನೀನು ಅತಿ ಕಾತರನಾಗಿದ್ದುದರಿಂದ ಮತ್ತೊಮ್ಮೆ ನಿನ್ನನ್ನು ನೋಡಿಕೊಂಡು ತಪನಲೋಕಕ್ಕೆ ಹೋಗಲು ಬಂದೆನು. (ಹೊರಡುವಳು.)

ಮೂ. ಸಂ:—ಇದೇನಿದು? ಪ್ರಿಯೆ, ಹೊರಡುವೆಯೆಲ್ಲಿಗೆ? (ಅಡ್ಡಗಟ್ಟುವನು.)

ಮೂ. ತ:—ರಾಜೇಂದ್ರನೇ, ವಿಧೇಯಳಾಗಿಯೇ ಇರುವ ನನ್ನನ್ನೇಕೆ ತಡೆಯುವೆ?

ಮೂ. ಸಂ:—(ಕೈಹಿಡಿದು)

ರಾಗ|| (ಬಿಡೊ ಬಿಡೊ ತಡೆಯದೆ ದಾರಿಯ.)

ನಡೆನಡೇ ಸಖಿ ಉಡುರಾಜಮುಖಿ || ಪ ||
ಮಾರನ ಶರದಿಂ ಗಾರಾಗಿಹೆನಧಿಕಂ |
ವಾರಿಸುಯನ್ನ ಶರೀರಸಂತಾಪಮಂ || ೧ ||
ಮನಸಿಜನಾಟದಿಂ ದಣಿಸುವೆಮನದಿಂ |
ಅನುಮಾನವಬಿಡು ದಿನಮಣಿನಂದನೆ || ನಡೆ || ೨ ||

ಮೂ. ತ:—(ಲಜ್ಜಿತಳಾದಂತೆ ನಟಿಸಿ) ಕರೆದೊಯ್ಯುವದೆಲ್ಲಿಗೆ? ಹಸ್ತಿನಾಪುರಕ್ಕೊ? ಅಥವಾ ತಪನಲೋಕಕ್ಕೊ?

ಮಾ. ಸಂ:--ಆರ್ಯೆ, ಕೆಲವುಕಾಲ ಈ ಪರ್ವತಪ್ರದೇಶದಲ್ಲಿ ವಿಹರಿಸುವ.

ಮಾ. ತ:--(ಸ್ವಗತಂ) ಇವನು ಸಂವರಣನೇ ಆಗಿದ್ದರೆ ಇಷ್ಟುಮಟ್ಟಿಗೆ ನಾನು ಅನುಕೂಲಳಾದುದರಿಂದ ತನ್ನ ಪಟ್ಟಣಕ್ಕೇ ಹೋಗುತ್ತಿದ್ದನು. ಇವನು ನನ್ನ ಮಿತ್ರನೇ ಆಗಿರಬಹುದೋ, ನೋಡುವೆನು. (ಪ್ರಕಾಶಂ) ನನ್ನ ಕುಲಶೀಲಗಳನ್ನು ತಿಳಿದೂ ನೀನು ಈ ರೀತಿ ಹೇಳುವುದು ಆಶ್ಚರ್ಯವಾಗಿದೆ?

ಮಾ. ಸಂ:--ಪ್ರಿಯೆ, ನನ್ನ ಮಾತಿನಲ್ಲಿ ಆಶ್ಚರ್ಯವೇನು?

ಮಾ. ತ:--ಪ್ರಿಯನೆ, ಪರ್ವತದೇಶಾಧಿಪತಿಯಾದ ಚಿತ್ರಸೇನನು ತಪತಿಯಲ್ಲಿ ಅನುರಕ್ತನಾಗಿರುವನೆಂದು ನೀನೂ ಕೇಳಿ ಬಲ್ಲೆಯಷ್ಟೆ?

ಮಾ. ಸಂ:--(ಸ್ವಗತಂ) ಇವಳಿಗೆ ನನ್ನ ಭಯವು ಅತಿಯಾಗಿರುವುದು. ಹೇಗೂ ಇವಳು ನನ್ನ ಕೈವಶವಾಗಿರುವಳು. ಈಗ ನನ್ನ ನಿಜರೂಪವನ್ನು ತೋರಿಸಿದರೆ ಬಾಧಕವಿಲ್ಲ. ಇರಲಿ, (ಪ್ರಕಾಶಂ) ಎಲೆ, ತಪನನಂದನೆ, ನಿನ್ನ ಸಂವರಣನಿಗೆ ಮೃತ್ಯುಪ್ರಾಯನಾದ ಚಿತ್ರಸೇನನೇ ನಾನು!

ಮಾ. ತ:--ನಾನು ನಂಬಲಾರೆನು.

ಮಾ. ಸಂ:-ಏಕೆ, ನಂಬಲಾರೆ? ಸತ್ಯವಾಗಿಯೂ ನಾನೇ ಚಿತ್ರಸೇನನು.

ಮಾ. ತ--ಹಾಗಾದರೆ, ನಿನ್ನ ಮಿತ್ರನಾದ ಮಾಯಾವಿಯೇ ನಾನು!

ಮಾ. ಸಂ--(ನಿರುತ್ಸಾಹನಾಗಿ.) ಅಯ್ಯೋ, ಮಿತ್ರನೆ, ನಮ್ಮ ಕಪಟವು ...ಯೇ ಫಲಿಸಿತು.

ಮಾ. ತ:--ಮಿತ್ರನೆ, ಪ್ರಾರಂಭದಲ್ಲಿ ನನ್ನನ್ನು ನೋಡಿ ನೀನು ಭ್ರಮಿಸಿದ ...ನಿನಗೆ ವಿವೇಕವನ್ನು ಹೇಳಿದ ನಾನೇ ಈಗ ಮೋಸಹೋದುದು ದೈವ...ವು!

ಚಿತ್ರಸೇನ:--ಮಿತ್ರನೆ, ನಾವು ಈ ಆಲಾಪದಲ್ಲಿಯೇ ಕಾಲಕಳೆದೆವು. ...ತಿಯಾಗಲಿ, ಸಂವರಣನಾಗಲಿ, ಈ ಅರಣ್ಯದಲ್ಲಿಲ್ಲ. ವಿದ್ಯಮಾನವನ್ನು ತಿಳಿಯಲು ಹೋಗಿದ್ದ ಗೂಢಚಾರನೂ ಬರಲಿಲ್ಲ.

ಮಾಯಾವಿ:—(ತೆರೆಯಕಡೆ ನೋಡಿ) ಇದೋ ಚಾರನು ಬರುತ್ತಿರುವನು.

(ಚಾರನು ಪ್ರವೇಶಿಸುವನು.)

ಚಾರ:--ಪ್ರಭುವೆ, ವಂದಿಸುವೆನು.

ಚಿತ್ರಸೇನ:—ಇಷ್ಟು ವಿಳಂಬಕ್ಕೆ ಕಾರಣವೇನು?

ಚಾರ:—ರಾಜಧಾನಿಯಲ್ಲಿ ದರ್ಶನವಾಗಲಿಲ್ಲ. ಅರಣ್ಯದಲ್ಲಿ ರೂಪಾಂತರದಲ್ಲಿದ್ದ ತಮ್ಮನ್ನು ನೋಡಿದ ನನಗೆ ಸಂದೇಹವುಂಟಾಯಿತು. ನಿಜವನ್ನು ತಿಳಿದ ಬಳಿಕ ಬಂದೆನು.

ಚಿತ್ರಸೇನ:—ತಪತಿಯ ವಿಚಾರವೇನು?

ಚಾರ:—ತಪತಿಯು ತಪನಲೋಕದಲ್ಲಿರುವಳು. ವಸಿಷ್ಠರು ಸಂವರಣನನ್ನು ಧೌಮ್ಯರ ಆಶ್ರಮಕ್ಕೆ ಕಳಿಸಿ ತಾವು ಸೂರ್ಯನನ್ನು ಒಡಂಬಡಿಸಿ ಕಾಲಕ್ಕೆ ಸರಿಯಾಗಿ ತಪತಿಯೊಡನೆ ಬರುವುದಾಗಿ ಹೇಳಿಹೋದರು. ಸಂವರಣನು ಧೌಮ್ಯರ ಆಶ್ರಮದಲ್ಲಿ ಸೂರ್ಯೋಪಾಸನೆಯಲ್ಲಿರುವನು. ಬ್ರಾಹ್ಮಣಸಂತರ್ಪಣೆಯು ನಡೆಯುತ್ತಿರುವುದು. ಧೌಮ್ಯರು ವಿಧಿಪುರಸ್ಸರ ಹವನ ಹೋಮದಲ್ಲಿರುವರು.

ಮಾಯಾವಿ:—(ಚಿತ್ರಸೇನನನ್ನು ನೋಡಿ) ಮಿತ್ರನೆ, ಎಲ್ಲವೂ ಸ್ಪಷ್ಟವಾಯಿತು; ನಮ್ಮ ಮಂತ್ರಿಯನ್ನು ಕರಸಿಕೊಂಡು ಧೌಮ್ಯರ ಆಶ್ರಮಕ್ಕೆ ಹೋಗಬೇ

ಚಿತ್ರ:—ಚಾರನೆ, ನೀನು ಹೋಗಿ ನಮ್ಮ ಮಂತ್ರಿಯನ್ನು ಕಳುಹ

ಚಾರ:—ಅಪ್ಪಣೆ (ಹೋಗುವನು.)

ಚಿತ್ರ:—ಮಿತ್ರನೆ, ಧೌಮ್ಯಾಶ್ರಮಕ್ಕೆ ನಾವು ತೆರಳಿ ಮಾಡುವುದೇನು

ಮಾಯಾವಿ:—ನಾವು ತಪತಿ, ವಸಿಷ್ಠ, ಸಂವರಣರಾಗಿ ಕಾಲಕ್ಕೆ ದಾಗಿ ಸೇರಿದ್ದು, ನಿಜವಾದ ಸಂವರಣನನ್ನು ಸ್ವಾಧೀನಪಡಿಸಿಕೊಳ್ಳುವುದು.

ಚಿತ್ರ:—ವಸಿಷ್ಠ, ಧೌಮ್ಯರು ಅಷ್ಟು ಶಕ್ತಿಹೀನರೆ? ವಿವಾಹಕಾಲ ಸೂರ್ಯನೇ ಬರುವುದಿಲ್ಲವೆ?

ಮಾಯಾವಿ:--ಮಿತ್ರನೆ, ಒಂದುವೇಳೆ ನೀನು ಹೇಳಿದುದೆಲ್ಲವೂ ಸಂಭ ವಿಸಿದರೆ, ನಾವು ಮೂವರೂ ನಿಜರೂಪದಿಂದ ಮೂರುಲೋಕವನ್ನು ಜಯಿಸಲಾರೆ ವೇ? ಪ್ರಯತ್ನಿಸಿದ ಮೇಲೆ ವಿಘ್ನಕ್ಕೆ ಅಂಜುವುದು ಧರ್ಮವಲ್ಲ. (ಚಿತ್ರಸೇನನ ಮಂತ್ರಿ ಪ್ರವೇಶಿಸುವನು.)

ಮಂತ್ರಿ:--ದೈತ್ಯರಾಜನೆ, ವಂದಿಸುವೆನು.

ಚಿತ್ರ:--ಮಂತ್ರಿಯೆ, ನೀನು ಮಾಯಾವಸಿಷ್ಠನಾಗಿ ನನ್ನ ಜತೆಯಲ್ಲಿರ ಬೇಕು.

ಮಂತ್ರಿ:--ಅಪ್ಪಣೆ.

ಮಾಯಾವಿ:--ಧೌಮ್ಯರ ಆಶ್ರಮದ ವರೆಗೆ ಮೂವರೂ ಸೇರಿಹೋಗುವ.

ಚಿತ್ರ:--ಆಗಬಹುದು. (ಮೂವರೂ ಹೊರಟು ಗಮನವನ್ನಭಿನಯಿಸುವರು.)

ಚಿತ್ರ:--ಮಿತ್ರನೆ, ಅದೋ ನೋಡು, ಸಂವರಣನು ಊರ್ಧ್ವಮುಖನಾಗಿ ತಪಸ್ಸನ್ನು ಮಾಡುತ್ತಿರುವನು. ಇದೇ ಧೌಮ್ಯರ ಆಶ್ರಮವಾಗಿರಬೇಕಲ್ಲವೆ?

ಮಾಯಾವಿ:--ಅಹುದು, ಇದೇ ಧೌಮ್ಯರ ಆಶ್ರಮವು. ನೀನೊಬ್ಬನೇ ಹೋಗಿ ಧೌಮ್ಯರನ್ನು ಸ್ವಾಧೀನಪಡಿಸಿಕೊಳ್ಳುವನಾಗು. ವಸಿಷ್ಠನಾಗುವ ಮಂತ್ರಿ ಯೊಡನೆ ನಾನು ಬರುವೆನು. (ಮಂತ್ರಿಯೊಡನೆ ಹೋಗುವನು.)

ಚಿತ್ರ:--(ಮುಂದಕ್ಕಡಿಯಿಟ್ಟು ಸುತ್ತಲೂ ನೋಡಿ, ಸ್ವಲ್ಪಹೊತ್ತು ಕಿವಿಕೊಟ್ಟು ಕೇಳು) ಆಹಾ, ಭೋಜನಶಾಲೆಯಲ್ಲಿ ಬ್ರಾಹ್ಮಣರ ಗದ್ದಲವು ವಿಶೇಷವಾಗಿರುವುದು. ನಿಧಿಯಾದ ಸಂವರಣನ ಮಂತ್ರಿಯು ದ್ವಾರದಲ್ಲಿರುವನು. ಇವನನ್ನು ಲು ಸ್ವಾಧೀನಪಡಿಸಿಕೊಳ್ಳುವೆನು. (ಪ್ರಕಾಶಂ) (ಮುಂದೆ ಬಂದು ನಿಲ್ಲುವನು.)

ಸುಮತಿ:—(ಎದ್ದು) ಮಹಾರಾಜನೆ, ವಂದಿಸುವೆನು. ಕ್ಲ್ ಪ್ತಕಾಲಕ್ಕೆ ದಲೇ ಬಂದಿರುವುದರಿಂದ ದ್ವಾದಶಾತ್ಮನು ಪ್ರಸನ್ನನಾದನೆಂದು ಭಾವಿಸುವೆನು.

ಚಿತ್ರಸೇನ, (ಮಾ. ಸಂ):--ಮಂತ್ರಿಯೆ ಮನಸ್ಸು ದೃಢವಾಗಿದ್ದರೆ, ಘಳಿ ಗೆಯು ವರುಷದ ಫಲವನ್ನು ಕೊಡುವುದು. ಎಲ್ಲವೂ ಸಿದ್ಧವಾಯಿತು.

ಸುಮತಿ:—ಧನ್ಯನಾದೆನು.

ಮೂ. ಸಂ:—ಮಂತ್ರಿಯೆ, ಸಮಯವೇನು?

ಸುಮತಿ:—ಬ್ರಾಹ್ಮಣರ ಭೋಜನವಾಗುತ್ತಿರುವುದು.

ಮೂ. ಸಂ:—ಮಹರ್ಷಿಯ ಸಮಯವೇನು?

ಸುಮತಿ:—ಪೂಜ್ಯರು ಹವನದಲ್ಲಿ ಪ್ರವರ್ತಕರಾಗಿರುವರು.

ಮೂ. ಸಂ:—ಹಾಗಾದರೆ ನನ್ನ ಆಗಮನವನ್ನು ತಿಳಿಸು.

ಸುಮತಿ:—(ಪಕ್ಕಕ್ಕೆ ತಿರುಗಿ.) ಹರಿಕಾರನೇ, ಪೂಜ್ಯರಿಗೆ ತಿಳಿಸು.

ಹರಿಕಾರ:—ಅಪ್ಪಣೆ (ಹೋಗುವನು.)

ಧೌಮ್ಯ:—(ಪ್ರವೇಶಿಸುವನು.)

ಮೂ. ಸಂ:—ಪೂಜ್ಯರಿಗೆ ವಂದಿಸುವೆನು.

ಧೌಮ್ಯ:—(ಸ್ವಗತಂ) ಕ್ಲೃಪ್ತಕಾಲಕ್ಕೆ ಮೊದಲೇ ಬಂದಿರುವುದು ಸಂಶಯಾಸ್ಪದವಾಗಿರುವುದು. (ಪ್ರಕಾಶಂ) ಸತ್ಯವು ಜಯವನ್ನು ಹೊಂದಲಿ!

ಮೂ. ಸಂ:—(ಸ್ವಗತಂ) ಶಾಪಾನುಗ್ರಹ ಶಕ್ತಿಯುಳ್ಳ ಇವರು, ಅನ್ಯ[illegible] ಅನುಗ್ರಹಿಸಿದ್ದರೆ ನನಗೆ ಶುಭವಾಗುತ್ತಿದ್ದಿತು. (ಪ್ರಕಾಶಂ) ಪೂಜ್ಯರೆ, [illegible]ನಾರ್ಥ ಹವನಶಾಲೆಗೆ ಬರಬಹುದೆ?

ಧೌಮ್ಯ:—ಇದು ಸಮಯವಲ್ಲ; ಸಭಾಮಂಟಪದಲ್ಲಿರಬೇಕು. (ಹ[illegible]ವರು.)

ಮೂ. ಸಂ:—ಮಂತ್ರಿಯೆ, ನೀನು ಇಲ್ಲಿಯೇ ಜಾಗರೂಕನಾಗಿ[illegible] (ಸಭಾಮಂಟಪದಲ್ಲಿ ಎದುರಾಗಿ ಕುಳಿತುಕೊಳ್ಳುವನು.)

ಮಂತ್ರಿ, (ಸುಮತಿ):—ಮಹಾರಾಜನೆ, ಬ್ರಾಹ್ಮಣರ ಸಂತರ್ಪಣೆ[illegible]ಯಾಯಿತು.

ಮಾ. ಸಂ:––(ಸ್ವಗತಂ) ಅವರನ್ನು ಬರಮಾಡಿಕೊಂಡರೆ ಯಾರ್‍ಯಾ ತೇಜಸ್ಸು ಹೇಗೆ ಹೇಗೆ ಇರುವುದೋ? ಅಲ್ಲಿಂದಲ್ಲಿಯೇ ಕಳುಹುವುದು ಉತ್ತಮ. (ಪ್ರಕಾಶಂ) ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲಗಳಾಗಿದ್ದರೆ ಕಳುಹು. ಅವರನ್ನೇಕೆ ನಿಲ್ಲಿಸಿಕೊಂಡಿರಬೇಕು.

ಸುಮತಿ:––ಎಲ್ಲವೂ ಮೊದಲೇ ಆಗಿರುವುದು. ಅವರನ್ನು ಕಳುಹಿಸಿ ಬರುವೆನು.

ಮಾ. ಸಂ:––(ತೆರೆಯಕಡೆ ನೋಡಿ.) (ಸ್ವಗತಂ) ಸಂವರಣನು ಜಪವನ್ನು ಪೂರ್ತಿಮಾಡಿ ಇತ್ತಕಡೆ ಬರುವುದಕ್ಕಾಗಿ ತಿರುಗಿದಂತೆ ಕಾಣುವುದು. ಇವನು ಆಶ್ರಮಕ್ಕೆ ಬರದಂತೆ ಮಾಡಬೇಕು. (ಪ್ರಕಾಶಂ) ಮಂತ್ರಿಯೆ, ಹೊರಗೆ ಬರುತ್ತಿರುವರು ಯಾರು?

ಮಂತ್ರಿ:––(ನುಗ್ಗಿ ನೋಡಿ) ವಸಿಷ್ಠರು ಒಬ್ಬಳು ಸುಂದರಿಯೊಡನೆ ಬರುತ್ತಿರುವರು.

ಮಾ. ಸಂ:––(ಸ್ವಗತಂ) ನಮ್ಮ ಮಂತ್ರಿಯೋ ಅಥವಾ ನಿಜವಾಗಿ ವಸಿಷ್ಠನೋ ಮುಂದಾಗಿ ತಿಳಿದ ಹೊರತು, ಅತಿಕ್ರಮಿಸಬಾರದು. (ಪ್ರಕಾಶಂ) ಮಂತ್ರಿಯೇ, ಈ ಅಂಗುಳ್ಯಾಭರಣವನ್ನು ಆಶ್ರಮಪ್ರವೇಶಕ್ಕೆ ಮೊದಲೇ ವಸಿಷ್ಠ [illegible]ಗೆ ಸಮರ್ಪಿಸು.

ಸುಮತಿ:––ಅಪ್ಪಣೆ (ಉಂಗುರವನ್ನು ತೆಗೆದುಕೊಂಡು ಹೊರಡುವನು.)

[ಮಾಯಾವಸಿಷ್ಠನು ಮಾಯಾತಪತಿಯೊಡನೆ ಪ್ರವೇಶಿಸುವನು.

ಸುಮತಿ:––(ದ್ವಾರಪ್ರದೇಶದಲ್ಲಿಯೇ ನಿಂತು.) ಪೂಜ್ಯರಿಗೆ ವಂದನೆ, ನಮ್ಮ[illegible]ನು ಈ ಆಭರಣವನ್ನು ಕೊಟ್ಟಿರುವನು.

ಮಾ. ವಸಿಷ್ಠ:––(ಉಂಗುರವನ್ನು ಸ್ವೀಕರಿಸಿ ನೋಡಿ.) (ಸ್ವಗತಂ) ಇದು ನಮ್ಮ ಪ್ರಭುವಿನದಾಗಿಯೇ ಇರುವುದು. (ಪ್ರಕಾಶಂ) ಆಯುಷ್ಮಂತರೆಲ್ಲಿ?

ಸುಮತಿ:––ಸಭಾಮಂಟಪದಲ್ಲಿರುವರು.

ಮಾ. ವಸಿಷ್ಠ:--(ಮುಂದೆ ಬರುವನು.)

ಮಾ. ಸಂ:--ಪೂಜ್ಯರೆ, ವಂದಿಸುವೆನು. (ಕೈಮುಗಿವನು.)

ಮಾ. ವಸಿಷ್ಠ:-ಆಯುಷ್ಮಂತನೆ, ಮಂಗಳವಾಗಲಿ. ನಿನ್ನ ಅಂಗುಳ್ಯಾಭರಣವನ್ನು ಈ ಸುದತಿಯು ಆದರದಿಂದ ಅಂಗೀಕರಿಸಿದಳು.

ಧೌಮ್ಯ:--ಪೂಜ್ಯರಿಗೆ ವಂದನೆ.

ಮಾ. ವಸಿಷ್ಠ:--ಪ್ರತ್ಯಭಿವಂದನೆ. ಹೋಮವು ಪೂರ್ತಿಯಾಯಿತೆ?

ಧೌಮ್ಯ:-(ಸ್ವಗತಂ) ಸರ್ವಜ್ಞರಾದಿವರು ಹೀಗೆ ಕೇಳಲು ಕಾರಣವೇನು? (ಪ್ರಕಾಶಂ) ಸ್ವಲ್ಪ ಶೇಷವಿರುವುದು.

ಮಾ. ವಸಿಷ್ಠ:--ಈ ತಪತಿಗೆ ವಿನೋದಕ್ಕೆ ಸ್ಥಳವೆಲ್ಲಿ?

ಧೌಮ್ಯ:--(ಸ್ವಗತಂ) ವಸಿಷ್ಠರೇ ನಿರ್ಣಯಿಸಿದ್ದು, ಈಗ ಹೀಗೆ ಕೇಳುವುದು ಸಂಶಯಾಸ್ಪದವಾಗಿದೆ. (ಪ್ರಕಾಶಂ) ಮುಂದೆ ಕಾಣುವುದೇ ಶೃಂಗಾರ ಮಂಟಪದ್ವಾರವು.

ಮಾ. ವಸಿಷ್ಠ:--ತಪತೀದೇವಿಗೆ ತಿಳಿಸಬೇಕಾದ ಬುದ್ಧಿವಾದಗಳನ್ನು ತಿಳಿಸುತ್ತ ಮುಹೂರ್ತದ ವರೆಗೂ ಶೃಂಗಾರಮಂಟಪದಲ್ಲಿರುವೆನು.

ಧೌಮ್ಯ:--ಆಗಬಹುದು. (ಹೊರಡುವನು.)

ಮಾ. ವಸಿಷ್ಠ:--ರಾಜೇಂದ್ರನೆ, ನೀನು ಇಲ್ಲಿಯೇ ಇರು; ನ ತಪನಾತ್ಮಜೆಯೊಡನೆ ಒಳಗೆ ಹೋಗುವೆನು. (ಮಾಯಾತಪತಿಯೊಡನೆ ಹೋಗು

ಮಾ. ಸಂ:--ಮಂತ್ರಿಯೆ, ಸ್ವಲ್ಪ ಇತ್ತ ಬಾ.

ಸುಮತಿ:--ಮಹಾರಾಜನೆ, ಏನಪ್ಪಣೆ!

ಮಾ. ಸಂ:-(ತೆರೆಯಕಡೆ ಕೈತೋರಿಸುತ್ತ.) ಅತ್ತನೋಡು, ಮೊದಲಿಂದಲ ನನಗೆ ಅನೇಕ ವಿಧಗಳಾದ ಕಷ್ಟಗಳನ್ನೊಡ್ಡುತ್ತ ಬಂದುದಲ್ಲದೆ ಈಗ ಕೃತ್ರಿಮದಿಂ ನನ್ನಂತೆಯೇ ವೇಷವನ್ನು ಧರಿಸಿ, ಬರುತ್ತಿರುವ ಮಾಯಾವಿಯನ್ನು ನೋಡು!

ಈ ದೈತ್ಯನು ಋಷಿಗಳನ್ನು ವಂಚಿಸುವುದಕ್ಕಾಗಿ ಬರುತ್ತಿರುವುದರಿಂದ ಬ್ರಹ್ಮ ವರ್ಚಸ್ವಿಗಳಾದ ವಟುಗಳನ್ನು ಉಪವನ ದ್ವಾರದಲ್ಲಿ ಕಾವಲಿಡು.

ಮಂತ್ರಿ:——ಆಗಬಹುದು. (ಹೋಗುವನು.)

ಮೂ. ಸಂ:–(ಸ್ವಗತಂ) ನನ್ನ ಉಪಾಯವು ಸಾರ್ಥಕವಾಯಿತು. ತಪಸ್ಸಿನಿಂದ ಸಿದ್ಧಿಯನ್ನು ಪಡೆದು ಬರುತ್ತಿದ್ದ ಸಂವರಣನನ್ನು ವಟುಗಳು ಉದ್ಯಾನದ ಬಾಗಿಲಲ್ಲಿಯೇ ತಡೆದಿರುವರು.

(ತೆರೆಯಲ್ಲಿ ಪೂರ್ಣಾಹುತಿಯನ್ನು ಸೂಚಿಸುವ ಉಚ್ಚಸ್ವರದಿಂದ ಮಂತ್ರಘೋಷವಾಗುವುದು.)

ಮೂ. ಸಂ:——(ಗಾಭರಿಯಿಂದೆದ್ದು) ಏನಿದು! ರಾಕ್ಷಸ ನಿರ್ವಾಹಕ್ಕಾಗಿಯೇ ಮಂತ್ರಪಠನ ಮಾಡುವಂತಿರುವುದು. (ಹೋಮಶಾಲೆಗೆ ಕೈಮುಗಿದು ಕುಳಿತುಕೊಳ್ಳುವನು.)

ಸುಮತಿ:——(ಧಿಗ್ಗನೆದ್ದು ಮೇಲೆ ನೋಡಿ, ವಿಸ್ಮಯದಿಂದ) ಇದೇನು? ಅಂತರಿಕ್ಷದಿಂದ ವಸಿಷ್ಠರು ದೇವಸುಂದರಿಯೊಡನೆ ಬರುತ್ತಿರುವರು! ಮೊದಲೇ ಬಂದ ವಸಿಷ್ಠರು ಎಲ್ಲಿರುವರು? ಅವರಾರು? ಏನಾದರೂ ಆಗಲಿ, ಈ ವಿಚಿತ್ರವನ್ನು ಧೌಮ್ಯರಿಗೆ ತಿಳಿಸುವೆನು.

(ಪ್ರಕಾಶಂ) ಹರಿಕಾರನೆ, ನೂತನವಾಗಿ ಬರುತ್ತಿರುವ ವಸಿಷ್ಠರ ಆಗಮನವನ್ನು ಪೂಜ್ಯರಿಗೆ ನಿವೇದಿಸಿ ಬಾ.

ಹರಿಕಾರ:——ಅಪ್ಪಣೆ. (ಹೋಗುವನು.)

(ಧೌಮ್ಯನು ಕಲಶೋದಕದೊಡನೆ ಶಿಷ್ಯರಸಹಿತ ಬಂದು ನಿಲ್ಲುವನು. ತಪತಿಯೊಡಗೊಂಡು ವಸಿಷ್ಠರು ಬಂದು ದ್ವಾರದಲ್ಲಿ ನಿಲ್ಲುವರು.)

ಧೌಮ್ಯ:——ಬ್ರಹ್ಮಪುತ್ರರೂ ತಪೋಗರಿಷ್ಠರೂ ಆದ ವಸಿಷ್ಠರಿಗೆ ಸುಖಾಗಮವೆ? (ಪಾದಪ್ರಕ್ಷಾಲನ ಮಾಡುವನು.)

ವಸಿಷ್ಠ:——ಭಗವದನುಗ್ರಹದಿಂದ ಸುಖವೇ ಆಗಿರುವುದು.

ತಪತಿ:——ಪೂಜ್ಯರೆ, ವಂದಿಸುವೆನು. (ಧೌಮ್ಯನಿಗೆ ಕೈಮುಗಿವಳು.)

ಧೌಮ್ಯ:--ಕಲ್ಯಾಣಮಸ್ತು.

ವಸಿಷ್ಠ:--ಧೌಮ್ಯರೆ, ಎಲ್ಲವೂ ಕುಶಲವಷ್ಟೆ?

ಧೌಮ್ಯ:--ಪೂಜ್ಯರೆ, ಪ್ರಾರಂಭದಲ್ಲಿಯೇ ಸಂವರಣನು ಬಂದು ಸಭಾಮಂಟಪದಲ್ಲಿರುವನು. ತಪತಿಯೊಡನೆ ವಸಿಷ್ಠರು ಬಂದು ಶೃಂಗಾರಮಂಟಪದಲ್ಲಿರುವರು. ಉದ್ಯಾನವನದ್ವಾರದಲ್ಲಿ ಸಂವರಣನು ಬೇರೆ ನಿಂತಿರುವನು. ಈಗ ತಾವು ಈ ದೇವಿಯೊಡನೆ ಬಂದಿರುವಿರಿ. ಈಗ ನಾವು ಯಾರನ್ನು ನಿಜವಾದ ವಸಿಷ್ಠ-ರಾಜ, ತಪತಿಯೆಂದ್ದು ತಿಳಿಯಬೇಕೋ ಭ್ರಮೆಯಾಗಿದೆ.

ವಸಿಷ್ಠ:--ತಪೋನಿಧಿಯೇ! ಜ್ಞಾನದೃಷ್ಟಿಯುಳ್ಳ ನೀನೂ ನಾನೂ ಇದರ ನಿಜವನ್ನು ತಿಳಿಯುವುದು ಅತಿಶಯವಲ್ಲ. ಸಕಲರೂ ತಿಳಿಯುವಂತೆ ಮಾಡುವೆನು.

(ಊರ್ಧ್ವಮುಖನಾಗಿ ಕೈಜೋಡಿಸಿ,)

ರಾಗ: ನೋಟ್ ॥ (ಶ್ರೀರಾಮದೂತನೇ ನಮೊ.)

ದ್ವಾದಶಾತ್ಮನೇ ನಮೋ ನಮೋ ॥
ವೇದವಿದಿತ, ಭೇದರಹಿತ, ಸಾಧು ಪೂಜಿತ ।
ಆದಿತ್ಯಾನಂತ ರೂಪನೇ ನಮೋ ॥ ೧ ॥
ಮೋಹಪಾಶಮೋಚನ ನಮೋ ನಮೋ ।
ತುಹಿನ ಹರಣ ಮಿಹಿರ ಕಿರಣ ಪರಮಪಾವನ ।
ಜಯ ಸಂಜ್ಞಾನಾಥ ಜಯ ಸುರೋತ್ತಮ ॥ ದ್ವಾದಶಾತ್ಮ ॥ ೨ ॥

(ದಿವ್ಯವಾದ ಪ್ರಕಾಶವಾಗುವುದು. ತೇಜಃಪುಂಜನಾದ ಸೂರ್ಯನು ಪ್ರತ್ಯಕ್ಷನಾಗುವನು.).

ವಸಿಷ್ಠ-ಧೌಮ್ಯರು:--ವಿನಯದಿಂದ (ಕೈಜೋಡಿಸಿ,)

"ಯನ್ಮಂಡಲಂ ಗೂಢಮತಿಪ್ರಬೋಧಂ । ಧರ್ಮಸ್ಯ ವೃದ್ಧಿಂ ಕುರುತೇ ಜನಾನಾಮ್ ।
ಯತ್ಸರ್ವಪಾಪಕ್ಷಯಕಾರಣಂ ಚ । ಪುನಾತು ಮಾಂ ತತ್ಸವಿತುರ್ವರೇಣ್ಯಮ್ ॥"
"ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ । ನಾರಾಯಣಃ ಸರಸಿಜಾಸನಸನ್ನಿವಿಷ್ಟಃ ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥"
"ಸಶಂಖಚಕ್ರಂ ರವಿಮಂಡಲೇ ಸ್ಥಿತಂ । ಕುಶೇಶಯಾಕ್ರಾಂತಮನಂತಮಚ್ಯುತಮ್ ।
ಭಜಾಮಿ ಬುದ್ಧ್ಯಾ ತಪನೀಯಮೂರ್ತಿಂ । ಸುರೋತ್ತಮಂ ಚಿತ್ರವಿಭೂಷಣೋಜ್ಜ್ವಲಮ್ ॥"

ಸೂರ್ಯ:--ಪ್ರಿಯರೆ, ನಿಮ್ಮಾ ಸ್ತುತಿಗೆ ಮೆಚ್ಚಿದೆನು; ನಿಮ್ಮ ಉದ್ದೇಶವನ್ನು ತಿಳಿದೆನು; ಇದೊ ನಿಮ್ಮೆಲ್ಲರಿಗೂ ಜ್ಞಾನದೃಷ್ಟಿಯನ್ನು ಕೊಟ್ಟಿರುವೆನು; ಇದರಿಂದ ಈಗಿನ ಭ್ರಮೆಯು ನಿರಸನವಾಗುವುದಲ್ಲದೆ, ಮಾಯಾವೇಷಧಾರಿಗಳನ್ನು ತಿಳಿಯಲೂ ಸಾಧ್ಯವಾಗುವುದು.

ಧೌಮ್ಯ:--(ಸಂತೋಷದಿಂದ)

ಕಂದ॥ ಅನುಮಾಸಂಘಟಿಸಲ್ಕೀ । ಕಮಲಾಪ್ತನ ದಿವ್ಯದರ್ಶನಂ ತಾನದರಿಂ ॥
ಭ್ರಮೆ ನಿರಸನಮಾಯ್ತೆನ್ನಾ । ಶ್ರಮಮುಂ ಸಾರ್ಥಕಮೆನಿಸಿತು ಸಫಲಂ ಜನ್ಮಂ ॥

ಪರಮಪಾವನನೆ, ಪದ್ಮಸಖನೆ, ಪೂಜ್ಯರಾದ ವಸಿಷ್ಠರೊಡನೆ, ವಿವಾಹಮಂಟಪಕ್ಕೆ ಚಿತ್ತೈಸಿ, ನಿನ್ನ ಭಕ್ತಸಂದೇಹವನ್ನು ಸಂತೋಷಪಡಿಸಬೇಕೆಂದು ಪ್ರಾರ್ಥಿಸುವೆನು.

ಸೂರ್ಯ:--ಆಗಬಹುದು. (ಎಲ್ಲರೊಡನೆ ಸಭೆಗೆ ಬರುವನು.)

ಧೌಮ್ಯ:--ಮಂತ್ರಿ-ಸುಮತಿ, ಉದ್ಯಾನದಲ್ಲಿರುವ ನಮ್ಮ ಸಂವರಣರಾಜನನ್ನು ಕರೆದುಕೊಂಡು ಬಾ.

ಸುಮತಿ:--ಅಪ್ಪಣೆ (ಹೋಗಿ, ರಾಜನೊಡನೆ ಬರುವನು.)

ಸಂವರಣರಾಜ:--ಪೂಜ್ಯರೆಲ್ಲರಿಗೂ ನಮಸ್ಕರಿಸುವೆನು.

ಸೂರ್ಯ, ವಸಿಷ್ಠ, ಧೌಮ್ಯ:--ಮಂಗಳಮಸ್ತು! ಕಲ್ಯಾಣಮಸ್ತು!! ಅಭಿವೃದ್ಧಿರಸ್ತು!!!

ಸಂವರಣ:--ವಿಮಲಾತ್ಮರ ಸಂದರ್ಶನದಿಂದ ಧನ್ಯನಾದೆನು.

ಧೌಮ್ಯ:--ಮಹಾರಾಜನೆ, ಸುರೋತ್ತಮನೂ ನಿನ್ನ ಮಾವನೂ ಆದ ಶಾತ್ಮನೇ ಸಾಕ್ಷಾತ್ಕರಿಸಿ ಅನುಗ್ರಹಿಸಿರುವುದರಿಂದ, ನೀನು ಧನ್ಯನೇ ಸರಿ. ವಿವಾಹವೇದಿಕೆಯನ್ನೇರು.

ಸಂವರಣ:--ಪೂಜ್ಯರ ಅಪ್ಪಣೆಯಂತೆ ನಡೆಯುವೆನು. (ವೇದಿಕೆಯ ಮೇಲೆ ಹತ್ತಿ ನಿಲ್ಲುವನು.)

ಸುಮತಿ:—ಪೂಜ್ಯರೆ, ವಂದಿಸುವೆನು. ತಪನದೇವನ ಅನುಗ್ರಹದಿಂದ ಕ್ಷಣಕಾಲ ಲಭಿಸಿದ ದಿವ್ಯದೃಷ್ಟಿಯಿಂದ ಸಭಾಮಂಟಪದಲ್ಲಿ ಸಂವರಣರಾಜನ ವೇಷದಿಂದಿದ್ದವನೂ, ಶೃಂಗಾರಮಂಟಪದಲ್ಲಿ ತಪತೀವಸಿಷ್ಠರ ವೇಷದಿಂದಿದ್ದವರೂ ರಾಕ್ಷಸರೆಂದು ತಿಳಿಯಿತು. ಆದರೆ ಅವರು ಈಗ ಇಲ್ಲದಿರುವ ಕಾರಣವೇನೋ, ಅವರಾರೋ ತಿಳಿಯಲಪೇಕ್ಷಿಸುವೆನು.

ಧೌಮ್ಯ:—ಮಂತ್ರಿವರ್ಯನೆ, ಇನ್ನೊಂದು ಕ್ಷಣದಲ್ಲಿ ಇವರ ಸ್ವರೂಪ ಜ್ಞಾನವೂ ಉದ್ದೇಶವೂ ರೂಪಾಂತರ ಪ್ರಯೋಜನವೂ ತಿಳಿದುಬರುವುವು. ಸಾವಧಾನದಿಂದಿರು.

(ತೆರೆಯಲ್ಲಿ ಕೋಲಾಹಲವಾಗುವುದು.)

ಮಂತ್ರಿ:—(ಗಾಬರಿಯಿಂದ,) ಪೂಜ್ಯರೆ, ಇದೇನೋ ಕೋಲಾಹಲವು?

ವಸಿಷ್ಠ:—ದುಷ್ಟರಾದ ಮಾಯಾವಿ, ಚಿತ್ರಸೇನ ಮತ್ತು ಅವನ ಮಂತ್ರಿ ಸಹ ಬರುತ್ತಿರುವರು. ಬರಲಿ, ಭಯವೇನು? (ಚಿತ್ರಸೇನ, ಮಾಯಾವಿ, ಮಂತ್ರಿ ಸಹ ಭಯಂಕರ ವೇಷದಿಂದ ಬರುವರು.)

ಚಿತ್ರ:—(ಕ್ರೋಧತಾಮ್ರಾಕ್ಷನಾಗಿ ಸಂವರಣನ ಮುಂದೆ ನಿಂತು,)

ರಾಗ: (ನಡೆ ನಡೆ ಬೇಗನೇ ಕುರಂಗ.)

ನಿಲ್ಲು ನಿಲ್ಲು ನೀಚನೆ, ಫಡ ನಿಲ್ಲು ನಿನ್ನ ಬಿಡುವೆನೇ।
ನೋಡು ಯನ್ನಧಟನೆ, ನಾ ಬೀಳಹೊಯ್ವೆ ನಿನ್ನನೆ॥
ಕಡಿದು ಕೆಡಹಿ ಬಿಡುವೆ ನಾಂ,। ಫಡ ನೀಚ ನಿನ್ನನೀಕ್ಷಣಂ॥
ಒಡಲು ಬಗೆದು ರುಧಿರಮಂ, ಕೊಡುವೆ ಭೂತತೃಪ್ತಿಗಾಂ॥

ಮಾಯಾವಿ:—

ಒಂದು ಪೆಟ್ಟಿನಿಂದಲೇ, ಪಂದೆಗಳನು ಕೆಡಹುತ್ತೆ।
ಹಿಂದೆ ಗೈದ್ದ ಪಂಥಮಂ, ಮುಂದೆ ಮಾಳ್ಪೆ ಸಫಲಮಂ॥ ೧॥

ಚಿತ್ರಸೇನನ ಮಂತ್ರಿ:--

ಬಾಯಿಬಡುಕರೆನಿಸಿದಿವರ ಆಯುಗೆಡಿಸಿ ಬಿಡುವೆ ವರ ।
ಆಯುಧಕೆ ಕೊಡುವೆ ಬಲಿಯ ನೀಯುವೆನರಸಗೀ ಸತಿಯ ॥
ನಿಲ್ಲು ನಿಲ್ಲು ॥ ೩ ॥

ಸಂವರಣ:--(ರೋಷದಿಂದ,) ನಿಲ್ಲಿರಿ, ದುಷ್ಟರೆ, ಸದ್ದಿಲ್ಲದೆ ನಿಲ್ಲಿರಿ; ಬರುವೆನು. (ವಸಿಷ್ಠರ ಕಡೆಗೆ ತಿರುಗಿ,) ಪೂಜ್ಯರೆ, ಅಪ್ಪಣೆಯನ್ನಿತ್ತರೆ ಈ ಮದಾಂಧರನ್ನು ನಿಗ್ರಹಿಸಿ ಬರುವೆನು.

ವಸಿಷ್ಠ:--ಆಯುಷ್ಮಂತನೆ, ಇದು ಯುದ್ಧಕ್ಕೆ ಸಮಯವಲ್ಲ. ಮತ್ತು ಈ ಕ್ಷುದ್ರಭೃತ್ಯರು ಯುದ್ಧಕ್ಕೆ ನಿಲ್ಲುವಷ್ಟು ಸಮರ್ಥರೂ ಅಲ್ಲ. ಮೇಲಾಗಿ, ತಮೋ ವಿಧ್ವಂಸಕನೂ ದುಷ್ಟನಿಗ್ರಹ ಶಿಷ್ಟಸಂರಕ್ಷಕನೂ ಆದ ಭಗವಾನ್ ದಿನ ನಾಥನೇ ಇಲ್ಲಿ ಪ್ರಸನ್ನೀಕರಿಸಿರುವನು. ನೀನು ನಿಶ್ಚಿಂತೆಯಿಂದಿರು.

ಸಂವರಣ:--ಪೂಜ್ಯರೆ, ಇವರು ದೇಹದಲ್ಲಿ ಶಕ್ತಿಯಿಲ್ಲದಿದ್ದರೂ ಅಹಂಕಾರಿಗಳಾಗಿರುವರು.

ಮಾಯಾವಿ:--(ಕ್ರೋಧದಿಂದ) ಅಧಿಕ ಪ್ರಸಂಗಿಯೇ! ಏನನ್ನು ಬಗಳುವೆ? ಎಚ್ಚರಿಕೆಯಿಂದ ಮಾತಾಡು, ಕ್ಷಣಮಾತ್ರದಲ್ಲಿ ನಿನ್ನ ತಲೆಯು ಭೂಮಿಗೆ ...ರುಳುವುದೆಂದು ತಿಳಿದಿರು!

(...ದೆಯನ್ನೆತ್ತಿಕೊಂಡು ಮೇಲೆ ಬೀಳಬರುವನು. ಚಿತ್ರಸೇನ-ಮಂತ್ರಿ ಸಹ ಹಿಂದೆ ಬರುವರು.)

ವಸಿಷ್ಠ:--(ಕೈಯನ್ನು ಮೇಲಕ್ಕೆತ್ತಿ ರಾಕ್ಷಸರನ್ನು ನೋಡುತ್ತ 'ಹುಂ'ಕಾರಮಾಡು... ಚಿತ್ರಸೇನ, ಮಾಯಾವಿ, ಚಿತ್ರಸೇನನ ಮಂತ್ರಿ ಇವರು ಎತ್ತಿದ ಕೈ ಎತ್ತಿದಂತೆಯೇ ಸ್ತಂಭಿತ...ಲ್ಲವರು.)

ಸೂರ್ಯ:--ತಪೋಧನರೆ, ಸುಮುಹೂರ್ತವಾಗಿರುವುದು. (ರಾಜನನ್ನು... ಆಯುಷ್ಮಂತನಾದ ರಾಜನೆ, ಪವಿತ್ರಳಾದ ಈ ತಪತಿಯನ್ನು ಪರಿಗ್ರಹಿಸಿ ...ಹರ್ಷನಾಗಿರು.

(...ತಿಯ ಕೈಯನ್ನು ಸಂವರಣನ ಹಸ್ತದಲ್ಲಿರಿಸುವನು. ರಾಜನು ತಪತಿಯ ಕೈಹಿಡಿದು ನಿಲ್ಲುವನು.)

ಧೌಮ್ಯ, ವಸಿಷ್ಠ, ಮಂತ್ರಿ, ಪ್ರಮುಖರು:--ಪತ್ನೀ ಸಮೇತನಾದ ಸಂವರಣ ಮಹಾರಾಜನಿಗೆ ವಿಜಯವು! ಅನುರೂಪ ಪತಿಯನ್ನು ಪಡೆದ ತಪತೀ

ಏಗೆ ಶೋಭನವು! ಭಕ್ತವತ್ಸಲನಾದ ದಿನನಾಥನಿಗೆ ಸಹಸ್ರ ಧನ್ಯವಾದಗಳು!! ಪ್ರಜಾಸಮುದಾಯಕ್ಕೆಲ್ಲ ಸುಕ್ಷೇಮವು!!!

ತಥಾಸ್ತು! ತಥಾಸ್ತು!! ತಥಾಸ್ತು!!! (ಎಲ್ಲರೂ ಕರತಾಡನಮಾಡುವರು.)

ಸೂರ್ಯ:--ಎಲ್ಲರಿಗೂ ಮಂಗಳವಾಗಲಿ. (ಅದೃಶ್ಯನಾಗುವನು)

ವಸಿಷ್ಠ:--ಸಮಸ್ತ ಕಲ್ಯಾಣಗುಣಪೂರ್ಣನೂ ಮಂಗಳಪ್ರದನೂ ಆದ ಭಗವಂತನನ್ನು ಕುರಿತು ಮಂಗಳಪಾಡುವ. (ಎಲ್ಲರೂ ಮಂಗಳವನ್ನು ಹೇಳುವರು.)

ರಾಗ॥ (ಪರಿಪಾಲಿಸು ನೀಂ.)

ಜಯಮಂಗಳಂ ಶ್ರೀ ರಘುಕುಲಾಬ್ಧಿ ಚಂದ್ರ।
ಭವಂತು ತೇ ಸದಾ ॥ ಪ ॥
ಕ್ಷೀರಶರಧಿಶಯನ, ಸುಗುಣಾಭರಣ, ಕಮಲಾರಮಣ, ರಘುವರ।
ಮುರದಾನವಮದಭಂಜನ ಶ್ರೀ ॥
ತರುಣಿಯೊಡನೆ, ಧರಣಿಪಾಲನ ಕರುಣದಿಂದ ಪೊರೆಯೈ ಸಂತತ ॥
ಜಯ ॥ ೧ ॥
ಪಂಕಜಸಖನಿಭಗಾತ್ರ, ಶಂಕರವಿನುತ ಕಳಂಕರಹಿತ, ಸುರನುತ।
ಪಂಕಜಲೋಚನ ಮಾಧವ ಶ್ರೀ ॥
ಪಂಕಜಾಸ್ಯ, ಪಾಹಿಸತತ, ಕೌಸ್ತುಭಾಂಕ ಸುಚಾರುವಕ್ಷ ॥
ಜಯ ॥
ಕೌಶಿಕಮುಖಪರಿಪಾಲ-ದಶರಥಬಾಲ, ದಶಶಿರಕಾಲ, ಸುಶ್ಯಾಮ।
ಪಶುನಾಯಕ ಕಾರ್ಮುಕ ಭಂಜಕ ಶ್ರೀ ॥
ಶೇಷಶೈಲ, ವಾಸತ್ರೀಶ, ದೋಷನಾಶ, ಜಾನಕೀಶ ॥ ಜಯ ॥ ೩

ಸರ್ವೇ ಜನಾಃ ಸುಖಿನೋ ಭವಂತು.

...ಣಂ

...SH PRESS, MANGALORE. S. K.

ಸಂಗತಿಗಳಲ್ಲಿ, ಕಥೆಯ ಅಥವಾ ಅದರ ಯಾವುದೊಂದು ಭಾಗದ ಮೂಲವು ಎಲ್ಲಿದೆಯೆಂಬುದನ
ಕುರಿತು ಗ್ರಂಥಕರ್ತೃ

(೬) … ಷವಾಗಿ
ಗಮನ ಕೊಡಲ್ಪ

(೭) … ಟದ
ಬಗ್ಗೆ ಕಳುಹಿಸ … ರುಳ್ಳ
ಒಂದೊಂದು ವು … ಾದು
ದಾಗಿರುವುದು.

(೮) … ುಳ್ಳು
ದಲ್ಲವೆಂದು ಪ … ಕೊಡ
ಲ್ಪಡಲಿಕ್ಕಿಲ್ಲ.

(೯) … ವಾ
ಗಿಯೂ ಇರಬೇಕ … ರೆಯ
ಲ್ಪಟ್ಟಿರಬೇಕು.

(೧೦) … ಟ್ಟು
ನಾಟಕದೊಂದಿಗೆ … ಯೂ
ಕರ್ತೃವು ಇಟ್ಟುಕ

(೧೧) … ಾಷೆ
…ಲ್ಲಿ ಮೇಲಾಟ

… ಲ್.

…ಣವಿಲಾ

…ಹಾಲ್,

…ಗೋಸ್ಕು … ಳು.

ವಿ. ಸ … ರ್ತೃ
…ಡೆಯುಲು

ಎಡಿಟರ್. ಸತೀಹಿತೈಷಿಣೀ + ಕರ್ಣಾಟಕ ನಂದಿನಿ.

"ಸತೀಹಿತೈಷಿಣೀ ಸನ್ಮಾನಗ್ರಂಥಾವಳಿ."

ಭಗವದನುಗ್ರಸುಗ್ರಹ, ಮಾತೃವಾತ್ಸಲ್ಯ, ಭಾಷಾಭೂಷಣರ ಪ್ರೋತ್ಸಾಹಗಳ ಬಲದಿಂದ ಸತೀಹಿತೈಷಿಣೀ ಗ್ರಂಥಮಾಲೆಯಲ್ಲಿ ಸನ್ಮಾನಗ್ರಂಥಾವಳಿಯೆಂಬ ಹೆಸರಿನ ಮತ್ತೊಂದು ಪುಸ್ತಕಾವಳಿಯು ಇದೇ ಲಿಶ್ವಯುಜದಿಂದ ಪ್ರಾರಂಭಿಸಲ್ಪಟ್ಟಿರುವನು. ಈ ಗ್ರಂಥಾವಳಿಯಲ್ಲಿ ವಾಙ್ಮಯಾಭಿವೃದ್ಧಿಗೂ, ಜನಮನೋರಂಜನೆಗೂ ಯಥೋಚಿತ ಸಹಕರಿಸುವಂತಹ ನಾಟಕಗಳು ವರ್ಷಕ್ಕೆ ನಾಲ್ಕರಂತೆ ಪ್ರಸಿದ್ಧಿಯಾಗಿ ಸತೀಹಿತೈಷಿಣೀ ಚಂದಾದಾರರಿಗೆಲ್ಲಾ ಸುಲಭ ಕ್ರಯಕ್ಕೆ ದೊರೆಯುವುವು. ಪ್ರತಿ ವರ್ಷಾಂತ್ಯದಲ್ಲಿಯೂ ಒಂದು ಯಕ್ಷಗಾನ ಪ್ರಬಂಧವು ಪ್ರಕಟವಾಗುವುದು. ಭಾಷಾಭಿಮಾನಿಗಳು ಪ್ರೋತ್ಸಾಹಿಸಬಹುದು.

ಇದೇ ಕಾಳಯುಕ್ತಿ ಸಂವತ್ಸರ ಪುಷ್ಯ ಮಾಸದಲ್ಲಿ ಶ್ಯಮಂತಕೋಪಾಖ್ಯಾನ—(**ಶ್ರೀ ಕೃಷ್ಣ ಕಲ್ಯಾಣಮಂಜರಿ**) ನಾಟಕವೂ ಸಿದ್ಧಾರ್ಥಿ ಸಂ॥ ಚೈತ್ರದಲ್ಲಿ ವಿವೇಕೋದಯವೆಂಬ ರೂಪಕವೂ ಆಷಾಡದಲ್ಲಿ ಪ್ರಜ್ಞಾಸ್ವಯಂವರ ನಾಟಕವೂ ಪ್ರಸಿದ್ಧವಾಗುವುವು.

ವಿಳಾಸ:— ಕಾರ್ಯದರ್ಶಿ,

"ಹಿತೈಷಿಣೀ" ಮಾತೃಮಂದಿರಂ

ನಂಜನಗೂಡು. (ಮೈಸೂರ

ಮಂಗಳೂರಿನ ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಮುದ್ರಣವಾದುದು.